# ಅಪರಂಜಿ



ತಿಳಿನಗೆಯ ಕಾರಂಜಿ

ಆಗಸ್ಟ್ - 2015



'ಅಶೋಕ ವೃಕ್ಷದಡಿ ಸಶೋಕ ಸೀತೆಯನು ಕಂಡೆ
ಅಶೋಕ ಚಕ್ರದಡಿ ಸಶೋಕ ಜನತೆಯನು ಕಾಣುತಿಹೆ'

# ಅಪರಂಜಿ

ತಿಳಿನಗೆಯ ಕಾರಂಜಿ



ಸಂಪುಟ 32
ಸಂಚಿಕೆ - 11
ಆಗಸ್ಟ್ - 2015

**ಸಂಪಾದಕ ಮಂಡಳಿ**

**ಸಂಪಾದಕರು**
ಶ್ರೀ ಎಂ. ಶಿವಕುಮಾರ್

**ಉಪ ಸಂಪಾದಕರು**
ಶ್ರೀ ಬೇಲೂರು ರಾಮಮೂರ್ತಿ

**ಸದಸ್ಯರು**
ಶ್ರೀ ಎಚ್.ಎನ್. ಆನಂದ
ಶ್ರೀ ಎಚ್. ಗೋಪಾಲಕೃಷ್ಣ

**ಆಡಳಿತ ಮಂಡಳಿ**

**ಮ್ಯಾನೇಜಿಂಗ್ ಟ್ರಸ್ಟಿ**
ಶ್ರೀ ಎಂ. ಶಿವಕುಮಾರ್

**ಟ್ರಸ್ಟಿಗಳು**
ಶ್ರೀ ಬೇಲೂರು ರಾಮಮೂರ್ತಿ
ಶ್ರೀ ವಿ.ಆರ್. ನಾಥ್
ಶ್ರೀ ಎಚ್.ಎನ್. ಆನಂದ
ಶ್ರೀ ಸಿ.ಆರ್. ಸತ್ಯ
ಶ್ರೀ ಕೆ. ರವೀಂದ್ರ ರಾವ್

**ಗೌರವ ಸಲಹೆಗಾರರು**
ಶ್ರೀ ಆರ್. ಶೇಷಗಿರಿರಾವ್

## *ಈ ಸಂಚಿಕೆಯಲ್ಲಿ.....*

| | | |
|---|---|---|
| ಅಪರಂಜಿ ಕಿಡಿ | **ಪ್ರಕಾಶ್** | 2 |
| ನಮ್ಮ ನಿಮ್ಮಲ್ಲಿ | **ಶಿವಕುಮಾರ್** | 3 |
| ಗಾಂಧಿ ತಾತ ನಕ್ಕಾಗ | **ಸಹನಾ ಪ್ರಸಾದ್** | 8 |
| ಸಿಂಗ್ಲೀಷ್ ಲಾ | **ರೇಖಾ ಹೆಗಡೆ ಬಾಳೇಸರ** | 11 |
| ಐಟಿ ಮಂದಿ ಎಂಬ....... | **ಸೂರಿ ಹಾರ್ದಳ್ಳಿ** | 14 |
| ಅವಳು ತಾಯಿ | **ಬೇಲೂರು ರಾಮಮೂರ್ತಿ** | 18 |
| ಕೊರವಂಜಿ ಪದಬಂಧ | **ವಿದ್ಯಾ ವಿ. ಹಾಲಭಾವಿ** | 22 |
| ಇಂತು ಆಷಾಢದ ಅಧಿಕ.. | **ಶರತ್ ಕಲ್ಕೋಡ್** | 23 |
| ತುಂತುರು | **ದಂನಾಳ** | 28 |
| ಸಂಗೀತ ಕಛೇರಿ.... | **ಎಚ್. ಗೋಪಾಲಕೃಷ್ಣ** | 29 |
| ಮದುವೆಯೆಂಬ...... | **ಎಚ್.ಆರ್. ಹನುಮಂತ ರಾವ್** | 32 |
| ಕಣ್ಮರೆಯಾಗಲಿರುವ... | **ಪ್ರಶಾಂತ ಅಡೂರ** | 39 |

**ಮುಖಪುಟ ವ್ಯಂಗ್ಯಚಿತ್ರ - ಗುಜ್ಜಾರ್**

**ಚಂದಾ ವಿವರ:**
**ಬಿಡಿ ಪ್ರತಿ: ರೂ. 10/-**
**ವಾರ್ಷಿಕ ಚಂದಾ: ರೂ. 100/-**
**ಹತ್ತು ವರ್ಷದ ಚಂದಾ: ರೂ. 750/-**

ಸಂಪರ್ಕ ಸಮಯ:
ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ

ಚಂದಾ ಹಣದ ಚೆಕ್/ಡ್ರಾಫ್ಟ್‌ಗಳನ್ನು ಕೊರವಂಜಿ ಅಪರಂಜಿ ಟ್ರಸ್ಟ್ ಹೆಸರಿಗೆ ನಮೂದಿಸಿ ಈ ಕೆಳಕಂಡ ವಿಳಾಸಕ್ಕೆ ಕಳಿಸಿ.
ಮನಿ ಆರ್ಡರ್ ಸ್ವೀಕರಿಸಲಾಗುವುದಿಲ್ಲ.

ಪ್ರಕಾಶಕರು: ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ, ಬೆಂಗಳೂರು - 560 003. email: koravanji42@hotmail.com

ಸಂಪರ್ಕ ವಿಳಾಸ: **ಶ್ರೀ ಬೇಲೂರು ರಾಮಮೂರ್ತಿ**, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ, ನಂ. 96, 'ಸುಕೇಶವ' ಎರಡನೇ ಅಡ್ಡರಸ್ತೆ, 20ನೇ ಮುಖ್ಯರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್, ಬೆಂಗಳೂರು - 560 068. ದೂರವಾಣಿ: 080-26688488. email: belururamamurthy@gmail.com

*ಮುದ್ರಣ: ರವಿ ಗ್ರಾಫಿಕ್ಸ್ - ಅಕ್ಷರ ಜೋಡಣೆ: ಒಮೇಗಾ ಲೇಸರ್‌ಟೆಕ್*

# ಅಪರಂಜಿ ಕಿಡಿ

● **ಪ್ರಕಾಶ್**



ಲೋಕಾಯುಕ್ತ ತನಿಖೆಗೆ ತಾಕೀತು – ಶೀರ್ಷಿಕೆ

***● 'ಬೇಲಿಯೇ ಎದ್ದು'... ಎಂದು ಬರೆದೂ ಬರೆದೂ ಅಪರಂಜಿ ಸುಸ್ತಾದಳಂತೆ !!***

★★★

ಸರ್ಕಾರಿ ಶಾಲೆಗಳಲ್ಲಿ ಉಪನ್ಯಾಸಕ್ಕೆ ತಜ್ಞರಿಗೂ ಅವಕಾಶ – ಹೇಳಿಕೆ

***● ನನಗೂ ಚಾನ್ಸ್ ಸಿಗುತ್ತದೆಯೇ ಎಂದು ಅಪರಂಜಿ ಕುಹಕವಾಡಿದಳಂತೆ !!***

★★★

ಅಧಿಕಾರಿಗಳು ಸತ್ತಿದ್ದಾರೆಯೇ? – ಮೇಲ್ಮನೆಯಲ್ಲಿ ಶ್ರೀ ಈಶ್ವರಪ್ಪ

***● ಹರ ಹರಾ.. !!***

★★★

ಮಹಿಳಾ ವಿದ್ಯಾಲಯದಲ್ಲಿ ಅವ್ಯವಹಾರ – ಲೋಕಾಯುಕ್ತ

***● ಹಾಗಲ ಕಾಯಿಗೆ ಬೇವಿನ ಕಾಯಿ...... !!***

★★★

ಕಡಿಮೆ ಮದ್ಯ ಮಾರಿದರೆ 20 ಲಕ್ಷ ದಂಡ – ಸುದ್ದಿ

***● ನಗರದ ವೈದ್ಯರೆಲ್ಲ ನಡುಗಿದರಂತೆ !!***

★★★

ಶಾಲೆ, ಹಾಸ್ಟೆಲ್‌ಗಳಿಗೆ ಹಾಸಿಗೆ, ದಿಂಬು ಖರೀದಿಯಲ್ಲಿ ಅಕ್ರಮ; ಧರಣಿ – ಪತ್ರಿಕೆ

***● ಕೆಲವರ ನಿದ್ದೆ ಕೆಡುವಂತೆ ಕಾಣುತ್ತದೆ !!***

★★★

ಲೋಕಾಯುಕ್ತ ಪ್ರಕರಣ; ಮಾಹಿತಿ ಕೇಳಿದ ರಾಜ್ಯಪಾಲರು – ಸುದ್ದಿ

***● ಕೋಟೆ ಸೂರೆ ಹೋದಮೇಲೆ..... !!***

★★★

ಚೀನಾಕ್ಕೆ ಭಾರತದಿಂದ *'Mouth Freshener'* ರಫ್ತು – ಸುದ್ದಿ

***● 'ಚೀನಾ ನಾಯಕರ ಬಾಯಿ ಸ್ವಚ್ಛವಾಗಿಲ್ಲ' ಅಂತ ಅಪರಂಜಿ ನಕ್ಕಳಂತೆ !!***

★★★

## "ನಮ್ಮ ನಿಮ್ಮಲ್ಲಿ"

**ತೇ**ಜಸ್ವಿ ಅವರು ತಮ್ಮ ಮಾಯಾಲೋಕ ಪುಸ್ತಕವನ್ನು ಬರೆಯುತ್ತಿದ್ದಾಗ, ''ದಿನನಿತ್ಯ ಜೀವನದಲ್ಲಿ ಪರಸ್ಪರ ಸಂಬಂಧವೇ ಇಲ್ಲದಂತೆ ತೋರುವ ಘಟನೆಗಳು ಹೇಗೆ ಬಹು ಸೂಕ್ಷ್ಮವಾಗಿ ಸರಪಳಿಯಂತೆ ಒಂದಕ್ಕೊಂದು ಬೆಸೆದುಕೊಂಡಿರುವುದನ್ನು ಗಮನಿಸುವುದೇ ಒಂದು ಮೋಜಿನ ಸಂಗತಿ'' ಎಂದು ಹೇಳುತ್ತಿದ್ದರು. ಆ ಕಾದಂಬರಿಯೂ ಸಹಾ ಘಟನಾವಳಿಗಳನ್ನು ಬೆಸೆಯುವ ದಾರಿಯಲ್ಲೇ ಹರಿದುಬಂದಿತ್ತು. ಮೊನ್ನೆ ಈ ಮಾತಿನ ಸತ್ಯದ ಅನುಭವ ನನಗಾಯಿತು. ಅದಾದದ್ದು ಹೀಗೆ.

ಒಂದು ಸುಂದರ ಬೆಳಗ್ಗೆ ನನ್ನ ಅಕ್ಕನ ಮಗಳು ಪುಟ್ಟಿ ಮನೆಗೆ ಬಂದಳು. ಅವಳ ಕಾರಿನ ಹಿಂದೆ ಒಂದು ಟೆಂಪೋ ಬಂದು ನಿಂತಿತು. ''ಅಮ್ಮ, ತನ್ನ ಜೀವನದುದ್ದಕ್ಕೂ ಸಂಗ್ರಹಿಸಿದ ಅಮೂಲ್ಯ ಪುಸ್ತಕಗಳು ಇವು. ಇವುಗಳಿಂದ ಪ್ರಯೋಜನ ಪಡೆಯುವಂತಹ ಯಾವುದಾದರೊಂದು ಅರ್ಹ ಸಂಸ್ಥೆಗೆ ಇವುಗಳನ್ನು ಒಪ್ಪಿಸಿಬಿಡು'' ಅಂತ ಹೇಳುತ್ತಾ ಟೆಂಪೋವಿನಲ್ಲಿ ತಂದಿದ್ದ ಸುಮಾರು ಒಂದೂವರೆ ಸಾವಿರ ಪುಸ್ತಕಗಳನ್ನು ನನ್ನ ವರಾಂಡಾದಲ್ಲಿ ಜೋಡಿಸಿಟ್ಟು ಬಾಯ್ ಹೇಳಿ ಹೊರಟುಹೋದಳು. ನನ್ನ ಬಳಿಯಲ್ಲಿಯೂ ಇದ್ದ ಅನೇಕ ವಿಶ್ವಕೋಶಗಳು, ಕರ್ನಾಟಕ ಭಾರತ ಕಥಾಮಂಜರಿಗೆ ಅರಾಸೇ ಬರೆದ ತಾತ್ಪರ್ಯಗಳ ಮಹದ್ಗ್ರಂಥ, ಇವೇ ಮೊದಲಾಗಿ ಅತ್ಯಮೂಲ್ಯವಾದ, ಯಾವುದಾದರೊಂದು ವಿದ್ಯಾಸಂಸ್ಥೆಯ ಪುಸ್ತಕ ಭಂಡಾರದಲ್ಲಿ ಇರಬೇಕಾದಂತಹ ಒಂದು ಸಾವಿರ ಪುಸ್ತಕಗಳನ್ನು ಆರಿಸಿ ದಾನ ಕೊಡುವ ಉದ್ದೇಶದಿಂದ ತೆಗೆದು ಪಕ್ಕಕ್ಕಿಟ್ಟಿದ್ದೆ. ಈಗ ಈ ಪುಸ್ತಕಗಳೂ ಆ ಗುಂಪಿಗೆ ಸೇರಿದವು ಯಾರಿಗೆ ಕೊಡುವುದು ಎಂಬ ಪ್ರಶ್ನೆಯನ್ನು ಗೆಳೆಯ ನಾಗೇಂದ್ರನೊಂದಿಗೆ ಹಲವು ದಿನಗಳ ಹಿಂದೆಯಷ್ಟೆಯೇ ಹಂಚಿಕೊಂಡಿದ್ದೆ. ಕಾಕತಾಳೀಯವಾಗಿ ಪುಟ್ಟಿ ಬಂದು ಹೋದ ಮಾರನೆಯ ದಿನ ಬೆಳಗ್ಗೆ ನಾಗೇಂದ್ರ ಮನೆಗೆ ಬಂದ. ಅವನೊಂದಿಗೆ ಬಿಳೀ ಸಫಾರಿ ಧರಿಸಿದ್ದ ಮಹನೀಯರೊಬ್ಬರು ಬಂದಿದ್ದರು. ''ಇವರು ಭೀಮಣ್ಣ ಅಂತ. ಹರಿಹರಪುರದಲ್ಲಿರುವ ಪ್ರಬೋಧಿನೀ ಗುರುಕುಲಮ್ ಟ್ರಸ್ಟ್‌ನ ಕಾರ್ಯದರ್ಶಿಗಳು. ಅವರ ವಿದ್ಯಾಸಂಸ್ಥೆಗೆ ನಿಮ್ಮ ಅಮೂಲ್ಯ ಪುಸ್ತಕಗಳನ್ನು ದಾನ ಮಾಡಿದರೆ ಅವುಗಳು ಸದ್ವಿನಿಯೋಗವಾಗುತ್ತವೆ'' ಎಂದ ನಾಗೇಂದ್ರ. ಭೀಮಣ್ಣನವರು ಪುಸ್ತಕಗಳನ್ನೆಲ್ಲಾ ನೋಡಿ ಬಹು ಸಂತೋಷಪಟ್ಟರು. ಪುಸ್ತಕಗಳನ್ನು ಸಾಗಿಸುವುದಕ್ಕೆ ವ್ಯವಸ್ಥೆಮಾಡುವುದಾಗಿ ಹೇಳಿ, ತಮ್ಮ ಗುರುಕುಲದ ಬಗ್ಗೆ ಮಾಹಿತಿ ನೀಡುವ ಹಲವು ಪ್ರಕಟನಾ ಪತ್ರಗಳನ್ನು ನನಗೆ ಕೊಟ್ಟು ಬೀಳ್ಕೊಂಡರು.

ಪ್ರಬೋಧಿನೀ ಗುರುಕುಲವು ಯಾವುದೇ ಜಾತಿ ತಾರತಮ್ಯ ಮಾಡದೇ ಪ್ರತಿ ವರ್ಷ ಎಲ್ಲ ಜಾತಿ, ಪಂಗಡಗಳ ಇಪ್ಪತ್ತು ವಿದ್ಯಾರ್ಥಿಗಳನ್ನು ಶಾಲೆಗೆ ಸೇರಿಸಿಕೊಳ್ಳುತ್ತಾರೆ. ಸೇರುವಾಗ ಈ ವಿದ್ಯಾರ್ಥಿಗಳು ಒಂಭತ್ತರಿಂದ ಹತ್ತು ವರ್ಷದವರಾಗಿದ್ದು ಓದಲು ಬರೆಯಲು ಮತ್ತು ತಂದೆತಾಯಿಯರನ್ನು ಬಿಟ್ಟು ಶಾಲೆಯಲ್ಲೇ ವಾಸಮಾಡಲು ಸಮರ್ಥರಿರಬೇಕು. ವಿದ್ಯಾರ್ಥಿಗಳಿಗೆ ಆರುವರ್ಷಗಳ ಕಾಲ ಪಂಚಮುಖಿ ಶಿಕ್ಷಣವೆಂಬ ವೇದಶಾಸ್ತ್ರ ಆಧಾರಿತ

ಶಿಕ್ಷಣವನ್ನು ಕೊಡುವ ಗುರುಕುಲವಿದು. ವಿದ್ಯಾರ್ಥಿಗಳು ಶಾಲೆಯಲ್ಲಿಯೇ ಇದ್ದು ಪಾಠ ಕಲಿಯುವ ವಸತಿ ಶಾಲಾ ವ್ಯವಸ್ಥೆ ಇಲ್ಲಿನದು. ಈ ಆರುವರ್ಷಗಳ ಅವಧಿಯಲ್ಲಿ ಮಕ್ಕಳು ವೇದ, ವಿಜ್ಞಾನ, ಯೋಗ, ವ್ಯವಸಾಯ ಮತ್ತು ಕಲೆ, ಮೊದಲಾಗಿ ಐದು ಕ್ಷೇತ್ರಗಳಲ್ಲಿ ಪರಿಣತಿಯನ್ನು ಪಡೆಯುತ್ತಾರೆ. ಈ ಮಾಹಿತಿಯಷ್ಟೇ ಅಲ್ಲದೇ ಇನ್ನೂ ಅನೇಕ ವಿಷಯಗಳನ್ನು ಭೀಮಣ್ಣನವರು ನನಗೆ ಕೊಟ್ಟ ಪ್ರಕಟನಾ ಪತ್ರದಲ್ಲಿ ಕಾಣಬಹುದಾಗಿತ್ತು.

ಇದಾದ ಒಂದು ವಾರದನಂತರ ಭೀಮಣ್ಣನವರಿಂದ ನನಗೆ ಫೋನ್ ಕರೆ ಬಂತು. ''ಪುಸ್ತಕಗಳ ಸಾಗಣೆಗೆ ವ್ಯವಸ್ಥೆ ಆಗ್ತಾ ಇದೆ. ಅಷ್ಟರಲ್ಲಿ ಇದೇ ಸೋಮವಾರ ನಮ್ಮ ಶಾಲೆಗೆ ಹೊಸ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳುವ ಪ್ರವೇಶೋತ್ಸವವನ್ನು ಗುರುಕುಲದಲ್ಲಿ ಏರ್ಪಡಿಸಿದ್ದೇವೆ. ಭಾನುವಾರ ಮಧ್ಯಾಹ್ನ ಬೆಂಗಳೂರಿನಿಂದ ಹೊರಟು ಸಂಜೆ ಹರಿಹರಪುರ ಸೇರುವುದು. ಮಾರನೆಯ ಬೆಳಗ್ಗೆ ಸಮಾರಂಭವನ್ನು ಮುಗಿಸಿಕೊಂಡು ಅಲ್ಲಿಂದ ಹೊರಟು ಸಂಜೆ ಬೆಂಗಳೂರು ಸೇರಬಹುದು. ನೀವೂ ಬರುವುದಕ್ಕಾಗುತ್ತದೆಯೇ? ಶಾಲೆಯನ್ನು ನೋಡಿದಂತೆಯೂ ಆಗುತ್ತೆ'' ಅಂತ ಬಹು ವಿಶ್ವಾಸದಿಂದ ಅವರು ಆಹ್ವಾನಿಸಿದರು. ನಾನು ಒಪ್ಪಿದೆ. ಅವರು ಕಳುಹಿಸಿಕೊಟ್ಟ ಆಹ್ವಾನ ಪತ್ರಿಕೆಯೂ ಕೈಸೇರಿತು. ಅದರ ಪ್ರಕಾರ ಪ್ರವೇಶೋತ್ಸವಕ್ಕೆ ಮುಖ್ಯವಾಗಿ ಮೂವರು ಗಣ್ಯರು ಬರುವರಿದ್ದರು. ಆಶೀರ್ವಚನವನ್ನು ಪೂಜ್ಯ ಶ್ರೀ ನಿ.ಪ್ರ. ಶಿವಾನುಭವ ಚರಮಮೂರ್ತಿ ಶಿವರುದ್ರ ಮಹಾಸ್ವಾಮಿಗಳು, ಶ್ರೀ ಬೇಲಿ ಮಠ ಮಹಾಸಂಸ್ಥಾನ ಅವರು ನೀಡುವರಿದ್ದರು. ಅಧ್ಯಕ್ಷತೆಯನ್ನು ಉಜ್ಜಯನಿಯ ಸಾಂದೀಪಿನಿ ವೇದವಿದ್ಯಾ ಸಂಸ್ಥೆಯ ಕಾರ್ಯದರ್ಶಿ, ಪ್ರೊ. ರೂಪ್ ಕಿಶೋರ್ ಶಾಸ್ತ್ರಿ ವಹಿಸಿಕೊಂಡಿದ್ದರು. ಅಂದಿನ ಮುಖ್ಯ ಭಾಷಣಕಾರರು ಡಾ|| ರಾಮಚಂದ್ರ ಭಟ್ ಕೋಟೆಮನೆ. ನನಗೆ ಇದೆಲ್ಲಾ ಒಂದು ಹೊಸ ಅನುಭವ. ಯಾವ ನಿರೀಕ್ಷೆಯೂ ಇಲ್ಲದೇ ಸಮಾರಂಭವನ್ನು ಅನುಭವಿಸಿ ಬರಲು ನಿರ್ಧರಿಸಿದೆ.

ಭಾನುವಾರ ಮಧ್ಯಾಹ್ನ ಹನ್ನೆರಡಕ್ಕೆ ಭೀಮಣ್ಣ ಬಂದರು. ಅವರ ಗೆಳೆಯ ಹರೀಶ್ ಅಂದು ನಮಗೆ ಸಾರಥಿ. ನಮ್ಮ ಮನೆಯಿಂದ ನೇರವಾಗಿ ಅರಳೇಪೇಟೆಯಲ್ಲಿದ್ದ ಶ್ರೀ ಬೇಲಿಮಠ ಮಹಾಸಂಸ್ಥಾನಕ್ಕೆ ಹೋದೆವು. ಭೀಮಣ್ಣನವರು ಮಠದ ಒಳಗೆ ಹೋಗಿ ಪೂಜ್ಯ ಸ್ವಾಮೀಜಿಯವರನ್ನು ಕರೆತಂದರು. ನಾನು ಸ್ವಾಮೀಜಿಯವರಿಗೆ ನಮಸ್ಕರಿಸಿದೆ. ಅವರು ಬಹು ವಿಶ್ವಾಸದಿಂದ ''ಶರಣು, ಅಪ್ಪಾಜಿ'' ಅಂತ ಹೇಳಿದರು. ಭೀಮಣ್ಣನವರು, ''ಸ್ವಾಮೀಜಿ, ಇವರು ರಾ.ಶಿ. ಅವರ ಮಕ್ಕಳು ಶಿವಕುಮಾರ್ ಅಂತ. ನಮ್ಮೊಂದಿಗೆ ಗುರುಕುಲಕ್ಕೆ ಬರಲಿದ್ದಾರೆ'' ಎನ್ನುತ್ತಾ ನನ್ನನ್ನು ಪರಿಚಯಿಸಿದರು. ''ಕೊರವಂಜಿ ಕಾಡಿಗೆ ಹೋಗುವವರೆಗೂ ಸುಮಾರು ಸಂಚಿಕೆಗಳನ್ನು ಓದಿ ಆನಂದಿಸಿದ್ದೇನೆ'' ಎಂದು ಹೇಳುತ್ತಾ ಸ್ವಾಮೀಜಿ ಕಾರಿನಲ್ಲಿ ಕುಳಿತರು. ಕಾರು ಹೊರಟಿತು. ಸ್ವಾಮೀಜಿಯವರ ಸನ್ನಿಧಿಯಲ್ಲಿ ಏನು ಮಾತನಾಡುವುದು ತಿಳಿಯದೇ ನಾವೆಲ್ಲಾ ಸುಮ್ಮನಿದ್ದೆವು. ಅಷ್ಟರಲ್ಲಿ ಸ್ವಾಮೀಜಿಯವರೇ ಮಾತನಾಡಲು ಪ್ರಾರಂಭಿಸಿದರು. ನಾನು ಮುಂದಿನ ಸೀಟಿನಲ್ಲಿ ಕುಳಿತಿದ್ದರಿಂದ ನನಗೆ ಅವರ ಮಾತು ಮಾತ್ರ ಕೇಳಿಸುತ್ತಿತ್ತು. ''ಸುಮಾರು ವರ್ಷಗಳ ಹಿಂದೆ ಸೆಂಟ್ರಲ್ ಕಾಲೇಜಿನಲ್ಲಿ ಒಂದು

ಕ್ರೀಡಾ ಕೂಟ ನಡೆದಿತ್ತು. ವಿವಿಧ ಸ್ಪರ್ಧೆಗಳು ನಡೆಯುತ್ತಿದ್ದವು. ಒಬ್ಬ ಬಡ ವಿದ್ಯಾರ್ಥಿ ಸ್ಪರ್ಧೆಯಲ್ಲಿ ಓಡುತ್ತಿದ್ದಾಗಲೇ ಕುಸಿದು ಬಿದ್ದ. ಅವನ ಗೆಳೆಯರು ಅವನನ್ನ ಮೆಜೆಸ್ಟಿಕ್‌ನಲ್ಲಿದ್ದ ಡಾಕ್ಟರ್ ಷಾಪಿಗೆ ಕರೆದೊಯ್ದರು. ಅಲ್ಲಿದ್ದ ಡಾಕ್ಟರು ಆ ವಿದ್ಯಾರ್ಥಿಯನ್ನು ಕೂಲಂಕುಷವಾಗಿ ಪರಿಶೀಲಿಸಿದರು. ಅವನ ಸುಸ್ತಿಗೆ ಹಸಿವಿನಿಂದಾದ ನಿತ್ರಾಣವಲ್ಲದೇ ಬೇರೇನೂ ಅಲ್ಲ ಎಂಬುದು ಅವರಿಗೆ ಖಚಿತವಾಯಿತು. ಆ ಹುಡುಗನನ್ನು ಕುರಿತು ''ಬೆಳಗ್ಗೆ ಏನು ತಿಂಡಿ ತಿಂದೆ?'' ಅಂತ ಕೇಳಿದರು. ಆ ಹುಡುಗ ಸ್ವಲ್ಪ ತಡವರಿಸಿ, ''ಇಡ್ಲಿ ತಿಂದಿದ್ದೆ'' ಅಂತ ಉತ್ತರಿಸಿದ. ಡಾಕ್ಟರು ಒಳಕ್ಕೆ ಹೋಗಿ ಕೈಯ್ಯಲ್ಲಿ ಮೂರು ಚಿಕ್ಕ ಔಷಧಿ ಪೊಟ್ಟಣಗಳನ್ನು ಹಿಡಿದು ಬಂದರು. ಆಗಿನ ದಿನಗಳಲ್ಲಿ ಅವರು ಪೊಟ್ಟಣದ ಡಾಕ್ಟರೆಂದೇ ಪ್ರಸಿದ್ಧಿ. ಯಾವ ಖಾಯಿಲೆಗಾದರೂ ಅವರು ಪುಟ್ಟ ಪೊಟ್ಟಣ ಸಿದ್ಧವಾಗಿರುತ್ತಿತ್ತು. ಆ ವಿದ್ಯಾರ್ಥಿಯ ಕೈಯ್ಯಲ್ಲಿ ಆ ಮೂರು ಪೊಟ್ಟಣಗಳನ್ನಿಟ್ಟು, ''ಇವಾಗೊಂದು, ಮಧ್ಯಾಹ್ನ ಒಂದು ಮತ್ತೆ ರಾತ್ರಿ ಮಲಗೊಕ್ಕೆ ಮುಂಚೆ ಒಂದು ತಗೊಂಡು ಬಿಡು. ಎಲ್ಲ ಸರಿಹೋಗುತ್ತೆ'' ಅಂತ ಹೇಳಿ ಆ ಹುಡುಗ ಮತ್ತು ಅವನ ಸಂಗಾತಿಗಳನ್ನು ಕಳುಹಿಸಿದರು. ಆ ಹುಡುಗ ರೂಮಿಗೆ ಹೋಗಿ ಪೊಟ್ಟಣ ಬಿಚ್ಚಿ ನೋಡಿದಾಗ ಆ ಪೊಟ್ಟಣಗಳಲ್ಲಿ ಇದ್ದದ್ದೇನು ಗೊತ್ತೇ?'' ಅಂತ ಸ್ವಲ್ಪ ನಿಲ್ಲಿಸಿ, ''ಪ್ರತಿಯೊಂದು ಪೊಟ್ಟಣದಲ್ಲೂ ಒಂದೊಂದು ಹತ್ತು ರೂಪಾಯಿ ನೋಟನ್ನ ಮಡಿಚಿ ಇಟ್ಟಿತ್ತು.'' ಅನಿರೀಕ್ಷಿತವಾಗಿ ನಮ್ಮ ತಂದೆಯವರ ಜೀವನದ ಒಂದು ಪುಟವನ್ನ ಸ್ವಾಮೀಜಿ ಬಿಚ್ಚಿಟ್ಟಿದ್ದು ನೋಡಿ ನನಗೆ ಏನು ಹೇಳಲೂ ತಿಳಿಯಲಿಲ್ಲ. ಸ್ವಾಮೀಜಿ ಮುಂದುವರಿದು, ''ಆ ಹುಡುಗನ ಆತ್ಮಗೌರವಕ್ಕೆ ಚ್ಯುತಿಬರದಂತೆ ಅವನ ಸಂಗಾತಿಗಳ ಮುಂದೆ ಅವನ ಬಡತನವನ್ನು ಎತ್ತಿ ಆಡದೆ, ಅವನಿಗೆ ಅಗತ್ಯವಿದ್ದ ಸಹಾಯಹಸ್ತವನ್ನ ಮರೆಯಾಗಿಯೇ ನೀಡಿದ ಡಾಕ್ಟರ್ ಶಿವರಾಮರು ಸಮಾಜದ ಒಂದು ಅನರ್ಘ್ಯ ರತ್ನ'' ಎಂದು ಹೇಳಿದರು. ''ತಮಗೆ ಈ ಸಂಗತಿ ತಿಳಿದದ್ದಾದರೂ ಹೇಗೆ?'' ಅಂತ ನಾನು ಕೇಳಿದೆ. ''ಆ ಹುಡುಗ ಚೆನ್ನಾಗಿ ಓದಿ ಮುಂದೆ ಬಂದು ಒಬ್ಬ ಅಧಿಕಾರಿ ಆಗಿದ್ದಾಗ ಅವನನ್ನ ಸಂಪರ್ಕಿಸಬೇಕಾಗಿ ಬಂತು. ಆತನೇ ನನಗೆ ಈ ಮಾತನ್ನ ಹೇಳಿದ್ದು'' ಎಂದರು.

ಸುಮಾರು ಏಳು ಗಂಟೆಗಳ ಸುದೀರ್ಘ ಪ್ರಯಾಣದಲ್ಲಿ ಸ್ವಾಮೀಜಿಯವರ ಅನೇಕ ಅನುಭವಗಳನ್ನು ಕೇಳುವ ಸಂಭ್ರಮದಲ್ಲಿ ಸಮಯ ಸರಿದದ್ದೇ ತಿಳಿಯಲಿಲ್ಲ. ಭಗವದ್ಗೀತೆ, ಮಹಾಭಾರತ, ನಮ್ಮ ಸಾಹಿತಿಗಳ ಹಿರಿಮೆ, ಇವೆಲ್ಲ ವಿಷಯಗಳಮೇಲೆ ಒಂದು ಹೊಸ ತಿರುವನ್ನ, ಹೊಸ ದೃಷ್ಟಿಕೋನವನ್ನ ನೀಡಿದ್ದು ಸ್ವಾಮೀಜಿ ಅವರ ಪ್ರತಿಭೆಗೆ ಒಂದು ನಿದರ್ಶನ ಅನಿಸಿತು.

ಸುಮಾರು ಆರೂಮುಕ್ಕಾಲಿಗೆ ಹರಿಹರಪುರ ಸೇರಿದೆವು ಮಲೆನಾಡಿನ ಮಡಿಲಿನಲ್ಲಿದ್ದ ಗುರುಕುಲದ ನೈಸರ್ಗಿಕ ಸೌಂದರ್ಯವನ್ನು ಅನುಭವಿಸಿಯೇ ತಿಳಿಯಬೇಕು. ಗುರುಕುಲದ ಮುಂದೆಯೇ ತುಂಗಾನದಿ ಹರಿಯುತ್ತಾಳೆ. ಒಂದು ವೃತ್ತಾಕಾರ ವಿನ್ಯಾಸದಲ್ಲಿದ್ದ ಹೆಂಚಿನ ಕುಟೀರಗಳ ಹರಹಿನ ನಡುವೆ ಅಚ್ಚುಕಟ್ಟಾದ ಹೂವಿನ ತೋಟ, ಅದರ ಮಧ್ಯೆ ಒಂದು ಮಂಟಪ, ಮಂಟಪದಲ್ಲಿ ಶಿವಲಿಂಗ. ವಿದ್ಯಾಭ್ಯಾಸಕ್ಕೆ ಹೇಳಿ ಮಾಡಿಸಿದಂತಹ ಪರಿಸರ.



**ತುಂಗಾತೀರದಲ್ಲಿ ವಿದ್ಯಾರ್ಥಿ ವಟುಗಳು**

ನಮ್ಮನ್ನೆಲ್ಲಾ ಅತಿಥಿ ಗೃಹದಲ್ಲಿ ಇಳಿಸಿದ್ದರು. ಮನೋಜ್ ಎಂಬ ಒಬ್ಬ ಚೂಟಿ ಹುಡುಗ ನನ್ನ ಬಳಿ ಬಂದು, ''ನಾನು ನಿಮ್ಮ ಅನುಕೂಲಗಳನ್ನು ನೋಡಿಕೊಳ್ಳುತ್ತೇನೆ. ಏನು ಬೇಕಾದರೂ ಕೇಳಿ. ಬನ್ನಿ, ಈಗ ನಿಮಗೆ ನಿಮ್ಮ ವಸತಿ ತೋರಿಸುವೆ'' ಅಂತ ಬಹುವಾದ ಆತ್ಮಸ್ಥೈರ್ಯದಿಂದ ಹೇಳಿದ್ದು ನೋಡಿ ಮನಸ್ಸು ತುಂಬಿಬಂತು.

ಮಾರನೆಯ ಪ್ರವೇಶೋತ್ಸವ ಬಹು ಚೆನ್ನಾಗಿ ವ್ಯವಸ್ಥಿತವಾಗಿ ನಡೆಯಿತು. ಸ್ವಾಮೀಜಿಯವರ ಆಶೀರ್ವಚನಕ್ಕಾಗಿ ನಾನು ಕುತೂಹಲದಿಂದ ಕಾಯುತ್ತಿದ್ದೆ. ಗುರುಕುಲದ ಬಗ್ಗೆ ಇನ್ನೆಷ್ಟು ಸೃಜನಶೀಲತೆಯಿಂದ ಹೇಳಕ್ಕಾಗುತ್ತೆ, ಸುಮ್ಮನೆ ಹೊಗಳಿ ಸುಮ್ಮನಾಗಬೇಕಷ್ಟೇ, ಅಂತ ಅನ್ನಿಸಿತ್ತು. ಕೊನೆಗೂ ಆ ಘಳಿಗೆ ಬಂತು. ಸ್ವಾಮೀಜಿ ಅಂದು ನೀಡಿದ ಆಶೀರ್ವಚನದ ಒಂದು ಚಿಕ್ಕ ತುಣುಕನ್ನು ಇಲ್ಲಿ ನೀಡುತ್ತಿರುವೆ.

''ಗುರುಕುಲದ ಸಂಪ್ರದಾಯ ಬಹು ಪ್ರಾಚೀನ. ರಾಮಾಯಣದ ಕಾಲದಲ್ಲೇ ದಶರಥ ಮಹಾರಾಜ, ರಾಜಕುಮಾರರಾದ ಶ್ರೀರಾಮ ಲಕ್ಷ್ಮಣರನ್ನ ಗುರುಕುಲಕ್ಕೆ ಕಳಿಸಿದ್ದ. ಕೃಷ್ಣ ಬಲರಾಮರು ಸಾಂದೀಪಿನಿ ಮುನಿಗಳ ಆಶ್ರಮದಲ್ಲಿ ಕಲಿತದ್ದು ಎಲ್ಲರಿಗೂ ತಿಳಿದ ವಿಷಯ. ಆ ಆಶ್ರಮದಲ್ಲೇ ಕೃಷ್ಣ ತನ್ನ ಜೀವದ ಗೆಳೆಯ ಕುಚೇಲನನ್ನ ಮೊದಲು ಭೇಟಿಯಾದದ್ದು. ಆ ಆಶ್ರಮದ ಪರಿಸರದಲ್ಲಿ ಬಡವ ಬಲ್ಲಿದ ಎಂಬ ತಾರತಮ್ಯಕ್ಕೆ ಅವಕಾಶವೇ ಇರುತ್ತಿರಲಿಲ್ಲ. ತಂದೆತಾಯಿಯರ ಮೋಹದ ಬಂಧನವಿಲ್ಲದೇ, ಭಾವನಾತ್ಮಕ ಆಸರೆಗೆ ಜೊತೆ ಹುಡುಗರ ಸ್ನೇಹ ಅಗತ್ಯ ಎಂಬ ತಿಳಿವನ್ನು ಮೂಡಿಸಿ, ಹುಡುಗರ ವ್ಯಕ್ತಿತ್ವವನ್ನು ಸಂಪೂರ್ಣವಾಗಿ

ವಿಕಸನಗೊಳ್ಳುವಂತೆ ಮಾಡುತ್ತಿದ್ದ ಪರಿಸರ ಗುರುಕುಲದ್ದು. ಗುರುಕುಲದ ಈ ಮಹತ್ವ ಭೀಷ್ಮರಿಗೆ ತಿಳಿದಿರಲಿಲ್ಲ ಎಂದು ನಾನು ಹೇಳುತ್ತಿಲ್ಲ. ಮೊಮ್ಮಕ್ಕಳ ಬಗ್ಗೆ ಅವರಿಗಿದ್ದ ಮಮಕಾರ ಅವರ ವಿವೇಕವನ್ನು ಮರೆಮಾಚಿತು. ಕೌರವ ಪಾಂಡವರಿಗೆ ಗುರುಕುಲವೊಂದನ್ನು ಹುಡುಕದೇ, ಗುರುವನ್ನೇ ಅರಮನೆಯ ಊಳಿಗಕ್ಕೆ ನೇಮಿಸಿಬಿಟ್ಟರು ಭೀಷ್ಮರು. ಗುರುಕುಲದ ಮಕ್ಕಳಂತೆ ಪರಸ್ಪರ ಸ್ನೇಹ, ಅವಲಂಬನೆ ಇವುಗಳನ್ನು ಕಲಿಯಲು ಕೌರವ ಪಾಂಡವರಿಗೆ ಅವಕಾಶವೇ ಸಿಗಲಿಲ್ಲ. ಕ್ರೀಡೆಯಲ್ಲಿ ಸ್ಪರ್ಧಾ ಮನೋಭಾವ ತೀರ ಸಹಜ. ಇಂತಹ ಆರೋಗ್ಯಕರ ಸ್ಪರ್ಧೆಯನ್ನು ದಾಯಾದಿ ಮತ್ಸರವಾಗಿ ವಿಕೃತಗೊಳಿಸಿದ್ದು ಭೀಷ್ಮರ ಮಮಕಾರ. ದ್ರೋಣರೂ ಸಹಾ ರಾಜಾಶ್ರಯಕ್ಕೆ ಕಟ್ಟುಬಿದ್ದು ತಮ್ಮ ಗುರು ಸಹಜ ವಿವೇಚನೆಯನ್ನು ಮರೆತರು. ಏಕಲವ್ಯನನ್ನು ಒಬ್ಬ ಅನುಕರಣೀಯ ವ್ಯಕ್ತಿ ಎಂದು ಅರ್ಜುನನಿಗೆ ಪರಿಚಯಿಸುವ ಬದಲು, ಅರ್ಜುನನ ಅಸೂಯೆ, ಮಾನಿತ್ವಗಳನ್ನು ತಮ್ಮ ಮೇಲೆ ತಾವೇ ಆವಾಹಿಸಿಕೊಂಡು ಏಕಲವ್ಯನಿಗೆ ಅಪಚಾರವೆಸಗಿದರು. ಕೌರವ ಪಾಂಡವರು ಗುರುಕುಲದಲ್ಲಿ ಬೆಳೆದಿದ್ದರೆ ಮಹಾಭಾರತ ಯುದ್ಧವೂ ಆಗುತ್ತಿರಲಿಲ್ಲ. ಅಷ್ಟೊಂದು ನರಹತ್ಯೆಯೂ ಸಂಭವಿಸುತ್ತಿರಲಿಲ್ಲ. ನಿಮಗೆಲ್ಲಾ ಗುರುಕುಲ ವಾಸದ ಅಮೂಲ್ಯ ಅವಕಾಶ ದೊರೆತಿದೆ. ಸಂಪೂರ್ಣ ಪ್ರಯೋಜನವನ್ನು ಪಡೆದುಕೊಳ್ಳಿ.''

ಮಧ್ಯಾಹ್ನ ಒಂದು ಗಂಟೆಗೆ ಹರಿಹರಪುರದಿಂದ ಬೆಂಗಳೂರಿಗೆ ಹೊರಟೆವು. ಪತಂಜಲಿ ಮುನಿಯ ಅಷ್ಟಾಂಗ ಯೋಗವನ್ನು ಕುರಿತು ಒಂದು ಸೊಗಸಾದ ವ್ಯಾಖ್ಯಾನವನ್ನು ಸ್ವಾಮೀಜಿಗಳಿಂದ ಕೇಳುವ ಸೌಭಾಗ್ಯ ನಮ್ಮದಾಗಿತ್ತು. ಇದರ ಬಗ್ಗೆ ಮುಂದೆಂದಾದರೂ ತಿಳಿಸುವೆ. ಶ್ರೀಗುರುಭ್ಯೋನ್ನಮಃ.

**ಶಿವಕುಮಾರ್**

---

## ✷✷ ಅಪರಂಜಿ ಸದಸ್ಯತ್ವದ ಅಭಿಯಾನ ✷✷

ನಿಮ್ಮ ಮೆಚ್ಚಿನ ಅಪರಂಜಿ ಈಗ ಸದಸ್ಯತ್ವದ ಅಭಿಯಾನ ಪ್ರಾರಂಭಿಸಿದೆ. ನೀವು ಮಾಡಬೇಕಾದುದು ಇಷ್ಟೇ. ಒಬ್ಬೊಬ್ಬ ಸದಸ್ಯರೂ ತಮ್ಮ ಕಡೆಯಿಂದ ಕನಿಷ್ಠ ಪಕ್ಷ ಇನ್ನೊಬ್ಬರು ಸದಸ್ಯರನ್ನು (ಇನ್ನೂ ಹೆಚ್ಚು ಸದಸ್ಯರನ್ನು ಮಾಡಿದರೂ ಸ್ವಾಗತ) ಅಪರಂಜಿ ಬಳಗಕ್ಕೆ ಸೇರಿಸಿ **ಹತ್ತು ವರ್ಷದ ಚಂದಾದಾರರನ್ನಾಗಿ ಮಾಡಿ**. ಅಪರಂಜಿ ಬೆಳೆಯಲಿ ತಿಳಿಹಾಸ್ಯ ಮನೆ ಮನೆ ಬೆಳಗಲಿ.

ಕೊರವಂಜಿ ಅಪರಂಜಿ ಟ್ರಸ್ಟ್ ಜೊತೆ ನೀವೂ
ಕೈ ಜೋಡಿಸಿ ಎಂದು ವಿನಂತಿ.

# ಗಾಂಧಿ ತಾತ ನಕ್ಕಾಗ

**- ಸಹನಾ ಪ್ರಸಾದ್**

> **ಆಗಸ್ಟ್ 15ರ ಸಂಜೆ ಲೇಟಾಗಿ ಮನೆ ಸೇರುವ ಹೊತ್ತಿಗೆ ಎಲ್ಲರ ಮನಸ್ಸು ಪ್ರಶಾಂತವಾಗಿತ್ತು. ಕಾರಣ?**

**ಬೆ**ಳಗ್ಗೆ ಎದ್ದಾಗಲಿಂದ ಪದ್ದಿ, ಅಲಿಯಾಸ್ ಪದ್ಮಾವತಿ, ಬಾಯಿ ಮುಚ್ಚಿರಲೇ ಇಲ್ಲ. ಸುಪುತ್ರ ವಂಶೋದ್ಧಾರಕ ಪ್ರೀತಮ್ ಹಾಗೂ ಸುಪುತ್ರಿ ರಂಜಿತಾಳನ್ನು ನಿದ್ದೆಯಿಂದ ಎಬ್ಬಿಸುವಷ್ಟರಲ್ಲಿ ಅವಳ ಬಳಿ ಇದ್ದ ಪದಗಳೆಲ್ಲಾ ಖರ್ಚಾಗಿ, ಆ ಅಪಾರ್ಟ್ಮೆಂಟ್ನಲ್ಲಿ ವಾಸವಾಗಿದ್ದ ಜನರ ನಿದ್ದೆಯೆಲ್ಲಾ ಹಾರಿ ಹೋಗಿತ್ತು. ಛೇ, ಬೆಳೀತಾ ಇದ್ದಾಗ ವಠಾರ, ಅಲ್ಲಿ ಜನರ ಮಾತು ಕಥೆ, ಜಗಳ, ಕಿರುಚಾಟ ಎಲ್ಲಾ ಸಾಕಾಗಿ ಹೋಗಿತ್ತು. ಈಗ ದುಡ್ಡಿದೆ. ಆರಾಮವಾಗಿ ಇರೋಣವೆಂದುಕೊಂಡರೆ ಈ ಅಪಾರ್ಟ್ಮೆಂಟ್ನಲ್ಲೂ ಇದೇ ಗೋಳು. ಪಕ್ಕದ ಫ್ಲಾಟ್ ವಾಸಿ ಸುಬ್ಬರಾಯ ಅಲಿಯಾಸ್ ಸುಬ್ಬ್ಸ್ ಮೈಮುರಿದು ಎದ್ದರು. ಬೆಚ್ಚಗೆ ಹೊದ್ದು, ಗಂಡನ ಪಕ್ಕ ಆರಾಮವಾಗಿ ಮಲಗಿದ್ದ ಶಾಲಿನಿ ಸಹ ಎದ್ದು ಕುಳಿತಳು. ರಾತ್ರಿ ಎಲ್ಲಾ ನಿದ್ದೆಯಿಲ್ಲದೆ ಹೊರಳಾಡಿ, ಬೆಳಗ್ಗಿನ ಜಾವ ಸಿಹಿ ನಿದ್ದೆಗೆ ಜಾರಿದ್ದ ಸುಮಿತ್ರಮ್ಮ ವಟಗುಟ್ಟುತ್ತಾ ಹಾಸಿಗೆ ಬಿಟ್ಟು ಕಾಫಿ ಬೆರೆಸಲು ನಡೆದರು. ಪ್ರೇಯಸಿಯ ಜತೆ ಬೆಳಗ್ಗಿನವರೆಗೂ ಚ್ಯಾಟ್ ಮಾಡಿ ಆಮೇಲೆ 2 ಪೆಗ್ ಹಾಕಿ ಮಲಗಿದ ಧಾಂಡಿಗ ರಜತ್ ಮಾತ್ರ ಮಿಸುಕಾಡಲಿಲ್ಲ.

ಮಕ್ಕಳು ನಿದ್ದೆಗಣ್ಣಿನಲ್ಲಿ ಎದ್ದು ಹಲ್ಲುಜ್ಜುತ್ತಾ ಬೇಸರದಿಂದಲೇ ಕನ್ನಡಿ ನೋಡುತ್ತಾ ನೀರು ಬಿಟ್ಟು ಸಮಯ ಹಾಳು ಮಾಡುತ್ತಿದ್ದು ನೋಡಿ ಪದ್ದಿಯ ಅಲ್ಪ ಸ್ವಲ್ಪ ಸಹನೆ ಹಾರಿ ಹೋಯಿತು. ಈ ಸಲ ತೆರೆದ ಅವಳ ಬಾಯಿಗೆ, ಮಕ್ಕಳಲ್ಲದೆ, ಗಂಡ, ಅವನ ತಾಯಿ, ತಂದೆ, ಅಣ್ಣ, ತಂಗಿಯರೆಲ್ಲಾ ಬಂದು ಹೋದರು. ಎಚ್ಚರವಾದರೂ, ಅವಳ ಮಾತುಗಳನ್ನು ಕೇಳುತ್ತಾ ಮಲಗಿದ್ದ ಅವಳ ಯಜಮಾನರು ಸಿಟ್ಟಿನಿಂದ ಧಾವಿಸಿ ಬಂದದ್ದು ನೋಡಿ ಪದ್ದಿಯ ಬಾಯಿ ಇನ್ನೂ ಜೋರಾಯಿತು. ಆಹಾ, ಅವಾಗಲಿಂದ ನಾನು ಮಕ್ಕಳನ್ನು ಎಬ್ಬಿಸಲು ಕಷ್ಟಪಡುತ್ತಿದ್ದಾಗ ಆರಾಮವಾಗಿ ಮಲಗಿದ್ದವರು, ನಿಮ್ಮ ತಾಯಿಯ ಹೆಸರು ಎತ್ತಿದ್ದಕ್ಕೆ ತಕ್ಷಣ ಎಚ್ಚೆತ್ತುಬಿಟ್ಟರಲ್ಲ! ಹೆಂಡತಿಯ ಜತೆ ಯಾವಾಗ ವಾದ ಮಾಡಬೇಕು, ಯಾವಾಗ ಸುಮ್ಮನಿರಬೇಕು ಎಂದು ಬಲ್ಲ ಜಾಣ ಅವಳ ಗಂಡ ಸುರೇಶ. ಹೆಸರಿಗೆ ತಾನು ಯಜಮಾನನಾದರೂ ನಿಜವಾದ ಯಜಮಾನರು ಯಾರು ಎಂದು ಅರಿತಿರುವ ಬುದ್ಧಿವಂತ.

‘ಆಯಿತು, ಚಿನ್ನ, ಇವತ್ತೇಕೆ ಇಷ್ಟು ಕಿರುಚಾಟ, ಸ್ವತಂತ್ರ ದಿನದಂದು ಆರಾಮವಾಗಿ ಇರುವುದು ಬಿಟ್ಟು...’ ಅವನ ಮಾತನ್ನು ಅರ್ಧದಲ್ಲೇ ತುಂಡರಿಸಿ, ದುರುಗುಟ್ಟಿ ನೋಡಿದಳು

ಪದ್ದಿ 'ಯಾಕೆ ನೆನ್ನೆ ರಾತ್ರಿ ನೆನಪಿಸಿದೆನಲ್ಲ. ಇವತ್ತು ಮಕ್ಕಳ ಶಾಲೆಯಲ್ಲಿ ಕಾರ್ಯಕ್ರಮ ಇದೆ, ಅಪ್ಪ ಅಮ್ಮ ಹೋಗುವುದು ಕಡ್ಡಾಯ ಅಂತ, ನಿಮಗೆಲ್ಲಿ ನೆನಪಿರುತ್ತದೆ? ಹೊರಗೆ, ಒಳಗೆ ದುಡಿಯುವಳು ನಾನು. ನನಗೂ ಅಪರೂಪದ ರಜೆ, ಆದರೆ ಮಕ್ಕಳ ಸ್ಕೂಲ್ ರೂಲ್ಸ್ ಮೀರುವಂತಿಲ್ಲ. ಇವು ನೋಡಿದರೆ ಏಳುವುದಕ್ಕೆ ಇಷ್ಟು ಹಟ ಮಾಡುತ್ತವೆ' ಈಗ ಪದ್ದಿಯ ದನಿ ತಗ್ಗಿತ್ತು. ಗಂಡನಿಗೆ ಕಾಫಿ ಮಾಡಲು ಅಡುಗೆ ಮನೆಗೆ ಹೋದವಳ ಆವೇಶವು ತಗ್ಗಿತ್ತು. ಎಲ್ಲರೂ ತಯಾರಾಗಿ ಮನೆ ಬಿಟ್ಟು ಹೊರಡುವ ಹೊತ್ತಿಗೆ ಪದ್ದಿಯ ಮೂಡ್ ಸರಿಹೋಗಿತ್ತು. ದರ್ಶಿನಿಯಲ್ಲಿ ಇಡ್ಲಿ, ವಡೆ, ಕಾಫಿ ಬಿದ್ದ ಮೇಲೆ ಪೂರ್ತಿ ಸರಿ ಹೋದಳು.

ಮಕ್ಕಳನ್ನು ಶಾಲೆಗೆ ಬಿಟ್ಟಾಗ ಅಲ್ಲಿ ಕಂಡಿದ್ದು ಬೇಸರದ ಮುಖದ ಟೀಚರ್‌ಗಳು. ಇನ್ನು ನಿದ್ದೆ ಕಣ್ಣಿನ ಮಕ್ಕಳು, ವಾರದ ರಜೆಗೆ ಈ ರೀತಿ ಕುತ್ತು ಬಂತಲ್ಲ ಎಂದು ಕೋಪ ತಡೆದುಕೊಂಡಿರುವ ಪೋಷಕರು. ಯಥಾ ಪ್ರಕಾರ ಭಾಷಣಗಳು, ಧ್ವಜ ಏರಿಸುವುದು. ಒಂದೆರಡು ದೇಶಭಕ್ತಿಗೀತೆಗಳು, ಗಾಂಧಿ ತಾತನಂತೆ ವೇಷ ತೊಟ್ಟ ಕೆಲವು ಮಕ್ಕಳು ಪದ್ದಿ ಗಂಡನನ್ನು ತಿವಿದಳು. 'ಯಾಕೋ ಯಾರೂ ಮೂಡಲಿಲ್ಲ ಅನ್ನಿಸುತ್ತದೆ ಅಲ್ವ?' ಸುರೇಶನ ಮುಖವೂ ಮ್ಲಾನವಾಗಿತ್ತು. 'ಅಲ್ಲ ಪದ್ದಿ, ನಮ್ಮ ದೇಶ ಎಷ್ಟೆಲ್ಲ ಸಾಧಿಸಿದೆ. ಸ್ವಾತಂತ್ರ್ಯ ಸಿಕ್ಕಾಗಲಿಂದ ಇಲ್ಲಿಯವರೆಗೆ ನಾವು ಚಂದ್ರನ ಬಳಿಯೂ ಹೋಗಿದ್ದೇವೆ. ಆದರೂ ಎಲ್ಲೋ ನಾವು ಇನ್ನೂ ಮುಂದುವರೆಯಬಹುದಿತ್ತು.ಇನ್ನೂ ಬಹಳ ಸಾಧಿಸಬಹುದಿತ್ತು ಅನ್ನಿಸುವುದಿಲ್ಲವೆ? ಜರ್ಮನಿ ವಿಶ್ವ ಯುದ್ಧದ ನಂತರ ಪೂರ್ತಿ ನೆಲ ಕಚ್ಚಿತ್ತು. ಇವತ್ತು ನೋಡು, ಎಲ್ಲಿದೆ? ಇನ್ನು ಜಪಾನ್, ಕೊರಿಯ ಇವುಗಳ ಮಾತು ಬೇರೆಯೆ. ನಾವ್ಯಾಕೆ ಅವರ ಎತ್ತರಕ್ಕೆ ಹೋಗಿಲ್ಲ? ನಮ್ಮ ದೇಶದಲ್ಲಿ ಪ್ರತಿಭೆ ಇಲ್ಲವೆ? ಸೌಕರ್ಯಗಳಿಲ್ಲವೆ? ದುಡ್ಡಿಲ್ಲವೆ? ಎಲ್ಲವೂ ಇದೆ. ಆದರೆ ಅದರ ಹಂಚಿಕೆ ಸರಿಯಿಲ್ಲ, ಅಷ್ಟೆ' ಪದ್ದಿಯೂ ದನಿಗೂಡಿಸಿದಳು 'ಸ್ವಾತಂತ್ರ್ಯ ಬಂದ ಮೇಲೆ ನಮ್ಮ ಪುಢಾರಿಗಳಿಗೆ ಸ್ವೇಚ್ಛೆಯಾಯಿತು ಅಷ್ಟೆ. ದಿನ ಬೆಳಗಾದರೆ ಹಗರಣ, ದುಡ್ಡು ತಿನ್ನುವುದು, ನುಂಗುವುದು ಅತಿ ಸಾಮಾನ್ಯ ವಿಷಯವಾಗಿದೆ. ಎಲ್ಲರೂ ಕಳ್ಳರೆ, ಜನರನ್ನು ಲೂಟಿ ಮಾಡುವವರಿಗೆ ಸೌಕರ್ಯ, ಮತ್ತೂ ದುಡ್ಡು ಮಾಡುವ ಅವಕಾಶ. ಜನ ಸಾಮಾನ್ಯನಿಗೆ ಯಾವ ಸವಲತ್ತುಗಳೂ ಇಲ್ಲ.'

ಇವರಿಬ್ಬರ ದನಿಗೆ ಪಕ್ಕದವರು ದನಿಗೂಡಿಸಿದರು. ನಮಗೆ ಸಿಗುವುದು ಬರೀ ಹತ್ತೂವರೆ ತಿಂಗಳ ಸಂಬಳ ಅಷ್ಟೆ. ಎಲ್ಲಾ ತೆರಿಗೆಗೆ ಹೋಗುತ್ತದೆ. ನಿಮಗೆ ನೆನಪುಂಟಲ್ಲ, ಈ ಶಾಲೆಯ ಬಳಿ ಒಬ್ಬ ಬಡ ಹುಡುಗನ ಮೇಲೆ ಲಾರಿ ಹೋಗಿ ಅವನ ಬೆನ್ನು ಮೂಳೆ ಮುರಿದಿದ್ದು? ಪಾಪ ಚಿಕಿತ್ಸೆಗೆ ದುಡ್ಡಿಲ್ಲದೆ ಅವ ತೀರಿಕೊಂಡುಬಿಟ್ಟ. ಅದೇ ಸಮಯಕ್ಕೆ , ಸಾಕಷ್ಟು ಹಣ ಮಾಡಿದ ಒಬ್ಬ ನಾಯಕನಿಗೆ ಸರಕಾರ ವಿದೇಶಕ್ಕೆ ಹೋಗಿ ಆರೋಗ್ಯ ಸರಿಪಡಿಸಲು ವೆಚ್ಚ ಭರಿಸಿದ್ದು?.. ಹೂಂ, ಸ್ವಾತಂತ್ರ್ಯ ಸಿಕ್ಕಿದ್ದು ದೇಶ ಲೂಟಿ ಮಾಡಲು, ಕಪ್ಪು ಹಣ ಕೂಡಿಸುವರಿಗೆ ರಕ್ಷಣೆ ಕೊಡಲು, ಬೇಕಾಬಿಟ್ಟಿ ಅಧಿಕಾರ ಚಲಾಯಿಸಲು, ಕಾನೂನು ಮೀರಲು, ಚಲನ ಚಿತ್ರಗಳಲ್ಲಿ ಹಿಂಸೆ, ಸ್ವೇಚ್ಛಾಚಾರ, ಅರ್ಥವಿಲ್ಲದ ದೃಶ್ಯಗಳನ್ನು ತೋರಿಸಲು... ನೊಂದ ಅವರ ಆಕ್ರೋಶದ

ಮಾತುಗಳು ಮುಂದುವರೆಯುತ್ತಲೇ ಇತ್ತು. ಪದ್ದಿ ಹಾಗೂ ಸುರೇಶನ ಮನಸ್ಸುಕೂಡ ಕಿರಿಕಿರಿಯಿಂದ ತುಂಬತೊಡಗಿತ್ತು. ಕಾರ್ಯಕ್ರಮ ಮುಗಿಯುವಷ್ಟರಲ್ಲಿ ಇಬ್ಬರ ಮನಸ್ಸೂ ಕೆಟ್ಟಿತ್ತು. ಹಾಳಾಗಿರುವ ಮೂಡ್ ಸರಿ ಹೋಗಲು ಅವರಿಬ್ಬರಿಗೂ ಗೊತ್ತಿದ್ದ ದಾರಿ ಒಂದೆ. ಅವರ ಕಾರು ಮಾಲ್‌ನ ಹಾದಿ ಹಿಡಿಯಿತು. ಪಿಜ್ಜಾ, ಗಾರ್ಲಿಕ್ ಬ್ರೆಡ್, ಕೋಲಾ ಸೇವನೆಯಾದ ಮೇಲೆ ಸ್ವಲ್ಪ ಶಾಪಿಂಗ್, ಇನ್ನು ಸ್ವಲ್ಪ ಬೇಡವಾದ್ದು, ಬೇಕಾದ್ದು ಕೊಳ್ಳುವಾಗ, ಅಲ್ಲೇ ಪಿಕ್ಚರ್ ನೋಡಿ, ಅದರಲ್ಲಿದ್ದ ವಿದೇಶದ ದೃಶ್ಯಗಳನ್ನು ಅಸ್ವಾದಿಸಿ, ರಾತ್ರಿ ಊಟಕ್ಕೆ ರೋಟಿ ಕರ್ರಿ ಪಾರ್ಸೆಲ್ ಮಾಡಿಸಿ, ಸಂಜೆ ಲೇಟಾಗಿ ಮನೆ ಸೇರುವ ಹೊತ್ತಿಗೆ ಎಲ್ಲರ ಮನಸ್ಸು ಪ್ರಶಾಂತವಾಗಿತ್ತು. ಸ್ವಾತಂತ್ರ್ಯ ಸಿಕ್ಕಿದ್ದು ಒಳ್ಳೇದೇ ಆಯಿತು ಕಣೆ. ಇಷ್ಟು ಚಿಕ್ಕ ವಯಸ್ಸಿಗೆ ನಾವಿಬ್ಬರೂ ಐಟಿ ಸೇರಿ ಸ್ವಂತ ಮನೆ, ಕಾರುಕೊಂಡಿದ್ದೇವೆ. ಸಾಕಷ್ಟು ಹಣವೂ ಇದೆ. ನಾವು ಬೇರೆಯವರ ಗುಲಾಮರಾಗಿದ್ದರೆ ಇದೆಲ್ಲಾ ಸಾಧ್ಯವಾಗುತ್ತಿತ್ತೆ? ಅವನ ಮಾತಿಗೆ ಪತ್ರಿಕೆಯಲ್ಲಿ ಅಚ್ಚಾಗಿದ್ದ ಗಾಂಧಿ ತಾತ ನಕ್ಕರು. ಅವರ ಮನೆ ಪಾತ್ರೆ ತೊಳೆಯುತ್ತಾ 15 ದಿನದಲ್ಲಿ ಖರ್ಚಾಗಿ ಹೋದ ಸಂಬಳದ ಬಗ್ಗೆ ಕೊರಗುತ್ತಿದ್ದ ಚೆನ್ನಮ್ಮ ನಿಟ್ಟುಸುರಿಟ್ಟಳು.

✵

## ಕದ್ದು ಕೇಳಿದ್ದು

"ನನ್ನ ರಾಜಾ! ನಿಮ್ಮ ಹೃದಯ ಸಿಂಹಾಸನದ ಮಹಾರಾಣಿ ನಾನು"

"ನಿಜ"

"ರಾಜಾ ನನ್ನ ಕಣ್ಣುಗಳು ನಕ್ಕಷತ್ರಗಳಂತಿವೆ ಅಲ್ಲವೇ"

"ಹೌದು"

"ಮತ್ತೆ ನನ್ನ ಮುಖ, ದೊರೆಯೇ ಹುಣ್ಣಿಮೆಯ ಚಂದ್ರ ಅಲ್ಲವೇ"

"ದಿಟ"

"ಮತ್ತೆ ನನ್ನ ಬಾಹುಗಳು ಕೋಮಲವಾದ ಲತೆಗಳು"

"ಖಂಡಿತ"

"ನನ್ನ ನಡಿಗೆಯನ್ನು ಕಂಡು ನವಿಲು ಕೂಡಾ ನಾಚುತ್ತದೆ"

"ಸತ್ಯವಾಗಿ"

"ನಾನು ನಕ್ಕರೆ ಮುತ್ತುಗಳೇ ಉದುರುವುವು"

"ಹೌದೌದು"

"ಆಹಾ ಪ್ರಿಯತಮಾ, ನೀವೆಷ್ಟು ಕಾವ್ಯಮಯವಾಗಿ ಮಾತಾಡುತ್ತೀರಲ್ಲ"

*(ಸಂಗ್ರಹ) – ಜಯಣ್ಣ*

ಸಿಂಗಪುರ ಪತ್ರ

# ಸಿಂಗ್ಲೀಷ್ ಲಾ

**- ರೇಖಾ ಹೆಗಡೆ ಬಾಳೇಸರ**

**ಆಂಗ್ಲ ಶಬ್ದಗಳಿಗೆ ಉಕಾರಾಂತ ಸೇರಿಸಿದಾಗ ಅವು ಕನ್ನಡ ಶಬ್ದಗಳಾದರೆ ಆ ಆಂ ಇತ್ಯಾದಿ ಸೇರಿಸಿ ಸಿಂಗ್ಲೀಷೀಕರಿಸಬಹುದು**

ಕ್ಲೆಮೆಂಟಿ ಕ್ಯಾನಾ

ಕ್ಯಾನಾ ಎ ವೈ ಯು ಆಸ್ಕ್ ಕ್ಯಾನಾಯು ಟೇಕ್ ಟೆಲ್ ಗೋ ವೇರ್ ಐ ಗೋ ಲಾ

ಮೊನ್ನೆ ಟ್ಯಾಕ್ಸಿ ಹತ್ತಿದಾಗ ಚಾಲಕನೊಂದಿಗೆ ನಡೆದ ಮಾತುಕತೆ ಹೀಗಿತ್ತು. ಕ್ಲೆಮೆಂಟಿಗೆ ಬರ್ತೀರಾ ಎಂದು ಕೇಳಿದ್ದಕ್ಕೆ ಬರ್ತೀನಿ ನೀವು ಕೇಳೋದ್ಯಾಕೆ ಟ್ಯಾಕ್ಸಿ ಹತ್ತಿ ಇಂಥಲ್ಲಿಗೆ ಹೋಗು ಎಂದರೆ ನಾನು ಹೋಗ್ತೀನಿ ಎಂದನಾ ಭೂಪ.

ಏನಿದು ಆಂಗ್ಲ ಭಾಷೆಯ ಥರ ಇದೆ ಆದರೆ ಒಂದು ನಮೂನೆಯಾಗಿ ವಿಚಿತ್ರವಾಗಿ ಇದೆಯಲ್ಲ ಎಂದುಕೊಂಡ್ರಾ ಇದು ಒಂದು ನಮೂನೆಯೇ ಸಿಂಗಪುರ ನಮೂನೆ ಹೆಸರು ಸಿಂಗ್ಲೀಷ್ ಸಿಂಗಪುರ ಇಂಗ್ಲೀಷ್ ಈ ದೇಶದಲ್ಲಿ ನಾಲ್ಕು ಅಧಿಕೃತ ಭಾಷೆಗಳು ಇಂಗ್ಲೀಷ್ ಮಲಯ್ ಮಂಡಾರಿನ್ ಮತ್ತು ತಮಿಳು ಇವು ಸರ್ಕಾರಿ ಮತ್ತು ಆಯಾ ಮಾತೃ ಭಾಷಾ ಮೂಲದವರ ಸ್ವಂತಪರಸ್ಪರ ಬಳಕೆಗೆ ಅದರ ಹೊರತಾಗಿ ಜನಸಾಮಾನ್ಯರ ಅಂತರವರ್ಣೀಯರ ನಡುವೆ ಮಾತುಕತೆ ನಡೆಯುವುದೆಲ್ಲಾ ಸಿಂಗ್ಲೀಷಿನಲ್ಲಿ ಈ ದೇಶದಲ್ಲಿ ವಸಾಹತು ಹೂಡಿದ್ದ ಬ್ರಿಟಿಷರಿಂದಾಗಿ ಇಲ್ಲಿ ಇಂಗ್ಲೀಷ್ ಬೆಳೆಯಿತು. ಇದಕ್ಕೆ ಸ್ಥಳೀಯ ಮಲಯ್ ಚೀನಾ ಮೂಲದ ಮಂಡಾರಿನ್ ಹೊಕ್ಕೇನ್ ಕ್ಯಾಂಟೋನೀಸ್ ಭಾರತೀಯ ತಮಿಳು ಮತ್ತಿತರ ಭಾಷೆಗಳ ಎರವಲು ಶಬ್ದಗಳು ಸೇರಿಕೊಂಡು ಮಿಸಳಭಾಜಿ ಭಾಷೆ ಸಿಂಗ್ಲೀಷ್ ರೂಪುಗೊಂಡಿತು. ಇವತ್ತು ಇಲ್ಲಿನ ಜನ ಇದನ್ನು ತಮ್ಮ ವಿಶಿಷ್ಟ ಗುರುತಾಗಿ ಗೌರವಿಸುತ್ತಾರೆ. ಇಲ್ಲಿಗೆ ಬಂದ ಹೊಸತರಲ್ಲಿ ಮಗರಾಯ ಮತ್ತವನ ಸ್ನೇಹಿತರು ಆಟ ಆಡುವಾಗ ಲಾಮಾಚಿ ಅಲಾಮಾ ವಲ್ಲೌ ಏ ಎಂದೆಲ್ಲಾ ಚಿತ್ರವಿಚಿತ್ರ ಪದಪುಂಜಗಳನ್ನು ಉದುರಿಸುತ್ತಿದ್ದರೆ ತಲೆಬುಡ ಅರ್ಥವಾಗದೇ ಕಣ್ಣುಕಣ್ಣು ಬಿಡುತ್ತಿದ್ದೆ ಉಚ್ಚಾರಣೆಯೂ ಅಷ್ಟೇ ಕಿವಿಗೇ ನೆಟ್ಟಗೆ ತಲುಪುತ್ತಿರಲಿಲ್ಲ. ಇನ್ನು ಮಿದುಳಿಗೆ ತಿಳಿಯುವುದು ಹೇಗೆ ದಿನ ಕಳೆದಂತೆ ಜನಬಳಕೆ ಹೆಚ್ಚಿದಂತೆ ಗೊಂದಲ ಬಗೆ ಹರಿಯಿತು ಮಗ ಗುರುವಾದ ಸಿಂಗ್ಲೀಷ್ ಮಜ ನೀಡಲಾರಂಭಿಸಿತು.

ಸಿಂಗಪುರದ ಜನಸಾಮಾನ್ಯರು ದುಂದುವೆಚ್ಚ ಮಾಡುವವರಲ್ಲ ಆಹಾರ ನೀರು ಸಂಪನ್ಮೂಲ ಎಲ್ಲ ಯಾವುದು ಎಷ್ಟಕ್ಕೆ ಬೇಕೋ ಅಷ್ಟಕ್ಕೆ ಮಾತ್ರ ಬಳಸುವವರು ಎಲ್ಲ ಕೆಲಸದಲ್ಲೂ ಅಚ್ಚುಕಟ್ಟುತನ ಇದೇ ಪ್ರವೃತ್ತಿ ಭಾಷೆಯ ಬಳಕೆಯಲ್ಲಿ ಸಹ ಮೂಲ ಆಂಗ್ಲಭಾಷಿಕರ ತರಹ ಔಪಚಾರಿಕವಾಗಿ ಉದ್ದುದ್ದದ ವಾಕ್ಯ ರಚನೆ ಮಾಡಿ ಅದಕ್ಕೆ ನಯವಿನಯ ಸೌಜನ್ಯ ವ್ಯಾಕರಣಗಳೆಂಬ ಬಣ್ಣ ಬೇಗಡೆ ಹಚ್ಚಿ ಪ್ರೆಸೆಂಟ್ ಮಾಡುವ ಜನ ಇವರಲ್ಲ. ಅದೇ ವಿಷಯವನ್ನು ಒಂದೆರಡು ಶಬ್ದಗಳಲ್ಲಿ ಹೇಳಿ ಮುಗಿಸುತ್ತಾರೆ. ಪರಿಣಾಮ

ಐಯಾಮ್ ಅಫ್ರೈಡ್ ವಿ ಡೋಂಟ್ ಹ್ಯಾವ್ ದ್ಯಾಟ್ ಎನಿಮೋರ್ ನಮ್ಮ ಬಳಿ ಅದು ಉಳಿದಿಲ್ಲ ಎಂಬ ವಾಕ್ಯ ಕಾಲು ಬಾಲ ಕತ್ತರಿಸಿಕೊಂಡು ನೋ ಲಾ ನೋ ಮೋರ್ ಆಲ್‌ರೆಡಿ ಆಗುತ್ತದೆ. ಇಲ್ಲಿ ತುದಿಗೆ ಹಚ್ಚುವ ಲೇಲಾ ಲೊರ್‌ಗಳೇ ಬಣ್ಣ ಸುಣ್ಣ ವ್ಯಾಕರಣ ಎಲ್ಲ.

ಹೆಚ್ಚುವರಿ ಶಬ್ದಗಳನ್ನು ಕೈ ಬಿಡುವುದು ಹೋಗಲಿ ಹೆಚ್ಚಿನ ಶಬ್ದಗಳಲ್ಲಿ ಕೊನೆಯ ದನಿಯನ್ನೇ ಸಿಲ್ಯಾಬಲ್ ನುಂಗಿ ಬಿಡುವ ರೂಢಿ ಸಿಂಗ್ಲೀಷ್ ಭಾಷಿಕರಿಗೆ ಕೆಲ ಆಂಗ್ಲ ಶಬ್ದಗಳಲ್ಲಿ ಸೈಲೆಂಟ್ ಅಕ್ಷರಗಳಿರುತ್ತವೆಯಲ್ಲ ಹಾಗೇ ಸೈಲೆಂಟ್ ಸಿಲ್ಯಾಬಲ್‌ಗಳು ಇವು ಆ ಬಾಯ್ ಗಾಟ್ ಬೆತ್ತರ್ ವರ್ಕ್ ಆರ್ ನಾಟ್ ಆಂಟೀ ತೇಕ್ ಮ್ಯಾಂಗೋ ವೇರಿ ಫ್ರೇಶ್ ಲಾ ಈ ವಾಕ್ಯದಲ್ಲಿ ಕಂಸದಲ್ಲಿರುವ ಅಕ್ಷರಗಳನ್ನು ಕೈಬಿಟ್ಟು ಓದಿಕೊಂಡರೆ ಸಿಂಗ್ಲೀಷ್ ಹೇಗೆ ಕೇಳಿಸುತ್ತದೆ ಎಂದು ತಿಳಿದೀತು.

ಆಂಗ್ಲ ಶಬ್ದಗಳಿಗೆ ಉಕಾರಾಂತ ಸೇರಿಸಿದರೆ ಅವು ಕನ್ನಡ ಶಬ್ದಗಳಾಗುತ್ತವೆ ಎಂಬ ಜೋಕ್ ಇದೆಯಲ್ಲ ಹಾಗೆಯೇ ಆ ಆಂ ಇತ್ಯಾದಿ ಸೇರಿಸಿ ಸಿಂಗ್ಲೀಷೀಕರಿಸಬಹುದು ದ್ಯಾಟ್ ಹೌಸ್ ವೆರಿ ಬಿಗ್ ಪೇ ಕ್ಯಾಶಾ ಹೀಗೆ ಸಾದಾ ಸೀದಾ ಸಕಾರಾತ್ಮಕ ವಾಕ್ಯಗಳಿಗೂ ತುದಿಗೊಂದು ಮೇ ಸೇರಿಕೊಂಡಿತೆಂದರೆ ಎಲ್ಲ ಸಕಾರ ಸದ್ಭಾವಗಳೂ ಮರೆಯಾಗಿ ಅಲ್ಲಿ ಸಂಶಯ ಮೂಡಿಬಿಡುತ್ತದೆ. ಉದಾಹರಣೆಗೆ ಹಿ ಸ್ಪೀಕ್ಸ್ ಸಿಂಗ್ಲೀಷ್ ಸಕಾರಾತ್ಮಕ ಹಿ ಸ್ಪೀಕ್ಸ್ ಸಿಂಗ್ಲೀಷ್ ಮೇ ಅಂದರೆ ಅವನು ಸಿಂಗ್ಲೀಷ್ ಮಾತಾಡ್ತಾನೆ. ನಿಜವಾಗ್ಲೂ ನಾ ನಂಬಲ್ಲ ಎಂದಾಗುತ್ತದೆ ಅಲಾಮಾಕ್ ಆಶ್ಚರ್ಯವಲ್ಲೌ ಆಕ್ಷೇಪ ಆಯೋ ಅಯ್ಯೋ ಇವೆಲ್ಲ ಇಂಥವೇ ಜನಪ್ರಿಯ ಅಭಿವ್ಯಕ್ತಿಗಳು ವಯೋಮಾನಕ್ಕೆ ತಕ್ಕಂತೆ ಪದಬಳಕೆಯೂ ಬೇರೆಯಾಗುತ್ತವೆ.

ನಾನು ಗಮನಿಸಿದ ಮಟ್ಟಿಗೆ ಇಲ್ಲಿನ ಜನ ಅತಿ ಹೆಚ್ಚು ಬಳಸುವ ಬಹೂಪಯೋಗಿ ಶಬ್ದ ಕ್ಯಾನ್ ಮೂಲ ಭಾಷೆಯಲ್ಲಿ ಸಹಾಯಕ ಕ್ರಿಯಾಪದವಾಗಿ ಸಾಧ್ಯತೆಯ ಸಂಕೇತವಾದ ಈ ಶಬ್ದಕ್ಕೆ ಸಿಂಗಪುರ ಒದಗಿಸಿಕೊಟ್ಟಿರುವ ಸಾಧ್ಯತೆಗಳೂ ಅಪಾರ ಇದು ಪ್ರಶ್ನೆಯೂ ಹೌದು ಉತ್ತರವೂ ಹೌದು ಸಾಧ್ಯತೆ ಆಶಾಭಾವವೂ ಹೌದು ಒಂಟಿ ಶಬ್ದವಾಗಿ ಬಳಕೆಯಾದಾಗ ಕೂಡ ಎವೆರಿಥಿಂಗ್ ಕ್ಯಾನ್. ಉದಾಹರಣೆಗೆ ಕ್ಯಾನ್ ಆರ್ ನಾಟ್ ಕ್ಯಾನ್ ಆಗತ್ತಾ ಇಲ್ವಾ ಆಗತ್ತೆ ಸೆಂಟೋಸಾ ಕ್ಯಾನಾ ಕ್ಯಾನ್ ಸೆಂಟೋಸಾ ಹೋಗೋಣ್ವಾ ಹೋಗೋಣ ಕ್ಯಾನ್ ಹಾ ಕ್ಯಾನ್ ಕ್ಯಾನ್ ಪಕ್ಕಾ ಹಾಂ ಪಕ್ಕಾ ಇತ್ಯಾದಿ ಒಟ್ಟಿನಲ್ಲಿ ಎಲ್ಲ ಕಡೆ ಸಲ್ಲುವ ಶಬ್ದ ಉತ್ತರಿಸುವವರ ಮೂಡ್ ಅನುಸರಿಸಿ ಈ ಕ್ಯಾನ್ ನ ದನಿ ಬದಲಾಗುತ್ತ ಹೋಗುತ್ತದೆ. ದನಿ ಏರುತ್ತ ಹೋದಂತೆ ನಿಮ್ಮ ಪ್ರಶ್ನೆಗೆ ಗುರಿಯಾದ ವಸ್ತು ವಿಚಾರ ಪ್ರಸ್ತಾವದ ಸಾಧ್ಯತೆ ಏರುತ್ತ ಹೋಗಿದೆ ಅಥವಾ ಉತ್ತರಿಸುವರ ಕುದಿಬಿಂದು ಇಳಿಯುತ್ತ ಬಂದಿದೆ ಎಂದು ತಿಳಿಯಲಡ್ಡಿಯಿಲ್ಲ ಅಂದ ಹಾಗೆ ಇದರ ವಿರುದ್ಧ ಪದ ಕೆನಾ.

ಭಾರತದಿಂದ ಬಂದವರಿಗೆ ಚೀನಿ ಮೂಲದವರಿಗೆ ಬಹುಶಃ ಏಶಿಯಾದ ಯಾವುದೇ ದೇಶದವರಿಗೆ ಸಿಂಗ್ಲೀಷ್ ಅನುಸರಿಸುವುದು ಕಷ್ಟವಾಗಲಾರದು. ಏಕೆಂದರೆ ಅದರ ವಾಕ್ಯರಚನೆಗಳೆಲ್ಲ ನಮ್ಮ ಭಾಷೆಗಳಂತೆಯೇ ವೈ ಯೂ ಸಿಟ್ ಲೈಕ್ ದ್ಯಾಟ್ ಗಾಟ್ ಹೋಂವರ್ಕ್ ದೆನ್ ಫಿನಿಶ್ ಎಂದರೆ ಯಾಕ್ಹಾಗೆ ಸುಮ್ನೆ ಕೂತ್ಕೊಂಡಿದ್ದೀಯಾ ಹೋಂವರ್ಕ್

ಇದ್ರೆ ಮುಗ್ಸು ಎಂದು ನಮ್ಮವರು ಸುಲಭಕ್ಕೆ ಅರ್ಥ ಮಾಡಿಕೊಂಡಾರು. ಬೆಂಗಳೂರಿನ ಉರ್ದು ಭಾಷಿಕರು ಕ್ಯಾ ಭೀ ನೈ ಎನ್ನುತ್ತಾರಲ್ಲ ಹಾಗೆ ಆದರೆ ಪಾಶ್ಚಿಮಾತ್ಯರು ಸಿಂಗ್ಲೀಷಿನಲ್ಲಿ ಹೇಳೋದಾದ್ರೆ ಆಂಗ್ ಮೋಕೆಂಪು ಕೂದಲಿನವರು ಕಕ್ಕಾಬಿಕ್ಕಿಯಾಗಲೇಬೇಕು. ಅದಕ್ಕೆ ಇರಬೇಕು ಸಿಂಗ್ಲೀಷ್ ಎಂದರೆ ಸಿನ್‌ಫುಲ್ಲೀ ಸಿಂಪಲ್ ಇಂಗ್ಲೀಷ್ ಎನ್ನುತ್ತಾರೆ. ಕೆಲ ಆಂಗ್ಲ ಭಾಷಿಕರು ಸಿಂಗಪುರದ ಸಾಮಾನ್ಯ ಜನರಿಗೆ ಬೇಸರವಿಲ್ಲ, ಬಳಕೆಯ ದೃಷ್ಟಿಯಿಂದ ಭಾಷೆಯನ್ನು ಎಷ್ಟು ಸರಳಗೊಳಿಸಲೂ ಅವರು ತಯಾರು ಎನಿಥಿಂಗ್ ಆಲ್‌ಸೋ ಕ್ಯಾನ್.

ಬೆಂಗಳೂರಿನಲ್ಲಿ ನಾವೊಂದು ನಾಲ್ಕು ಜನ ಹವ್ಯಕ ಭಾಷೆಯಲ್ಲಿ ಮಾತನಾಡುತ್ತಿದ್ದರೆ ಕೇಳಿದವರು ಇದ್ಯಾವ ಭಾಷೆ ಕನ್ನಡದ ಥರಾನೇ ಇದೆ ಆದರೆ ಪೂರ್ತಿಯಾಗಿ ಅರ್ಥ ಆಗಲ್ಲ ಎನ್ನುತ್ತಿದ್ದರು ಮೇಲಿಂದ ಒಳ್ಳೆ ರಾಗವಾಗಿ ಮಾತಾಡ್ತೀರಿ ಎಂಬ ಹಾಸ್ಯ ಬೇರೆ ಈ ಸಿಂಗ್ಲೀಷ್ ಕತೆಯೂ ಅದೇ ನೂರಕ್ಕೆ ತೊಂಬತ್ತರಷ್ಟು ಎಲ್ಲರಿಗೂ ತಿಳಿದಿರುವ ಆಂಗ್ಲ ಶಬ್ದಗಳೇ ಆದರೆ ಮಾತಿನ ಧಾಟಿ ಹೊಸದಾಗಿ ಕೇಳುವವರ ದಾರಿ ತಪ್ಪಿಸುತ್ತದೆ. ಒಂದಿನ ನನ್ನ ಪುಟ್ಟ ಮಗುವನ್ನು ಎತ್ತಿಕೊಂಡು ಅಂಗಡಿಗೆ ಹೋಗಿದ್ದೆ ಕೌಂಟರಿನಲ್ಲಿದ್ದ ಮಹಿಳೆ ಪಾಪುವನ್ನೋಡಿದ್ದೇ ಬೇಬಿ ಆಂ ಸೋ ಶಾಬ್ಬೀ ಪಾಪು ಮಗುವಿನ ಗುಂಡು ಕೆನ್ನೆ ಸವರಿದ ಆಕೆ ಮತ್ತೆ ಬೇಬಿ ಸೋ ಕ್ಯೂಟ್ ಸೋ ಶಬ್ಬೀ ಎಂದಳು ಅವಳ ಮಾತು ಅಲ್ಲದಿದ್ದರೂ ಅಭಿನಯದಿಂದಾಗಿ ಅದು ಶಾಬ್ಬೀ ಅಲ್ಲ ಚಬ್ಬೀ ದುಂಡು ಎಂದು ಅರ್ಥವಾದ ನಂತರವೇ ನನ್ನ ಗಂಟಿಕಿದ್ದ ಹುಬ್ಬು ಸ್ವಸ್ಥಾನಕೆ ಮರಳಿದ್ದು.

ಭಾರತದಲ್ಲಿರುವ ಆಂಟಿಅಂಕಲ್ ಹಾವಳಿ ಇಲ್ಲಿಯೂ ಇದೆ ಬೆಂಗಳೂರಿನಲ್ಲಿ ಮದುವೆಯಾದ ಹೆಂಗಸೆಲ್ಲ ಆಂಟಿಯರು ಇಲ್ಲಿ ಯಾರಿಗೆ ಯಾರು ಬೇಕಾದರೂ ಆಂಟಿಅಂಕಲ್ ಮೂವತ್ತರ ನಿಮಗೆ ಅರವತ್ತರವನಂತೆ ಕಾಣುವ ಅಂಗಡಿಯಾತ ಆಂಟಿ ದ್ಯಾಟ್ ವನ್ ವೆರಿ ತೇಸ್ಟೀ ಬೈ ಮೋರ್ ಲಾ ಎಂದರೆ ಅದು ತೀರಾ ಸಾಮಾನ್ಯ ಸಂಬೋಧನೆ ಚೀನೀ ಮೂಲದ ಜನರಲ್ಲಿ ಈ ಬಳಕೆ ಜಾಸ್ತಿ ಜನಬಳಕೆಯಲ್ಲಿ ಸಿಂಗ್ಲೀಷ್ ಇಷ್ಟು ಹಾಸುಹೊಕ್ಕಾಗಿದ್ದರೂ ಸರ್ಕಾರ ಮಾತ್ರ ಜಾಗತಿಕ ಮಟ್ಟದಲ್ಲಿ ದೇಶದ ಇಮೇಜ್ ಕೆಡಬಾರದೆಂಬ ಉದ್ದೇಶದಿಂದ ಶುದ್ಧ ಇಂಗ್ಲೀಷ್ ಬಳಕೆಗೆ ಒತ್ತು ನೀಡುತ್ತದೆ ಪರಿಣಾಮ ಜನ ಸಹೋದ್ಯೋಗಿಗಳೊಂದಿಗೆ ಶುದ್ಧ ಇಂಗ್ಲೀಷಿನಲ್ಲಿ ಕಚೇರಿಯ ಹೊರಗೆ ಸಿಂಗ್ಲೀಷಿನಲ್ಲಿ ಮಾತನಾಡುತ್ತಾರೆ ಶಾಲೆಗಳಲ್ಲಿ ಆಂಗ್ಲ ಭಾಷೆಯೇ ಕಲಿಕಾ ಮಾಧ್ಯಮ ಆಗಿರುವುದರಿಂದ ಎಲ್ಲರಿಗೂ ಶುದ್ಧ ಇಂಗ್ಲೀಷ್ ಗೊತ್ತು ತೀರಾ ಹಳಬರನ್ನು ಹೊರತುಪಡಿಸಿ ಮಕ್ಕಳು ಶಾಲೆಯೊಳ ಹೊಕ್ಕರೆ ಇಂಗ್ಲೀಷ್ ಶಿಸ್ತು ಆಟದ ಮೈದಾನದಲ್ಲಿ ಸಿಂಗ್ಲೀಷ್ ಮಸ್ತಿ ಶಿದ್ಧ ಆಂಗ್ಲ ಭಾಷೆ ತೀರಾ ಔಪಚಾರಿಕವೆನಿಸಿದರೆ ಸಿಂಗ್ಲೀಷ್ ಆ ಔಪಚಾರಿಕತೆಯ ಬೇಲಿ ಕಿತ್ತೆಸೆದು ಜನರನ್ನು ಬೆಸೆಯುತ್ತದೆ. ಹಾಗಾಗಿಯೇ ಇತರ ಎಲ್ಲಾ ವಿಷಯದಲ್ಲಿಯೂ ಸರ್ಕಾರದ ಆದೇಶವನ್ನು ಕಟ್ಟುನಿಟ್ಟಾಗಿ ಪರಿಪಾಲಿಸುವ ಜನ ಸಿಂಗ್ಲೀಷನ್ನು ಮಾತ್ರ ತಮ್ಮ ಮನೆ ಮನದಿಂದ ದೂರ ಮಾಡಿಲ್ಲ ಹೆಮ್ಮೆಯಿಂದ ಹತ್ತಿರ ಇಟ್ಟುಕೊಂಡಿದ್ದಾರೆ.

ಒಕೆ ಲಾ ಬೈ ಬೈ ಆಲ್‌ರೆಡಿ.

# ಐಟಿ ಮಂದಿ ಎಂಬ ಮಾನವ ಪ್ರಕಾರವು

**- ಸೂರಿ ಹಾರ್ದಳ್ಳಿ**

ಎದುರು ಯಾರೂ ಇಲ್ಲದಿದ್ದರೂ ಒಬ್ಬಂಟಿಯಾಗಿಯೇ ಮಾತನಾಡುತ್ತಾ ಅಥವಾ ಕರ್ಣಕ್ಕೆ ಅಪ್ಪಳಿಸುವಂತೆ ಸಿನೆಮಾ, ಬಹುವಾಗಿ ಹಿಂದಿ, ತಪ್ಪಿದರೆ ತಮಿಳು ಗೀತೆಗಳನ್ನು ಕೇಳುತ್ತಾ, ಉತ್ಕಟ ಕ್ಷಣಗಳಲ್ಲಿ ತಲೆ ತೂಗಿಸುವ, ರಾಗ ಸೇರಿಸುವ, ಗುಣುಗುಣಿಸುವ, ಅಂತೆಯೇ ಸಾಗುವ, ಪರಲೋಕದ ಜೀವಿಗಳಂತೆ ಕಾಣುವ, ಕೆಲವರು ಮೊದಲು ನನ್ನಲ್ಲಿ ಅಚ್ಚರಿ ಮೂಡಿಸಿದ್ದರೂ ನಂತರ ಅವರು ಕಿವಿಯಲ್ಲಿ ನೀಲಿ ಹಲ್ಲು (ಬ್ಲೂ ಟೂತ್ ಎಂಬ ಪದದ ಕನ್ನಡಾವತಾರ) ಸಿಕ್ಕಿಸಿಕೊಂಡು ಸಾಗುವ ಒಂದು ಮಾನವ ಪ್ರಕಾರ, ಅವರನ್ನ ಐಟಿ ಮಂದಿ ಎಂದು ಕರೆಯುತ್ತಾರೆ ಎಂದು ನನ್ನ ಹೆಂಡತಿ ಹೇಳಿದಳು. ಅವಳು ಹೇಳಿದ ಮೇಲೆ ನಂಬಲೇಬೇಕು - ನಾನು ಒಪ್ಪಿದೆ. ಕಂಪ್ಯೂಟರ್ ಎಂಬ ಒಂದು ಸಾಧನ ಭಾರತಕ್ಕೆ ಬಂದ ಮೇಲೆ ಕೀಬೋರ್ಡುಗಳ ಮೇಲೆ ಕೈ ಆಡಿಸುವವರೆಲ್ಲರೂ ಈ ಕೆಟಗರಿಗೆ ಸೇರಲ್ಪಟ್ಟು, ಅವರು ಇತರ 'ಹುಲುಮಾನವ'ರಿಗಿಂತ ವಿಭಿನ್ನರಾಗಿ ವರ್ತಿಸತೊಡಗಿದರು.

ಭಾರತ ಎಂಬ ಮಹಾನ್ ದೇಶದಲ್ಲಿ ಕಳೆದ ದಶಕದಿಂದ ಐಟಿ ಬಿಟಿ ಮಂದಿ ಎಂಬ ಹೊಸ ಪ್ರಕಾರದ ಮಾನವ ಪ್ರಬೇಧಗಳ ಉಗಮವನ್ನು ಕಾಣತೊಡಗಿದ್ದೇವೆ. ದೇಶದಲ್ಲಿಯೇ ತಳವೂರಿದ್ದರೂ ದೇಶಕ್ಕೂ ತಮಗೂ ಸಂಬಂಧವಿಲ್ಲ, ತಮ್ಮ ಸೇವೆ ಎಂದಿಗೂ ಅಮೆರಿಕ, ಜರ್ಮನಿ, ಯುಕೆಗಳಿಗೆ ಮಾತ್ರ ಎಂಬ ಭ್ರಮಾಲೋಕದಲ್ಲಿ ತೇಲುತ್ತಿರುವ ಇವರ ಚರ್ಯೆಗಳು ಇತರ ಮಾನವರನ್ನು ಹೋಲುತ್ತಿದ್ದರೂ ಅವರ ಮನೋಸ್ಥಿತಿ ಮಾತ್ರ ಬೇರೆಯೇ ಬೇರೆ. ಅವರು ಮೊದಲು ನಮ್ಮ ನಿಮ್ಮ ಹಾಗೆಯೇ ಇದ್ದರೂ ಐಟಿ ಬಿಟಿ ಎಂಬ ಭೂತವನ್ನು ತಮ್ಮ ಮೇಲೆ ಆಹ್ವಾನಿಸಿಕೊಂಡ ಅವರು ದೇಶದ ಭಾಷೆಯನ್ನು ಮರೆಯುವುದೇ ಮೊತ್ತ ಮೊದಲು ಮಾಡುವ ಕೆಲಸ. ಅದರಲ್ಲಿಯೂ ಕನ್ನಡ ತಾಯಿಯ ಗರ್ಭ ಸಂಜಾತರಂತೂ ತಮ್ಮ ಕನ್ನಡವನ್ನ ಇಡು, ಬೇಡ, ಮಾಡು, ಮೊದಲಾದ ತುಣುಕು ಪದಗಳಿಗೆ ಮಾತ್ರ ಸೀಮಿತಗೊಳಿಸಿ ಇಂಗ್ಲಿಷೇ ತಮ್ಮ ಸರ್ವಸ್ವ ಎಂದು ಬೀಗುತ್ತಿದ್ದರೂ ತುಸು ತುಸು ಮಲಯಾಳಂ ಮತ್ತು ಹಿಂದಿಗಳನ್ನು ಬಲ್ಲವರಾಗಿರುತ್ತಾರೆ. ಯಾಕೆಂದರೆ ಬಾಸ್‌ಗಳು ಉತ್ತರ ಭಾರತದವರು ಮತ್ತು ಸಹೋದ್ಯೋಗಿಗಳು ಮಲಯಾಳಿಗಳಾಗಿರುವುದು.

ಇವರ ತಲೆ ಭುಜದ ಮೇಲೇ ಇದ್ದರೂ, ಬಾಯಿ ಮುಖದಲ್ಲಿಯೇ ಇದ್ದರೂ, ಇವರು ಮಾತನಾಡುವುದು ಕಡಿಮೆ. ಕೈಲಿ ಎರಡೆರಡು ಮೊಬೈಲ್ ಫೋನ್‌ಗಳು, ಹೆಗಲಲ್ಲಿ ಲ್ಯಾಪ್‌ಟಾಪ್ ಅಥವಾ ಇತ್ತೀಚೆಗೆ ಬಳಕೆಗೆ ಬಂದ ಟ್ಯಾಬ್ಲೆಟ್ ಇಟ್ಟುಕೊಂಡಿರುತ್ತಾರೆ. ಅವುಗಳ ಬಳಕೆಯೇ ಸಂಪರ್ಕ ಸಾಧನಗಳು. ಹೆಂಡತಿಯೊಂದಿಗೆ ಮಾತನಾಡಲೂ, ಮಕ್ಕಳೊಡನೆ ಸಂಪರ್ಕದಲ್ಲಿರಲೂ ಅವರು ಈ ಯಂತ್ರವನ್ನೇ ಅವಲಂಬಿಸಿರುತ್ತಾರೆ. ಮಕ್ಕಳನ್ನು ನೋಡಿಕೊಳ್ಳಲು ಆಯಾಗಳಿರುತ್ತಾರೆ. ಅವರೂ ಪಾಪ, ಹೆತ್ತವರ ಮುಖ ದರ್ಶನ ಮಾಡಲು

ಭಾನುವಾರ ಬರುವುದನ್ನೇ ಕಾಯಬೇಕು. ಆದರೆ ಆದಿತ್ಯವಾರವು ಶಾಪಿಂಗ್ ದಿನ, ಸಿನೆಮಾ ನೋಡುವ ದಿನ, ನಿದ್ರಿಸುವ ದಿನ. ಅವತ್ತೂ ಮಕ್ಕಳು ಆಯಾಗಳ ಅಡಿಯಲ್ಲಿ.

ವೃದ್ಧಾಶ್ರಮದಲ್ಲಿರುವ ತಂದೆ-ತಾಯಿಯರಿಗೆ ಈ ತಂತ್ರಜ್ಞಾನ ತಿಳಿದಿರುವುದಿಲ್ಲವಾದ ಕಾರಣ ವರ್ಷಕ್ಕೊಂದು ಶುಭಾಶಯ ಪತ್ರಗಳನ್ನು ಕಳುಹಿಸುತ್ತಾರೆ. ಅವರು ಸಮಾಜದಲ್ಲಿ ಜಂಟಿ ಜೀವಿಗಳಾದರು ಒಬ್ಬಂಟಿಯಾಗಿಯೇ ಇರುವುದನ್ನು ಇಷ್ಟಪಡುತ್ತಾರೆ. ಪತಿ-ಪತ್ನಿಯರು ಸಂಭಾಷಿಸುವುದು ಬಲು ಕಡಿಮೆ, ಬಹುಶಃ ಇಲ್ಲವೆಂದರೂ ಇಲ್ಲವೆನ್ನಬಹುದು.

ಅವರು ಮಾತನಾಡಿದರೆ ಅವರ ಜ್ಞಾನವು ಅಮೆರಿಕೆ, ಲಂಡನ್‌ಗಳ ಬಗ್ಗೆ ಎಷ್ಟೊಂದಿದೆ ಎಂಬುದರ ಬಗ್ಗೆ ನಿಮಗೆ ಅಭಿಮಾನ ಉಂಟಾಗುತ್ತದೆ. ಆದರೆ ರಾಜ್ಯದ ಮುಖ್ಯಮಂತ್ರಿ ಯಾರು ಎಂಬ ಬಗ್ಗೆ ಅವರ ಜ್ಞಾನ ಶೂನ್ಯ. ಅವರ ಆಹಾರವು ಪಿಜ್ಜಾ, ಬರ್ಗರ್, ಕೇಕ್‌ಗಳಾಗಿರುತ್ತವೆ ಮತ್ತು ಅವುಗಳನ್ನು ಮನೆಯಲ್ಲಿ ತಯಾರಿಸುವುದಿಲ್ಲ, ಬದಲಿಗೆ ಫೋನಿಸಿ ಮನೆಗೇ ತರಿಸಿಕೊಳ್ಳುತ್ತಾರೆ. ಉಳಿದುದನ್ನು ರೆಫ್ರಿಜರೇಟರಿನಲ್ಲಿ ಇಟ್ಟು ಮರುದಿನ ತಿನ್ನುತ್ತಾರೆ. ಇಡಲಿ, ದೋಸೆ, ಅನ್ನ, ಸಾಂಬಾರು ಎಂಬ ಆಹಾರಗಳೆಲ್ಲಾ ಹಿಂದಿನ ಅನಾಗರಿಕರು ಹೊಟ್ಟೆ ತುಂಬಿಸಿಕೊಳ್ಳಲು ಕಬಳಿಸುತ್ತಿದ್ದ ಕೆಳ ದರ್ಜೆಯ ಆಹಾರಗಳು ಎಂಬುದು ಅವರ ಅಂಬೋಣ. ಆಹಾರ ಸೇವನೆಗೆ, ನಿದ್ರೆಗೆ ಇವರಿಗೆ ನಿಗದಿತ ಹೊತ್ತು ಎಂಬುದಿಲ್ಲವಾದ ಕಾರಣ ಡಾಕ್ಟರುಗಳ ವಲಯದವರಿಗೆ ಇವರೆಂದರೆ ಬಲು ಅಕ್ಕರೆ. ಕಂಪನಿಯೇ ಚಿಕಿತ್ಸೆ, ಔಷಧೋಪಚಾರಗಳ ಖರ್ಚನ್ನು ವಹಸಿಕೊಳ್ಳುವುದರಿಂದ ಇವರು ಸದಾ ದೊಡ್ಡ ಆಸ್ಪತ್ರೆಗಳನ್ನೇ ಆಶ್ರಯಿಸುವುದರಿಂದ ವೈದ್ಯಮಹಾಶಯರ ಏಳಂತಸ್ತಿನ ಮನೆಗೆ ಆರು ಮಹಡಿಗಳನ್ನು ಕಟ್ಟಲು ಇವರೇ ಹಣ ಸಹಾಯ ಮಾಡಿರುತ್ತಾರೆ. ಔಷಧ ತಯಾರಿಸುವ ಕಂಪನಿಗಳಿಗಂತೂ ಈ ಮಾನವ ಪ್ರಕಾರವೇ ಆಸ್ತಿ. ಯಾಕೆಂದರೆ ಕೈಯಲ್ಲಿ ನೇತಾಡುವ ಟ್ಯಾಬ್ಲೆಟ್‌ಗಳಷ್ಟೇ ತೂಕದ ಟ್ಯಾಬ್ಲೆಟ್(ಮಾತ್ರೆ)ಗಳನ್ನು ಇವರು ಜೊತೆಯಲ್ಲಿಯೇ ಸಾಗಿಸುತ್ತಿರುತ್ತಾರೆ.

ಇಂಟರ್‌ನೆಟ್ ಜೋಕುಗಳೇ ನಗು ಎಂಬ ಖಡಾ ಖಂಡಿತ ಧೋರಣೆಯನ್ನುಳ್ಳ ಅವರುಗಳು ಬಾಯಿ ಬಿಟ್ಟು ನಗುವುದು ಕಡಿಮೆ. ಹಾಗಾಗಿ ಅವರ ಧ್ವನಿಪೆಟ್ಟಿಗೆಗಳು ಕಟ್ಟಿಕೊಂಡು ಅಲ್ಲಿ ಗರಗರ ಸದ್ದು ಮಾತ್ರ ಹೊರಟು ಸ್ವರ ಹೊರಡುವುದು ಬಲು ಕಠಿಣವಾಗಿರುತ್ತದೆ. ಸದಾ ಫೋನುಗಳಲ್ಲಿಯೇ ಸಂಭಾಷಿಸುವುದರಿಂದ, ಏರುಗತಿಯ ಧ್ವನಿ ಅಲ್ಲಿ ನಿಷಿದ್ಧವಾದುದರಿಂದ ಅವರ ಧ್ವನಿ ಪೀಚಲಾಗಿರುತ್ತದೆ ಮತ್ತು ಗಟ್ಟಿಯಾಗಿ ಕೂಗಿದರೆ ಬಿರುಸುಗೊಂಡ ಎದೆಗೂಡು ಸಿಡಿದು ಪ್ರಾಣಕ್ಕೇ ಅಪಾಯವಾಗುವ ಸಂಭವವಿರುತ್ತದೆ.

ಇವರಿಗೆ ರಾತ್ರಿ-ಹಗಲುಗಳ ನಡುವಿನ ವ್ಯತ್ಯಾಸ ತಿಳಿದಿರುವುದಿಲ್ಲ ಎರಡೂ ಒಂದೇ ಅವರಿಗೆ. ಯಾವಾಗ ಮನೆಗೆ ಬರುತ್ತಾರೆ, ಯಾವಾಗ ಕಚೇರಿಗೆ ಹೋಗುತ್ತಾರೆ ಎಂಬುದು ಅವರಿಗೂ ತಿಳಿದಿರುವುದಿಲ್ಲ, ಆಕಾಶ, ಚಂದ್ರ - ಸೂರ್ಯರು, ಸೂರ್ಯಾಸ್ತ -

ಸೂರ್ಯೋದಯಗಳನ್ನು ಎಂದಿಗೂ ನೇರವಾಗಿ ಕಂಡಿರದ ಅವರು ಅದರ ಸೌಂದರ್ಯವನ್ನು ಆಸ್ವಾದಿಸುವುದು ಕಂಪ್ಯೂಟರ್ ಪರದೆಯ ಮೇಲೆಯೇ. ತಂಗಾಳಿ, ಶೀತಗಾಳಿ, ಬಿಸಿಲು, ಇವುಗಳಿಗೆ ಅವರ ಚರ್ಮ ಎಂದಿಗೂ ಹೊಂದಾಣಿಕೆ ಮಾಡಿಕೊಳ್ಳುವುದಿಲ್ಲ, ಯಾಕೆಂದರೆ ಅವರು ಇರುವುದೇ ಹವಾನಿಯಂತ್ರಿತ ಕಚೇರಿಗಳಲ್ಲಿ. ಶನಿವಾರ ಭಾನುವಾರಗಳಂದೂ ಅವರು ಬೆಳಕಿಗೆ ಕಣ್ಣು ಬಿಡುವುದು ಹತ್ತು ಗಂಟೆಯ ನಂತರವೇ. ಕಚೇರಿಗಳಲ್ಲಿ ಕ್ಯುಬಿಕ್ ಎಂಬ ಕೋಶವೇ ಅವರ ಪ್ರಪಂಚ. ಸಾವಿರಾರು ಸಹೋದ್ಯೋಗಿಗಳಿದ್ದರೂ ಅವರು ಹೆಸರಿನಿಂದ ಬಲ್ಲವರೇ ಹೊರತು ಮುಖತಃ ಅಪರಿಚಿತರು. ಈ ಕಂಪನಿಗಳವರಿಗೆ ಮನೆಯಲ್ಲಿಯೇ ಕೆಲಸ ಮಾಡುವ ಸೌಲಭ್ಯ ಇರುವುದರಿಂದ ಕಚೇರಿಗೆ ಬರದೆಯೂ ಸಂಬಳ ತೆಗೆದುಕೊಳ್ಳುವ ವ್ಯವಸ್ಥೆ ಇದೆ. ಹಾಗಾಗಿ ಇ-ಮೇಲ್ ಒಂದೇ ಸಂಪರ್ಕ ಸಾಧನವಾಗಿದೆ.

ವಾರಕ್ಕೊಂದು ದಿನ ಹತ್ತಿರದ ಮಾಲ್‌ಗಳಿಗೆ ನುಗ್ಗುತ್ತಾರೆ. ಅಲ್ಲಿ ಟ್ರಾಲಿ ದೂಡಿಕೊಂಡು, ತಮಗೆ ಏನು ಬೇಕೋ ಆ ಸಾಮಗ್ರಿಗಳನ್ನು ಅದರಲ್ಲಿ ಹಾಕಿಕೊಳ್ಳುತ್ತಾರೆ. ಆ ಸಾಮಗ್ರಿಗಳಲ್ಲಿ ಇನ್‌ಸ್ಟಂಟ್ ಆಹಾರ ತಿನಿಸುಗಳೇ ಹೆಚ್ಚು. ಅವುಗಳ ದರವನ್ನಾಗಲೀ, ಎಕ್ಸಪಯರಿ ಡೇಟ್‌ಗಳನ್ನಾಗಲೀ ಅವರು ನೋಡುವುದಿಲ್ಲ. ವಸ್ತುಗಳನ್ನು ಕೊಳ್ಳುವಾಗ ಚರ್ಚೆ ಮಾಡುವುದು, ಚೌಕಾಸಿ ಮಾಡುವುದು ಇವರ ಪ್ರತಿಷ್ಠೆಗೆ ಭಂಗ ತರುತ್ತದೆ. ಕ್ರೆಡಿಟ್ ಕಾರ್ಡ್ ಉಜ್ಜಿ ಅವನ್ನು ಕಾರಿನಲ್ಲಿ ಹಾಕಿಕೊಂಡು ಮನೆಗೆ ತರುತ್ತಾರೆ. ಎಷ್ಟು ಸಾಮಾನು ಕೊಂಡಿದ್ದೇವೆ, ಬಿಲ್‌ಗಳಲ್ಲಿ ಅವುಗಳ ಸಂಖ್ಯೆ ಸರಿಯಾಗಿದೆಯೇ, ದರ ಸಮರ್ಪಕವಾಗಿದೆಯೇ ಎಂಬ ಸಾಮಾನ್ಯ ಮನುಷ್ಯರ ಯೋಚನಾ ಲಹರಿಯು ಇವರಿಗೆ ಅನ್ವಯವಾಗುವುದಿಲ್ಲವಾದ ಕಾರಣ ಮಾಲ್ ಮಂದಿಗೆ ಇವರೆಂದರೆ ಒಂದಿಷ್ಟು ಹೆಚ್ಚೇ ಅಕ್ಕರೆ. ಸರಕಾರಿ ಬಸ್‌ಗಳಲ್ಲಿ ಎಂದೂ ಪ್ರಯಾಣಿಸದ ಮಂದಿ ಇವರು ಪ್ರಯಾಣಿಸಿದರೂ ವೋಲ್ವೋ ಹವಾ ನಿಯಂತ್ರಿತ ಬಸ್‌ಗಳಲ್ಲಿ ಮಾತ್ರ ಕುಳಿತಾರು.

ಹೀಗೆ ಕೊಂಡು ತಂದ ಸಾಮಗ್ರಿಗಳನ್ನು ಫ್ರಿಜ್‌ನಲ್ಲಿ ತುಂಬಿಸಿ, ಅವು ಹಳಸಿದ ಮೇಲೆಯೇ ತಿನ್ನುವುದು ರೂಢಿ. ಆದರೆ ಅವುಗಳು ಹೇಗೆ ಗಂಟಲಲ್ಲಿ ಇಳಿಯುತ್ತವೆ ಎಂಬುದು ಚೋದ್ಯವೇ? ಬೇಡ, ಆ ಹೊತ್ತಿನಲ್ಲಿ ಅವರ ಕಣ್ಣುಗಳು ಟಿವಿಯಲ್ಲಿ ಹುಗಿದುಹೋಗಿರುತ್ತವೆ. ಕತ್ರೀನ ಕೈಫ್ ಮುಖ ನೋಡುತ್ತಿರುವಾಗ ಷಡ್ರಸಗಳ ಗಣನೆ ಜಿಹ್ವಾಗ್ರಕ್ಕೆ ಆಗುವುದಿಲ್ಲ.

ಇವರು ನೀರು ಕುಡಿಯುವುದಿಲ್ಲ, ಕೋಲಾಗಳು, ಬಾಟಲಿ ಪಾನೀಯಗಳು ಇವರ ಹೊಟ್ಟೆಯನ್ನು ತುಂಬುತ್ತವೆ. ಯಾಕೆಂದರೆ ಬೆಂಗಳೂರಿನಲ್ಲಿ ಶುದ್ಧ ನೀರು ಸಿಗುವುದು ದುರ್ಲಭವಾಗುತ್ತಿದೆ. ಆದರೆ ಬಾಟಲಿ ಪಾನೀಯಗಳು ಶುದ್ಧವೆಂದು ಅವರು ನಂಬಿದ್ದಾರೆ. ಒಂದೇ ಮನೆಯಲ್ಲಿ ವರ್ಷಗಟ್ಟಲೆ ವಾಸಿಸುತ್ತಿದ್ದರೂ ಅಕ್ಕಪಕ್ಕದ ಮನೆಗಳಲ್ಲಿ ಯಾರಿದ್ದಾರೆ ಎಂಬುದು ಅವರಿಗೆ ತಿಳಿದಿರುವುದಿಲ್ಲ. ಎಟಿಎಂ ಕಾರ್ಡು ಬಳಸಿ ಹಣ ಡ್ರಾ ಮಾಡಿದರೂ ಅಕೌಂಟಿನಲ್ಲಿ ಎಷ್ಟು ಹಣವಿದೆ, ಯಾವ ಯಾವ ರಸೀದಿ, ಸಂದಾಯಗಳನ್ನು ಮಾಡಲಾಗಿದೆ

ಎಂಬುದನ್ನು ಗಮನಿಸುವುದಿಲ್ಲ. ಹೀಗೆ ಪ್ರಪಂಚದ ಆಗುಹೋಗುಗಳನ್ನು ತೃಣ ರೂಪದಲ್ಲಿ ನೋಡುವ ಇವರನ್ನು ವಿಚ್ಛೇದನ (ಡೈವೋರ್ಸ್) ಲಾಯರುಗಳು ಬಲು ಪ್ರೀತಿಸುತ್ತಾರೆ.

ಕಂಪ್ಯೂಟರ್ ಗೇಮ್‌ಗಳ ರಾಶಿಯೇ ಅವರಲ್ಲಿದ್ದು, ಟಿವಿ/ಫೋನ್ ಪರದೆಯ ಮೇಲೆ ಕಣ್ಣು ಕೀಲಿಸಿ ಆಡುವುದರಿಂದ ತಮ್ಮ ಆರೋಗ್ಯ ಸುಧಾರಿಸುತ್ತದೆ ಎಂದು ಬಲವಾಗಿ ನಂಬಿರುತ್ತಾರೆ ಅವರು. ಕಣ್ಣುಗಳನ್ನು ದಪ್ಪದ ಕನ್ನಡಕ ಆವರಿಸಿದ್ದರೂ ಅವರು ಚಿಂತಿಸುವುದಿಲ್ಲ. ಅವರ ಫೋನ್‌ಗಳ ಕಾಂಟಾಕ್ಟ್ ನಂಬರ್ ನೋಡಿದರೆ ಮಲ್ಟಿಪ್ಲೆಕ್ಸ್ ಸಿನೆಮಾ ಥಿಯೇಟರುಗಳ, ಪಿಜ್ಜಾ ಕಾರ್ನರ್‌ಗಳ ಸಂಖ್ಯೆಗಳು ಮಾತ್ರ ಇರುತ್ತವೆ. ಪಿಜ್ಜಾದವನು ನಿಗದಿತ ಅರ್ಧ ಗಂಟೆಗಿಂತ ತಡವಾಗಿ ಬಂದು, ಅರ್ಧ ಬೆಲೆಗೆ ಪಿಜ್ಜಾ ಕೊಟ್ಟರೆ ತುಂಬಾ ಖುಷಿಪಡುತ್ತಾರೆ, ಆದರೆ ಆ ಪಿಜ್ಜಾದ ಬೆಲೆ ಮಸಾಲೆ ದೋಸೆಗಿಂತ ಹತ್ತು ಪಟ್ಟು ಎಂಬುದು ಅವರ ಅರಿವಿಗೆ ಬರುವುದಿಲ್ಲ.

ಸ್ಪಾ, ಜಿಮ್ ಕೇಂದ್ರಗಳಿಗೆ ಇವರೆಂದರೆ ತುಂಬಾ ಒಲವು. ಇನ್‌ಸ್ಟಂಟ್ ಆಹಾರ ತಯಾರಿಸುವವರಿಗೂ ಇವರು ಇಷ್ಟ. ಇವರು ನಿಶಾಚರಿಗಳಾಗಿದ್ದರಿಂದ ಬೆಳಗ್ಗೆ ಏಳುವುದೇ ಹತ್ತರ ನಂತರ, ಮಲಗುವುದು ಅರ್ಧ ರಾತ್ರಿ ಕಳೆದ ಮೇಲೆ.

ತಮ್ಮ ಹತ್ತಿರದ ಸಂಬಂಧಿಕರ ಮನೆಗಳಿಗೆ ಹತ್ತಾರು ವರ್ಷಗಳ ಕಾಲ ಹೋಗದ ಅವರು ತಿಂಗಳಿಗೆರಡು ಸಲ ಅಮೆರಿಕ, ಜರ್ಮನಿ, ಜಪಾನ್ ಎಂದು ಸುತ್ತುತ್ತಾರೆ. ಇವತ್ತು ಟೊಮೆಟೋ ಬೆಲೆ ಎಷ್ಟು ಎಂಬುದು ತಿಳಿದಿರದಿದ್ದರೂ ಡಾಲರ್‌ನ ಜೊತೆಗೆ ರೂಪಾಯಿಯ ವಿನಿಮಯ ಬೆಲೆ ಎಷ್ಟು ಎಂಬುದನ್ನು ತಕ್ಷಣದಲ್ಲಿಯೇ ಹೇಳುತ್ತಾರೆ.

ಮನೆಗೆ ದಿನಪತ್ರಿಕೆ ತರಿಸೋಲ್ಲ, ಎಲ್ಲಾ ಆನ್‌ಲೈನ್.

ದೊಡ್ಡ ದೊಡ್ಡ ಮಗ್‌ಗಳಲ್ಲಿ ಕಾಫಿ, ಅದೂ ಚಲಿಸುತ್ತಾ. ಒಂದು ಕೈಲಿ ಮೊಬೈಲ್. ಹಾಗಾಗಿ ಕಾಫಿಯ ರುಚಿ ಹೇಗಿದ್ದರೂ ನಡೆಯುತ್ತದೆ.

ಬೆಳಗ್ಗೆ ಎದ್ದ ತಕ್ಷಣ ಮಾಡೋ ಕೆಲಸ ಎಂದರೆ ಮೊಬೈಲ್ ಹಿಡಿದು ಎಸ್.ಎಮ್.ಎಸ್. ಪರೀಕ್ಷಿಸೋದು.

ಮಲಯಾಳಿ ಖಂಡಿತವಾಗಿ ಬರಬೇಕು ಯಾಕೆಂದರೆ ಐಟಿ ಕಂಪನಿಗಳೆಲ್ಲಾ ಮಲಯಾಳಿಗಳ ಹಿಡಿತದಲ್ಲಿವೆ.

ಕೆಟ್ಟದಾಗಿ ಕಂಡರೂ ದುಬಾರಿ ಬೆಲೆಯ ಬ್ರಾಂಡೆಡ್ ಬಟ್ಟೆ ಖರೀದಿಸಬೇಕು. ಅವು ವಿದೇಶೀ ಕಂಪನಿಗಳದ್ದಾದರೆ ಒಳ್ಳೆಯದು. ಕೆಲವೇ ದಿನಗಳ ನಂತರ ಅದು ಕೆಲಸದವರ ಪಾಲಿಗೆ.

ಉತ್ಪ್ರೇಕ್ಷೆಗಾಗಿ ಕ್ಷಮೆ ಇರಲಿ!

# ಅವಳು ತಾಯಿ

**- ಬೇಲೂರು ರಾಮಮೂರ್ತಿ**

ಅದೊಂದು ದೊಡ್ಡ ಕಟ್ಟಡ ನಿರ್ಮಾಣ ಕಾರ್ಯ ನಡೆಯುತ್ತಿದ್ದ ಸ್ಥಳ. ನೂರಾರು ಜನ ಕೆಲಸ ಮಾಡಿ ಹತ್ತಾರು ಅಂತಸ್ತಿನ ಕಟ್ಟಡವನ್ನು ನಿರ್ಮಾಣ ಮಾಡುತ್ತಿದ್ದಾರೆ. ಅವರೆಲ್ಲರಿಗೂ ಗೊತ್ತು ಈ ಕಟ್ಟಡ ನಿರ್ಮಾಣ ಆದ ಮೇಲೆ ನಮಗೆ ಒಳಗೆ ಪ್ರವೇಶವೂ ಇಲ್ಲ ಅಂತ. ಆದರೆ ಅದೇ ದಾರಿಯಲ್ಲಿ ಹೋಗುವಾಗೊಮ್ಮೆ ಈ ಕಟ್ಟಡ ಕಟ್ಟುವಾಗ ನಾನೂ ಇದ್ದೆ ಎಂದು ಹೇಳಿಕೊಳ್ಳೋದು ಅವರಿಗೆ ಹೆಮ್ಮೆಯ ವಿಷಯ.

ಒಂದು ಮಧ್ಯಾಹ್ನ ನಿರ್ವಹಣಾಧಿಕಾರಿ ಆತುರಾತುರವಾಗಿ ಆಫೀಸು ಕೋಣೆಯಿಂದ ಆಚೆ ಬರುವಾಗ ಕೆಲಸದ ಹೆಂಗಸೊಬ್ಬಳು ಆ ಕಡೆ ಈ ಕಡೆ ನೋಡಿಕೊಂಡು ಬೇಗ ಬೇಗ ನಡೆಯುತ್ತಿದ್ದಳು. ನಿರ್ವಹಣಾಧಿಕಾರಿ ಅವನ ಕೆಲಸಕ್ಕೆ ಹೊರಟುಹೋದ. ಮುಂದೊಂದು ದಿನ ಕೂಡಾ ಇದೇ ರೀತಿ ದೃಶ್ಯ ಕಂಡ. ಅವನಿಗೆ ಕೆಲಸದವಳ ಬಗೆಗೆ ಅನುಮಾನ ಬಂತು. ಕೆಲವು ಕೆಲಸದವರು ಎಂಥವರು ಎಂದರೆ ಕೈಗೆ ಸಿಕ್ಕಿದ ಸಣ್ಣ ಪುಟ್ಟ ವಸ್ತುಗಳನ್ನು ಎತ್ತಿಬಿಡುವುದು. ಅದರಿಂದ ಎಷ್ಟು ದುಡ್ಡು ಬಂದರೂ ಬಾಚಿಕೊಳ್ಳೋದು. ಈ ಹೆಂಗಸು ಏನು ಕದ್ದು ಓಡುತ್ತಿರಬಹುದು ಅಂತ ತಿಳಿಯಲಿಲ್ಲ. ಮತ್ತೊಂದು ದಿನವೂ ಹೀಗೇ ಆಯಿತು. ಅವಳು ಹಾಗೆ ಹೋಗುವಾಗ ಇರುವ ಭೀತಿ, ಆತಂಕ, ಸುತ್ತಮುತ್ತ ನೋಡೋ ರೀತಿ ಇವೆಲ್ಲ ಅವಳು ಕಳ್ಳಿ ಅನ್ನೋದನ್ನು ಪ್ರತಿಪಾದಿಸುತ್ತಿದ್ದವು. ನಿರ್ವಹಣಾಧಿಕಾರಿ ತನ್ನ ಸಹಾಯಕನನ್ನು ಕರೆದ. ಅವನು ಬಂದು ಏನ್ಸಾರ್ ಅನ್ನುವಾಗ ನಿರ್ವಹಣಾಧಿಕಾರಿ ಏನೂ ಇಲ್ಲ ಹೋಗು ಅಂದ. ಇದನ್ನು ನಾನೇ ಪತ್ತೆ ಮಾಡಬೇಕು ಅಂತ ನಿರ್ಧರಿಸಿದ.

ಒಂದೆರಡು ದಿನ ಅವನಿಗೆ ತುರ್ತು ಕೆಲಸ ಇದ್ದಿದ್ದರಿಂದ ಹೆಂಗಸಿನ ಕಡೆ ಗಮನ ಕೊಡೋಕೆ ಆಗಲಿಲ್ಲ. ಒಂದು ವಾರದ ನಂತರ ಮತ್ತೆ ಅವನು ಬ್ಯಾಂಕಿಗೆ ಹೊರಟಿದ್ದಾಗ ಅದೇ ಹೆಂಗಸು ಅದೇ ಧಾಟಿಯಲ್ಲಿ ದಾಪುಗಾಲು ಹಾಕುತ್ತಾ ಹೊರಟಿದ್ದಾಗ ಅವನೂ ಆಕೆಯನ್ನು ಹಿಂಬಾಲಿಸಿದ. ಕಟ್ಟಡ ನಿರ್ಮಾಣ ಸ್ಥಳದಲ್ಲಿ ಅಂಥಾ ಬೆಲೆಬಾಳುವ ವಸ್ತುಗಳೇನೂ ಇರೋದಿಲ್ಲ. ಇವಳು ಅದ್ಯಾವ ವಸ್ತುವನ್ನು ಸಾಗಿಸುತ್ತಿರಬಹುದು ಅನ್ನೋ ಕುತೂಹಲ ಇತ್ತು.

ಆ ಹೆಂಗಸು ನಡೆಯುವಷ್ಟು ದೂರವೂ ಆತಂಕದಲ್ಲೇ ಇದ್ದಳು. ಅಧಿಕಾರಿಯೂ ಅವಳಿಗೆ ತಿಳಿಯದಂತೆ ಹಿಂಬಾಲಿಸುತ್ತಲೇ ಹೋದ. ಹದಿನಾರು ಎತ್ತರದ ಕಟ್ಟಡಗಳ ಸಂಕೀರ್ಣ. ದೂರದ ಮೂಲೆಯಲ್ಲಿ ಅನೇಕ ಸಣ್ಣ ಪುಟ್ಟ ಮನೆಗಳು. ಕೆಲಸಗಾರರಿಗೆಲ್ಲ ಅಲ್ಲೇ ವಾಸ್ತವ್ಯಕ್ಕೆ ಅವಕಾಶ. ಈ ಹೆಂಗಸು ಓಡಿ ಓಡಿ ಹೋಗಿ ಒಂದು ಮನೆಯೊಳಗೆ ಹೋದಳು. ಅವಳು ಅದೇನು ಮುಚ್ಚಿಟ್ಕೊಂಡು ಹೋಗಿದಾಳೆ, ಅದನ್ನು ಎಲ್ಲಿ ಇಡ್ತಾಳೆ ಅನ್ನೋದನ್ನು ಅವನು ಪತ್ತೆ ಮಾಡಬೇಕಾಗಿತ್ತು. ಅದಕ್ಕೆ ಅಧಿಕಾರಿ ಸ್ವಲ್ಪ ವೇಗವಾಗಿ ಹೋದ. ಬಾಗಿಲಿನ ಹತ್ತಿರ ನಿಂತು ನೋಡಿದಾಗ ಅವನಿಗೆ ಅಚ್ಚರಿಯಾಯಿತು. ಕಣ್ಣಲ್ಲಿ ನೀರು ಬರುವ ಹಾಗೂ ಆಯಿತು.

ಓಡಿ ಬಂದ ಹೆಂಗಸು ಝೋಲಿಯಲ್ಲಿ ಮಲಗಿದ್ದ ತನ್ನ ಎಳೇ ಮಗುವನ್ನು ಎತ್ತಿ ಎದೆಗಪ್ಪಿಕೊಂಡು ತೊಡೆಯ ಮೇಲೆ ಮಲಗಿಸಿಕೊಂಡು ಹಾಲು ಕುಡಿಸಲಾರಂಭಿಸಿದಳು. ಅವಳ ಕಣ್ಣಲ್ಲಿ ನೀರು ಹರಿಯುತ್ತಿತ್ತು. ಮಗುವಿನ ಕೈ ಕಾಲುಗಳನ್ನು ನವಿರಾಗಿ ಸವರುತ್ತಿದ್ದಳು. ಹದಿನೈದು ನಿಮಿಷ ಹಾಲು ಕುಡಿಸಿ ಮತ್ತೆ ಮಗುವನ್ನು ಝೋಲಿಯಲ್ಲಿ ಮಲಗಿಸಿ ಅದೇ ರೀತಿ ಆತಂಕದಿಂದ, ಗಾಬರಿಯಿಂದ, ಹೆದರಿಕೆಯಿಂದ ವಾಪಸ್ ತನ್ನ ಕೆಲಸದತ್ತ ಬಂದಳು. ಅವಳು ಬರುವ ಸಮಯಕ್ಕೆ ಸರಿಯಾಗಿ ಉಸ್ತುವಾರಿ ನೋಡಿಕೊಳ್ಳುವ ಮನುಷ್ಯ ಅಲ್ಲಿದ್ದ. ಅವನಿಗೂ ಹೆಂಗಸಿಗೂ ಅದೇನೋ ಮಾತಾಯಿತು. ಹೆಂಗಸು ತಲೆ ತಗ್ಗಿಸಿ ನಿಂತಿದ್ದರೆ ಅವನು ಜೋರು ಜೋರಾಗಿ ಬೈತಿದ್ದ.

ಮರುದಿನ ನಿರ್ವಹಣಾಧಿಕಾರಿ ಉಸ್ತುವಾರಿ ಮನುಷ್ಯನನ್ನು ಕರೆದ. ಇಲ್ಲಿ ಎಷ್ಟು ಜನ ಚಿಕ್ಕ ಮಕ್ಕಳಿರುವ ತಾಯಂದಿರು ಕೆಲಸ ಮಾಡ್ತಿದ್ದಾರೆ ಅಂತ ಮಾಹಿತಿ ಕೊಡು ಅಂದ. ಕೆಲ ಹೊತ್ತಿನಲ್ಲಿಯೇ ಮಾಹಿತಿ ಬಂತು. ಸುಮಾರು ಹದಿನೆಂಟು ಹೆಂಗಸರು ತಮ್ಮ ಚಿಕ್ಕ ಮಕ್ಕಳನ್ನು ಝೋಲಿಯಲ್ಲಿ ಮಲಗಿಸಿ ಬಂದು ಕೆಲಸ ಮಾಡುತ್ತಿದ್ದಾರೆ ಅಂತ. ತಕ್ಷಣವೇ ನಿರ್ವಹಣಾಧಿಕಾರಿ ಆಜ್ಞೆ ಹೊರಡಿಸಿದ. ಈ ಹದಿನೆಂಟು ಹೆಂಗಸರಿಗೂ ಪ್ರತಿ ಮೂರು ಗಂಟೆಗೊಮ್ಮೆ ಹದಿನೈದು ನಿಮಿಷಗಳ ಬ್ರೇಕ್ ಕೊಡಿ ಅವರು ಝೋಪಡಿಗೆ ಹೋಗಿ ಝೋಲಿಯಲ್ಲಿ ಮಲಗಿರುವ ಮಕ್ಕಳಿಗೆ ಹಾಲುಣಿಸಿ ಬರಲಿ ಅಂತ.

ಈಗ ಆ ಹೆಂಗಸು ನೆಮ್ಮದಿಯಿಂದ ತನ್ನ ಝೋಲಿಗೆ ಹೋಗುತ್ತಾಳೆ. ಅವಳೊಂದಿಗೆ ಇತರ ಹೆಂಗಸರೂ ಸಹ. ಒಂದು ದಿನ ನಿರ್ವಹಣಾಧಿಕಾರಿ ಏನೋ ಸಮಾಧಾನದಿಂದ ಪೇಪರ್ ಓದುತ್ತಾ ಕೂತಿದ್ದಾಗ ಅಲ್ಲಿದ್ದ ಒಂದು ಜಾಹೀರಾತು ಅವನ ಗಮನ ಸೆಳೆಯಿತು. ಎದೆ ಹಾಲು ಅಮೃತ. ಈ ಅಮೃತದಿಂದ ಮಕ್ಕಳನ್ನು ವಂಚನೆ ಮಾಡಬೇಡಿ.

✵

## ಡಬ್ಕು ಡಬಲ್

"ಏನೋ ಗುಂಡಾ, ಮದುವೆ ಗಿದುವೆ ಮಾಡಿಕೊಂಡಿದೀಯೋ ಇಲ್ಲಾ ನೀನೆ ಅಡುಗೆ, ಮುಸುರೆ, ಕಸ, ಬಟ್ಟೆ ಒಗೆಯೋದು ಇನ್ನೂ ಮುಂದುವರಿಸಿದೀಯೋ"

"ಹೌದು, ಎರಡೂ ಕಣಣಾ"

"ಏನೊ ಹಾಗಂದರೆ"

"ಮದುವೇನೂ ಮಾಡಿಕೊಂಡಿದೀನಿ, ಅಡುಗೆ, ಕಸ, ಮುಸುರೆ,
ಕೆಲಸಾನೂ ಮುಂದುವರಿಸಿದೀನಿ,
ಆದರೆ ಕೆಲಸ ಡಬ್ಬಲ್ ಆಗಿದೆ ಅಷ್ಟೆ"

– ಜಯಣ್ಣ

# Advertisement

# Advertisement

# ಕೊರವಂಜಿ ಪದಬಂಧ - 20

- ವಿದ್ಯಾ ವಿ. ಹಾಲಭಾವಿ




**ಎಡದಿಂದ ಬಲಕ್ಕೆ**

1. ಅಂಗಿಯನ್ನು ಅರ್ಧ ಮಾಡಿರುವ ಹೆಂಡತಿ (3)
2. ಮನದೊಳಗೇ ಕಂಡ ಕುಲ (4)
5. ಅಲೆ ತೋರುತ್ತಾ ಜಾಲ ಬೀಸಿದಾಗಲೇ ಇದು ನಿರಾಯಾಸ (4)
6. ವಟಗುಟ್ಟುವವನ ಬಳಿಯಿರುವ ಬ್ರಹ್ಮಚಾರಿ (2)
7. ಗಮನ ಹರಿಸಿ ನೋಡಿದಾಗ ಕಂಡ ಆಕಾಶ (3)
9. ಇದು ತುಂಬಾ ಹೊಸತು (3)
12. ಪರಾಜಯದಲ್ಲೂ ಗೆಲುವು ನುಸುಳಿದೆಯಲ್ಲಾ! (2)
13. ಮಡಿವಂತಿಕೆ ತೋರುತ್ತಿರುವ ಅಗಸ (4)
15. ಆಸರೆಯ ಮನೆಯಲ್ಲ, ಇದು ಜೈಲು! (4)
16. ಕರುವಿನ ಪಚನಾಂಗ ಇಲ್ಲಿ ಕಾಣಿಸುತ್ತಿದೆಯಲ್ಲಾ? (3)

**ಮೇಲಿಂದ ಕೆಳಕ್ಕೆ**

1. ಲತ್ತೆ ನೀಡಿದಳಲ್ಲಾ, ಮಾವನ ಹೆಂಡತಿ (2)
2. ಗೀಟು ಹಾಕಿದವನದು ಮೆರುಗಿನ ಲೇಪನ (3)
3. ಕರೆದು ಹೆಣ್ಣು ಕೊಟ್ಟಿದ್ದಕ್ಕೇ ಅಳಿಯನಿಗೆ ಅಂಟಿದ ಅಪಸ್ಮಾರ (4)
4. ಕೂಸು ಕಣ್ಣು ಬಿಟ್ಟಾಗ ಬೆಳಗಿನ ಜಾವ (3)
6. ಆ ವರ್ತಕನಿಗೆ ತಿಳಿದಿದೆ ಎಲ್ಲಾ ಸುದ್ದಿ (4)
8. ನಯದೊಳಗೇ ಬಂದಿದೆ ಉದಯದ ಪ್ರಾರಂಭ (4)
10. ನಡುಗುತ್ತಾ ಬಂದಿದ್ದು ಮನೆಯ ಹಜಾರಕ್ಕೆ (4)
11. ಹಸೆ ಬರೆಯುವ ಜಾಗದಲ್ಲೇ ಬೆಳೆದ ಪಾಚಿ (3)
12. ಉತ್ತರದವರ ಸ್ನಾನ (3)
14. ಅಗುಳು ನುಂಗುವಾಗ ಬಂದಿರುವ ಕಣ್ಣೀರು (2)

***(ಉತ್ತರಕ್ಕೆ 31ನೇ ಪುಟ ನೋಡಿ)***

# ಇಂತು ಆಷಾಢದ ಅಧಿಕ...

**- ಶರತ್ ಕಲ್ಕೋಡ್**

“ಇನ್ನೆರಡು ತಿಂಗಳು ಬಿಸಿಬಿಸಿ ಬೋಂಡಾ, ಬಜ್ಜಿ ತಿನ್ನುವ ಭಾಗ್ಯವಿಲ್ಲ” ಸುಸ್ತಾಗಿ ಕಾಲೆಳೆಯುತ್ತಾ ಬಂದ ಮುಡಿಯನ್ನೂರು ಶಾಸ್ತ್ರಿಗಳು ದಣಿದ ದನಿಯಲ್ಲಿ ಸಂಜೆ ವಾಕಿಂಗ್ ಮುಗಿಸಿ ಪಾರ್ಕ್ ಬೆಂಚಿನ ಮೇಲೆ ಕುಳಿತಿದ್ದ ಮುದಿಗೆಳೆಯರನ್ನು ಉದ್ದೇಶಿಸಿ ಆಡಿದ ಮಾತು. ಬಿಸಿಬಿಸಿ ಬೋಂಡಾ ಯಾ ಬಜ್ಜಿ ಮೆಲ್ಲುವ ನಿರೀಕ್ಷೆಯಲ್ಲಿದ್ದ ನಾವು ಗರ ಬಡಿದವರಂತಾಗಿ ಒಕ್ಕರಲಿಂದ ಪ್ರಶ್ನಿಸಿದವು: “ಯಾಕೆ?... ಯಾಕೆ!?”

“ಆಷಾಢ ಅದರಲ್ಲೂ ಅಧಿಕ ಬೇರೆ. ಅಂದರೆ ಈ ವರ್ಷ ಎರಡು ತಿಂಗಳು. ದರಿದ್ರ ಆಷಾಢದ ಶನಿಕಾಟ.”

**ಆಷಾಢ, ಅದರಲ್ಲೂ ಅಧಿಕ ಬೇರೆ ಬಂದಾಗ ಆಗುವ ಅನಾಹುತಗಳು ಯಾವವು?**

ಎಲ್ಲಿಯ ಅಧಿಕ? ಎಲ್ಲಿಯ ಆಷಾಢ? ಎಲ್ಲಿಯ ಬಿಸಿಬಿಸಿ ಬೋಂಡಾ, ಬಜ್ಜಿ? ಶಿವಾಶಿವಾ ಎತ್ತಣದಿಂದ ಎತ್ತಣವಯ್ಯಾ ಈ ಸಂಬಂಧ!?

“ತಳ್ಳೋಗಾಡಿಯ ಶಿವಮ್ಮ ಸಂಜೆ ಬಿಸಿಬಿಸಿ ಬೋಂಡಾ, ಬಜ್ಜಿ ಹಾಕೋಲ್ವಾ? ದಿನಾ ನಾನು ಅಲ್ಲಿಂದ ತಂದದ್ದನ್ನೇ ಅಲ್ವಾ, ಸಂಜೆ ನೀವೆಲ್ಲಾ ಬಾಯಿ ಚಪ್ಪರಿಸುತ್ತಾ ಮೆಲ್ಲೋದು!? ಆ ಶಿವಮ್ಮ ಇವತ್ತು ಏನೆಂದ್ಲು ಗೊತ್ತಾ?

“ಸಾಮಿ ಆಷಾಢಮಾಸ ಬಂತು ಅಲ್ವಾರಾ? ಅತ್ತೆ-ಹೊಸದಾಗಿ ಬಂದ ಸೊಸೆ ಒಂದೇ ಮನೆಯಲ್ಲಿರಬಾರದು. ಒಂದೇ ಹೊಸ್ತಿಲು ತುಳಿದು ಓಡಾಡಬಾರದು ಅಂತ ಸಂಪ್ರದಾಯ ಉಂಟಲ್ಲಾ? ಹಾಗಾಗಿ ಸೊಸೆ ತೌರಿಗೆ ಹೋಗ್ತಾಳೆ. ತಾಯಿ-ಮಗ ನಮ್ಮಿಬ್ಬರ ಕೈಯಲ್ಲೇ ಬೋಂಡಾ, ಬಜ್ಜಿ ಹಾಕೋಕ್ಕೆ ಆಗೋಲ್ಲಾ. ಅದೂ ಅಲ್ಲದೆ ಟೀ ಕಾಫಿ ಬೇರೆ ಕಾಯಿಸಬೇಕೂಂತದ್ರೆ ಹುಡುಗಾಟಿಕೆ ಮಾತೇ ಸ್ವಾಮಿ? ಈ ವರ್ಷ ಅಧಿಕವಂತೆ. ಅದಕ್ಕೆ ಆಷಾಢಮಾಸ ಎರಡು ತಿಂಗಳಂತೆ ಹೌದ್ರಾ?” ಅಂತ ಕಷ್ಟದುಃಖ ತೋಡಿಕೊಂಡ್ಲು. ನಂಗೂ ಹೌದಲ್ಲಾ ಅನ್ನಿಸಿತು”

ಎಷ್ಟೆಂದರೂ ಶಾಸ್ತ್ರಿಗಳು ಹಿರಿಯರು. ನಮ್ಮ ಮುದಿಸಂಘದ ಅಧ್ಯಕ್ಷರು ಬೇರೆ. ಅಂದ ಮೇಲೆ ಮುಂದೆ ನಡೆದದ್ದು ಅವರು ಮಂಡಿಸಿದ ಗಹನವಾದ ವಿಷಯದ ಸುತ್ತಮುತ್ತ - ವಿಧಾನಸೌಧದಲ್ಲಿ ನಡೆಯುವಂತೆ - ಬಿಸಿಬಿಸಿ ಚರ್ಚೆ, ಪ್ರಶ್ನೋತ್ತರ.

ನನ್ನ ಬದುಕಿನಲ್ಲಿ ಈ ಆಷಾಢದ ಬಿಸಿ ಅಷ್ಟಾಗಿ ತಟ್ಟಿರಲಿಲ್ಲ, ಯಾಕೆಂದರೆ ಮಲೆನಾಡಿನಲ್ಲಿ ಈ ಸಂಪ್ರದಾಯ ಆಚರಿಸುವ ಪದ್ಧತಿಯಿಲ್ಲ. ಆದರೂ ಬಹಳ ಅಮಾನುಷವಾದ ಪದ್ಧತಿಯಂತೆ ಕಂಡ ಅದರ ಬಗ್ಗೆ ನನ್ನ ಘನಅಭಿಪ್ರಾಯ ಮಂಡಿಸಿದೆ: “ಮದುವೆಯಾದ ನವದಂಪತಿಗಳು ತಿಂಗಳಕಾಲ ಮುಖ ನೋಡದೇ ಇರಬೇಕೆಂಬುದು ಊಹಿಸಲು ಅಸಾಧ್ಯವಾದ ಮಾತು. ಸುರಿಯುವ ಮಳೆಯಲ್ಲಿ, ಥಂಡಿ ಉಡುಪಿನಲ್ಲಿ ಹೆಂಡತಿಯ ಜತೆ

ಮಧುರಾನುಭವ ಪಡೆಯಬೇಕಾದ ಕ್ಷಣಗಳಲ್ಲಿ, ವಿರಹದುರಿಯಲ್ಲಿ ಬೇಯಬೇಕೆಂಬುದು ಎಂಥಹ ಸಂಪ್ರದಾಯ. ಅಂಥ ಆಷಾಢದ ಆಚರಣೆ ಮಾಡಬೇಕೆಂದು ಹಿರಿಯರು ಕಟ್ಟಪ್ಪಣೆ ಮಾಡಿದಿದ್ದರೆ, ನಾನು ಅದನ್ನು ಧಿಕ್ಕರಿಸಿ ನಡೆಯುತ್ತಿದ್ದೆ!''

ಯಾವುದೇ ವಿಷಯದಲ್ಲಿ ಬಾಯಿ ಹಾಕಿ ತಮ್ಮದೇ ಆದ ರೀತಿಯಲ್ಲಿ ಸಮರ್ಥನೆ ಮಾಡಿಕೊಳ್ಳುವುದರಲ್ಲಿ ಮಹದೇವಸ್ವಾಮಿ ಎಕ್ಸ್‌ಪರ್ಟ್. ತಮ್ಮದೇ ಆದ ವಿಶಿಷ್ಟ ಭಾವಭಂಗಿಯಲ್ಲಿ ತಮ್ಮ ವಾದ ಮಂಡಿಸಿದರು: ''ನೋಡಿ ಈ ಆಷಾಢದ ಆಚರಣೆಗೂ ಒಂದು ಅರ್ಥವಿದೆ. ಆಷಾಢದಲ್ಲಿ ನವವಧು ಗರ್ಭವತಿಯಾದರೆ, ಅವಳಿಗೆ ಹೆರಿಗೆಯಾಗೋದು ಎಪ್ರಿಲ್-ಮೇನಲ್ಲಿ, ಅಂದ್ರೆ ಆಗ ಬೇಸಿಗೆಕಾಲ. ರೋಗರುಜಿನಗಳು ಜಾಸ್ತಿ. ಹಸಿಮೈ ಬಾಣಂತಿಗೆ, ಎಳೆಮಗುವಿಗೆ ಅಟ್ಯಾಕ್ ಆಗಿ ಸಾವು-ನೋವು ಆಗುವ ಸಂಭವವೇ ಹೆಚ್ಚು, ನಮ್ಮ ಹಿರಿಯರೆಲ್ಲಾ ದಡ್ಡರು, ನಾವು ಬಹಳ ಬುದ್ಧಿವಂತರು ಅಂತ ಮಾತಾಡಬಾರದು'' ನನ್ನತ್ತ ಕುಹಕನೋಟ ಬೀರಿ, ತಮ್ಮ ಘನಅಭಿಪ್ರಾಯ ಉಡಾಯಿಸಿದರು.

ಮಹದೇವರ ಸಮರ್ಥನೆಯ ನುಡಿಗಳಿಗೆ ಬೆಚ್ಚಿಬಿದ್ದ ಸಭೆಯಲ್ಲಿ ಕ್ಷಣಕಾಲ ಮೌನ ಆವರಿಸಿತು. ಆ ಮೌನ ಮುರಿದ ಜಯದೇವ ಹೇಳಿದರು: ''ಇದು ಮೈಸೂರು, ಬೆಂಗಳೂರು ಹಾಗೂ ಸಮೀಪದ ತಮಿಳುನಾಡು, ಆಂಧ್ರದ ಕೆಲವು ಪ್ರದೇಶಗಳಲ್ಲಿ ಆಚರಣೆಯಲ್ಲಿದ್ದ ಸಂಪ್ರದಾಯ. ಈಗ ಮೈಸೂರು ಬೆಂಗಳೂರಿನಂತಹ ಸಿಟಿಗಳಲ್ಲಿ ಇದು ಹೇಳ ಹೆಸರಿಲ್ಲದಂತಾಗಿದೆ ಬಿಡಿ. ಅದ್ರೂ ಹಳ್ಳಿ ಪ್ರದೇಶದ ಕಡೆ ಅಗತ್ಯಕ್ಕೆ ತಕ್ಕಂತೆ ಕೆಲವು ಅಮೆಂಡ್‌ಮೆಂಟ್‌ಗಳೊಂದಿಗೆ ಈಗಲೂ ಚಾಲ್ತಿಯಲ್ಲಿದೆ.''

''ಏನು ಅಮೆಂಡ್‌ಮೆಂಟ್?''

''ಅತ್ತೆ-ಸೊಸೆ ಒಂದೇ ಮನೆಯಲ್ಲಿದ್ದರೂ ಒಂದೇ ಬಾಗಿಲ ಹೊಸ್ತಿಲಲ್ಲಿ ಓಡಾಡಬಾರದು. ಒಂದೇ ಕೋಣೆಯಲ್ಲಿ ವಾಸಿಸಬಾರದು. ಅಡುಗೆಮನೆಯಲ್ಲಿ ಇಬ್ಬರೂ ಒಟ್ಟಿಗೆ ಇರಬಾರದು''

''ಅಂದ್ರೆ...!?''

''ಅಂದ್ರೆ ಬಾರಿ ಸಿಂಪಲ್ಲು ಕಣ್ರೀ. ಅತ್ತೆ ಮುಂಚೆಕಡೆ ಕೋಣೆಯಲ್ಲಿದ್ದು, ಮುಂಬಾಗಿಲ ಹೊಸಲಿನ ಮೂಲಕ ಓಡಾಡಿದರೆ, ಸೊಸೆ ಹಿತ್ತಲ ಕಡೆ ಕೋಣೆಯಲ್ಲಿದ್ದು, ಹಿತ್ತಲಬಾಗಿಲ ಮೂಲಕ ಓಡಾಡಬಹುದು.''

''ಮತ್ತೆ ಅತ್ತೆ-ಸೊಸೆ ಕೂಡಿ ಅಡುಗೆ ಮಾಡಬಹುದೇ?''

''ನೋ, ನೋ. ಅತ್ತೆ-ಸೊಸೆ ಎದುರುಬದುರು ಆಗಿ ಮುಖ ನೋಡುವ ಹಾಗಿಲ್ಲ! ತುರ್ತಿದ್ದರೆ ಅಡ್ಡಗೋಡೆ ಆಚೆ ಈಚೆ ನಿಂತು ಮಾತಾಡಬಹುದು!!''

''ಹಾಗಾದ್ರೆ ಮದುಮಕ್ಕಳ ಸುಖಕ್ಕೇನು ತೊಂದ್ರೆಯಿಲ್ಲಾ ಅನ್ನಿ'' ವಿರಹದ ಬೇಗೆಯಲ್ಲಿ ಬೇಯುತ್ತಾ ಬಸವಳಿಯುವ ಯುವದಂಪತಿಗಳ ಚಿತ್ರವನ್ನು ಕಲ್ಪಿಸಿಕೊಳ್ಳುತ್ತಾ, ಇಂಡೈರೆಕ್ಟ್ ಪ್ರಶ್ನೆ ಎಸೆದೆ.




ಇಂತಹ ವಿಷಯಗಳಲ್ಲಿ ಜಯದೇವ ಬಹಳ ಸೂಕ್ಷ್ಮ. ಅವರು ಮೂಲತಃ ಮಾಗಡಿ ಸಮೀಪದ ಹಳ್ಳಿಯವರು. ಬೆಂಗಳೂರಿನಲ್ಲಿ ಬೆಳೆದವರು. ಹಾಗಾಗಿ ಹಳ್ಳಿ - ಸಿಟಿಗಳೆರಡರ ಸೊಗಡುಗಳ ಸ್ವಾರಸ್ಯವನ್ನೂ ಮೈಗೂಡಿಸಿಕೊಂಡು ಬೆಳೆದ ಲೋಕಾನುಭವಿ.

''ನೋಡಿ ಸಾರ್, ಈ ಆಷಾಢದ ಆಚರಣೆಯಿದೆಲ್ಲಾ ಅದೂ ಸಂಪೂರ್ಣ ಸ್ವಾಮ್ಯ ಅತ್ತೆಯದು. ಎಷ್ಟಂದರೂ ಒಂದು ಕಾಲದಲ್ಲಿ ಆಕೆಯೂ ಸೊಸೆಯಾಗಿ, ಅತ್ತೆ ಕೈಯಲ್ಲಿ ಪಟ್ಟ ಪಾಡಿಗೆ ಅನುಗುಣವಾಗಿ ಕಾರ್ಯರೂಪ ತಾಳುತ್ತದೆ. ಅತ್ತೆ ಅಂದು ಅವಳಿಗೆ ಸುಖನೀಡಿದ್ದರೆ, ಇಂದು ಸೊಸೆಗೆ ಅವಳು ಸುಖ ನೀಡಿಯಾಳು. ಅಂದು ಅತ್ತೆ ಒರಳುಕಲ್ಲಿಗೆ ಹಾಕಿ ರುಬ್ಬಿದ್ದರೆ ಇವಳೂ ಸೊಸೆಯನ್ನು ರುಬ್ಬಿ ಅರೆದು ಮಜ್ಜಿಗೆ ಕುಡಿದು ತೇಗಿ ಖುಷಿಪಟ್ಟಾಳು. ಅದಕ್ಕೆ ''ಅತ್ತೆಗೊಂದು ಕಾಲ, ಸೊಸೆಗೊಂದು ಕಾಲ'' ಅಂತ ಗಾದೆ ಹೇಳೋದು.''

''ಹೆಣ್ಣು ಮಕ್ಕಳಿದ್ದ ಯಾವ ಅತ್ತೆಯಂದಿರೂ, ಸೊಸೆಯಂದಿರನ್ನು ದೈವ್ವದ ಹಾಗೆ ಕಾಡಲಾರರು'' ಹೆಂಗರುಳಿನ ಹಿರಿಯಣ್ಣಯ್ಯ ಮಾತಿನ ಒಗ್ಗರಣೆ ಹಾಕಿದರು. ''ನೋಡಿ ನೀವು ಇಲ್ಲೇ ತಪ್ಪೋದು. ಎಷ್ಟಂದರೂ ಮಗಳು ಮಗಳೇ! ಸೊಸೆಯೆಂದರೆ ಸೊಸೆಯೇ. ಅದು ಪ್ರಕೃತಿ ನಿಯಾಮಾಂತ ಕಾಣುತ್ತೆ. ಮದುವೆಯಾದ ಮಗಳನ್ನು ಆಷಾಢದಲ್ಲಿ ಮನೆಗೆ ಕರೆತಂದ ತಾಯಿ, ಹೆಂಡತಿಯನ್ನು ಕಾಣಲೆಂದು ಕದ್ದು ಬಂದ ಅಳಿಯನನ್ನು ನೆರೆಹೊರೆಯವರ ಕಣ್ಣಿಗೆ ಬೀಳದಂತೆ ಕೋಣೆಯಲ್ಲಿ ಅವಿತಿಟ್ಟು, ರಾತ್ರಿ ಅಕ್ಕಪಕ್ಕದ ಮನೆಯಲ್ಲಿ ತಾವಿದ್ದು ಮಗಳು-ಅಳಿಯನನ್ನು ಸುಖವಾಗಿರಿಸಿ ಖುಷಿಪಟ್ಟವರನ್ನು ಇದೇ ಕಣ್ಣಲ್ಲಿ ಕಂಡಿದ್ದೇನೆ. ಅದೇ ತಂದೆ-ತಾಯಿ ತಮ್ಮ ಮಗನನ್ನು ಕಣ್ಣಲ್ಲಿ ಕಣ್ಣಿಟ್ಟು ಕಾವಲು ಮಾಡಿ, ಸೊಸೆ-ಮಗ

ಕೂಡಿಯಾಡದಂತೆ ಮಾಡಿದ್ದಕ್ಕೂ ಮೂಕ ಸಾಕ್ಷಿಯಾಗಿದ್ದೇನೆ'' ಸಮಚಿತ್ತರಾಗಿ ರಿಪೋರ್ಟ್ ಮಾಡಿದರು ಜಯದೇವ್.

ನಮ್ಮ ಆಷಾಢದ ಗಹನ ಚರ್ಚೆಗೆ ಬ್ರೇಕ್‌ಬಿದ್ದದ್ದು, ನಮ್ಮ ಕಲ್ಲುಬೆಂಚಿನ ಸನಿಹದ ಮತ್ತೊಂದು ಕಲ್ಲುಬೆಂಚಿನಿಂದ ಕೆಮ್ಮಿನ ಸದ್ದು ಬಂದಾಗಲೇ. ಎಲ್ಲರೂ ಬೆಕ್ಕಸಬೆರಗಾಗಿ ಅತ್ತ ತಿರುಗಿ ನೋಡಿದೆವು. 80+ ಹಣ್ಣುಹಣ್ಣು ಜೀವ. ಕೆಮ್ಮುತ್ತಲೇ ಮಾತನಾಡಿತು: ''ಅಯ್ಯಾ... ಅಷ್ಟುಹೊತ್ತಿಂದ ನೋಡ್ತಾಯಿದ್ದೇನೆ. ಮಾತಾಡದನ್ನೂ ಕೇಳಿಸಿಕೊಳ್ತಾಯಿದ್ದೀನಿ. ಬರೀ ಹುತ್ತ ಬಡಿತ್ತಿದ್ದೀರಿ ಹೊರ್ತು, ಮೂಲಕ್ಕೆ ಯಾರೂ ಕೈಹಾಕ್ತನೇ ಇಲ್ಲಾ. ಆಷಾಢದ ಆಚರಣೆಯಲ್ಲೂ ಎಂಥೆಂತ ಸ್ವಾರಸ್ಯವಾದ ಘಟನೆಗಳಿರ್ತಾವೆ. ನಿಮ್ಮಲ್ಲಿ ಒಬ್ಬರಾದ್ರೂ ಒಂದನ್ನಾದ್ರೂ ಹೇಳ್ತೀರಾ ಅಂತ ಮೈಯೆಲ್ಲಾ ಕಣ್ಣುಕಿವಿಯಾಗಿಸಿ ಕೊಂಡು ಆಗ್ಲಿಂದಲೂ ಕಾಯ್ತಾಕೂತೆ. ನೀವೆಲ್ಲಾ ಓದಿದವರು. ವಿಚಾರವಂತರು. ವೈಚಾರಿಕತೆ ಜಾಸ್ತಿಯಾದ ಹಾಗೆ ಭಾವಕತೆ ಕಡಿಮೆಯಾಗುತ್ತೆ. ಭಾವಕತೆ ಕಡಿಮೆಯಾಗಿ, ವೈಚಾರಿಕತೆ ಹೆಚ್ಚಾದಾಗ ಜೀವನ ಬರಡಾಗುತ್ತೆ. ಆಷಾಢದ ಆಚರಣೆಯನ್ನೇ ತೆಗೆದುಕೊಳ್ಳಿ. ಅದೆಲ್ಲಾ ಸಂಪ್ರದಾಯದ ಆಚರಣೆ ಅಂತ ನೀವು ಮೂಗುಮುರಿದು ಹಿಯಾಳಿಸುತ್ತೀರಿ. ಆದರೆ ನನ್ನ ಯೌವನಕಾಲದಲ್ಲಿ ಮದುವೆಯಾದ ಹೊಸತರಲ್ಲೇ ಆಷಾಢಮಾಸ ಅದೂ ಅಧಿಕವೇ ಬಂದಿತ್ತು. ವಿರಹ ತಳಲಾರದೇ ಹಾಸಿಗೆಗೆ ದಿಂಬು ಮತ್ತಿತರ ಬಟ್ಟೆಯಿಂದ ನಾನು ಮಲಗಿರುವಂತೆ ಸೃಷ್ಟಿಮಾಡಿ ಸುರಿಯುವ ಆಷಾಢದ ಮಳೆಯಲ್ಲೇ ರಾತ್ರೋರಾತ್ರಿ ಹೆಂಡತಿ ಮನೆಗೆ ಹೋಗಿ ಇದ್ದು ಬೆಳಕು ಹರಿಯುವ ಮುನ್ನ ಮನೆಗೆ ಮರಳಿ ಬರುತ್ತಿದ್ದೆ. ನಸುಕು ಹರಿಯುವಾಗ ದಾರಿಯಲ್ಲಿ ಸಿಗುತ್ತಿದ್ದ ಹಳ್ಳಕೊಳ್ಳ, ಗದ್ದೆಕಾಡು ಇವನ್ನೆಲ್ಲಾ ನೋಡುತ್ತಾ ರಾತ್ರಿ ನಾನು ಈ ಹಾದಿಯಲ್ಲಿ ಹೋದದ್ದು ಹೌದೆ ಎಂದು ಅಚ್ಚರಿಪಡುತ್ತಿದ್ದೆ. ಅಷ್ಟೇ ಅಲ್ಲ; ಹೋಗುವಾಗ ಬಹಳ ಸಮೀಪ ಎನಿಸುತ್ತಿದ್ದ ಅದೇ ದಾರಿ ಮರಳುವಾಗ ಬಹಳ ದೂರ ಅನಿಸುತ್ತಿತ್ತು. ಅದ್ಯಾರೋ ಮಹಾನುಭಾವ ಕವಿ ಬರೆದಿದ್ದಾನಲ್ಲ; ''ಏರುತ ಇಳಿಯುತ ಬಂದರು ರಾಯರು ದೂರದ ಊರಿಂದ, ಪದುಮಳು ಒಳಗಿಲ್ಲ ಪದುಮಳ ಬಳೆಗಳ ದನಿಯಿಲ್ಲ'' ಅಂತ. ನನ್ನ ಅನುಭವವನ್ನೇ ಅವರು ಬರೆದಿದ್ದಾರೋ ಅನಿಸಿದ್ದುಂಟು ಎಷ್ಟೋಸಲ . ಅಲ್ಲದೆ ಅತ್ತೆಮನೆಯ ಆ ಚಿಗಳಿ (ಎಳ್ಳು ಬೆಲ್ಲ) ಉಂಡೆ, ಎಳ್ಳುಸೂಸಲು ಸವಿಬಲ್ಲವನೇಬಲ್ಲ. ಭಾವಕತನ ಅಂದ್ರೆ ಅದೇ ಅಲ್ವೇ! ನೀವೆಲ್ಲ ಲೆಕ್ಕಚಾರ ಹಾಕಿ ಬದುಕುತ್ತಿದ್ದೀರಾ. ಆದ್ರೆ ಬರೀ ಹಣಕಾಸೇ ಬದುಕಲ್ಲ ಅಲ್ಲವೇ? ಮಧ್ಯೆ ಬಾಯಿಹಾಕಿದ್ದಕ್ಕೆ ಬೇಸರಿಸಬೇಡಿ. ಅಧಿಕ ಪ್ರಸಂಗತನಕ್ಕೆ ಕ್ಷಮೆಯಿರಲಿ'' ಎಂದು ಹೊರಡಲು ಎದ್ದರು.

''ಆಷಾಢದ ಸ್ವಾರಸ್ಯವಾದ ಘಟನೆಯೊಂದನ್ನು ಹೇಳಿ ಪ್ಲೀಸ್'' ಎಂದು ಒಕ್ಕೊರಲಿನಿಂದ ಒತ್ತಾಯಿಸಿದೆವು. ನಮ್ಮ ಬೇಡಿಕೆಗೆ ಮಣಿದ ಆ ಹಿರಿಯರು ಕುಳಿತು ಹೇಳತೊಡಗಿದರು: ''ನಮ್ಮ ನಾಯಕ ಆಗತಾನೇ ಮದುವೆಯಾಗಿದ್ದ. ಆಷಾಢ ಬಂತು. ಅತ್ತೆ-ಸೊಸೆ ಒಟ್ಟಿಗೆ ಇರಬಾರದಲ್ಲವೇ? ಹೆಂಡತಿ ತೌರುಮನೆ ಸೇರಿದಳು. ಹೊಸಪರಿಯಲ್ಲಿ ವಿರಹದಬೇಗೆ ಬಲ್ಲವರೇಬಲ್ಲರು. ನನ್ನ ಸಾಹಸ ಕೇಳಿದ ಗೆಳೆಯ ಒಂದು ರಾತ್ರಿ ಹೆಂಡತಿಯ ತೌರದಾರಿ

ಹಿಡಿದ. ಅಲ್ಲಿ ಸೇರುವ ಹೊತ್ತಿಗೆ ಆಗ ತಾನೇ ನಸುಕು ಹರಿಯುತ್ತಿತ್ತು. ಅರೆಗತ್ತಲಲ್ಲೇ ಹಿತ್ತಲಬೇಲಿ ಹಾರಿ ಮನೆಯ ಹಿಂಬದಿ ಕೋಣೆ ಕಿಟಕಿಯಲ್ಲಿ ಇಣುಕಿದ. ಇಳಕಲ್ಲು ಸೀರೆಯುಟ್ಟ ಮನದನ್ನೆ ಮೊಸರು ಕಡೆಯುತ್ತಿದ್ದ ದೃಶ್ಯ ಕಣ್ಣಿಗೆ ಬೀಳಬೇಕೇ? ಬೆರಳ ತುದಿಯಲ್ಲೇ ಬಾಗಿಲು ನೂಕಿದ. ಮೆಲ್ಲನೆ ಬಾಗಿಲು ತೆರೆಯಿತು. ಹೆಜ್ಜೆ ಹಾಕಿ ಕಡುಗೋಲಿನೆದುರು ಕುಳಿತು ಕರ್ತವ್ಯ ನಿರತಳಾಗಿದ್ದ ಆಕೆಯನ್ನೇ ಮನದನ್ನೆಯೆಂದು ಓಡಿಬಂದು ಬಾಚಿತಬ್ಬಿಕೊಂಡ! ಆದರೆ ಎಡವಟ್ಟು ಆದ್ದು ಅಲ್ಲೇ ನೋಡಿ! ಅವನು ತಬ್ಬಿಕೊಂಡದ್ದು ಮನದನ್ನೆಯನಲ್ಲ; ಅತ್ತೆಯನ್ನು!!''

''ಆ ಮೇಲೆ...!?'' ಎಲ್ಲರೂ ಕಾತರದಿಂದ ಪ್ರಶ್ನಿಸಿದೆವು.

''ಆ ಮೇಲೆ ಅನ್ನೋಕೆ ಇದೇನು ಬೇತಾಳನ ಕಥೆಯಾ? ಮುಂದೆಂದೂ ಆ ಅಳಿಮಯ್ಯ, ಮನೆ ಹೊಸ್ತಿಲು ತುಳಿಯಲು ಅತ್ತೆಮಾವ ಅವಕಾಶ ಕೊಡಲಿಲ್ಲ, ಅಳಿಮಯ್ಯನೂ ಆ ಕಡೆ ಮುಖ ಹಾಕಲಿಲ್ಲ ಅಷ್ಟೇ!'' ಎನ್ನುತ್ತಾ ಆ ವೃದ್ದರು ಹೆಗಲ ಮೇಲಿನ ಟವೆಲ್ ಕೊಡವುತ್ತಾ ಕತ್ತಲಲ್ಲಿ ಕರಗಿ ಮಾಯವಾದರು!

ಮುದುಕರು ಹೇಳಿದ ಘಟನೆ ಸ್ವಂತದ್ದೋ ಅಥವಾ ಬುರುಡೆಯೋ!?

---

## ನಡಿಗೆ

ಮೊದಲ ಬಾರಿಗೆ ನಾನು ಒಂದು ಸರ್ವಧರ್ಮ ಪ್ರಾರ್ಥನಾ ಸಭೆಗೆ ಹೋದೆ. ಕುಳಿತಾಗ ಒಬ್ಬ ಕ್ರಿಶ್ಚಿಯನ್ ಪಾದ್ರಿ ನನ್ನ ಬಳಿ ಬಂದು 'ಕ್ರೈಸ್ತನ ಅನುಗ್ರಹದಿಂದ ನೀವು ಇಂದು ನಡೆಯುತ್ತೀರಿ' ಎಂದರು. 'ನನಗೇನು ಅಂತಹ ಸಮಸ್ಯೆ ಇಲ್ಲ' ಎಂದೆ. ನಂತರ ಹಿಂದು ಸ್ವಾಮೀಜಿ ಬಂದು 'ದೈವ ಕೃಪೆ ಇದೆ, ಇಂದು ನೀವು ನಡೆಯುವಿರಿ' ಎಂದರು. 'ಆದರೆ ನನ್ನ ಕಾಲಿಗೇನೂ ಆಗಿಲ್ಲ' ಎಂದೆ. ಅವರು ಅದನ್ನು ಕೇಳಿಸಿಕೊಳ್ಳದೆ ಹೋದರು. ನಂತರ ಮೌಲ್ವಿಯೊಬ್ಬರು ನನ್ನೆಡೆ ಬಂದು 'ಅಲ್ಲಾನ ದಯೆಯಿಂದ ನೀವು ಇಂದು ನಡದೇ ನಡೆಯುವಿರಿ' ಎಂದರು. ಅವರಿಗೂ ನನಗೇನೂ ಸಮಸ್ಯೆ ಇಲ್ಲ ಎಂದು ಹೇಳಿದೆ. ಬೌದ್ಧ ಗುರುಗಳೂ ಸಹ ಹಾಗೇ ಹೇಳಿದರು. ನನಗೆ ಆಶ್ಚರ್ಯವಾಯಿತು. ಪ್ರಾರ್ಥನಾ ಸಭೆ ಮುಗಿದ ಮೇಲೆ ಹೊರಬಂದು ಪಾರ್ಕಿಂಗ್ ಜಾಗಕ್ಕೆ ಬಂದು ನೋಡುತ್ತೇನೆ ನನ್ನ ಕಾರು ಕಳುವಾಗಿತ್ತು!

## ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು

**- ದಂನಳಿ**

- ಕಮಲಕ್ಕೆ ಕೆಸರು ಮೆತ್ತಿಕೊಂಡಿರಬಾರದು ಅಲ್ಲವೆ?
- ಕೆಲವರು ತುಂಬಾ ಬಡವರು. ಅವರ ಬಳಿ ದುಡ್ಡು ಮಾತ್ರ ಇರುತ್ತದೆ.
- ನಿನ್ನ ಮುಖಕ್ಕೆ ಅಂದ ಅಂಟಿಕೊಂಡಿದೆ. ಒರೆಸಿಕೊಂಡರೆ ಹೋಗದು.
- ಹಸಿವಿದ್ದಾಗ ಸಮಸ್ಯೆ ಒಂದೇ; ಹೊಟ್ಟೆ ತುಂಬಿದ ಮೇಲೆ ನೂರಾರು.
- ಕನ್ನಡಿಯಲ್ಲಿ ಮುಖ ನೋಡಿಕೊಳ್ಳುವುದು ನಂತರ ಕಾಲೇಜಿಗೆ ಹೋಗುವ ಸಮಯದಲ್ಲಿ ತೆಗೆಸಿದ ಫೋಟೋದತ್ತ ಕಣ್ಣುಹಾಯಿಸುವುದು ಆರೋಗ್ಯಕ್ಕೆ ಹಾನಿಕರ.
- ಹೂವಿನ ಘಮಘಮ ಮಾರುವವನಿಗೆ ತಲುಪುತ್ತದೆಯೇ?
- ಇಫ್ ಯು ಡ್ರಾಪ್ ದಿ ಬಾಡಿ ಇಟ್ ಈಸ್ ಮೆಡಿಟೇಷನ್. ಇಫ್ ದಿ ಬಾಡಿ ಡ್ರಾಪ್ಸ್ ಯು ಇಟ್ ಈಸ್ ಡೆತ್.

**ಮೆಲುಕು ಹಾಕುವಂತಹ ಮಾತುಗಳ ಗುಚ್ಛ**

- 'ನಾನು ಕೊನೆಯಲ್ಲಿ ಹೇಳುವುದೇನೆಂದರೆ....' ಎಂದ ತಕ್ಷಣ ಸಭಿಕರು ಎಚ್ಚರಗೊಳ್ಳುತ್ತಾರೆ.
- ಖುಷಿಯಿಂದಿದ್ದಾಗ ಅದು ಚಳಿಗಾಲವೇ, ಬೇಸಿಗೆ ಕಾಲವೇ ಎಂಬುದೇ ಗೊತ್ತಾಗುವುದಿಲ್ಲ.
- ಮೆಟ್ಟಿಲು ಕಾಣುತ್ತಿಲ್ಲದಿದ್ದರೂ ಒಂದು ಹೆಜ್ಜೆ ಇಡುವುದನ್ನೇ ನಂಬಿಕೆ ಎಂದು ಕರೆಯುತ್ತಾರೆ.
- ನಟನ ಬವಣೆ: ಜೀವನದುದ್ದಕ್ಕೂ ನಾನು ಯಾರು ಯಾರೋ ಆಗಿದ್ದೆ, ಹೀಗಾಗಿ ನಾನು ನಿಜವಾಗಲೂ ಯಾರು ಎಂದು ನನಗೆ ಗೊತ್ತೇ ಇಲ್ಲ.
- ಲುಕ್ ಅಟ್ ಎವೆರಿಒನ್ ಅಸ್ ಯುವರ್ ಸೆಲ್ಫ್ ಬಟ್ ಡು ನಾಟ್ ಕನ್ಸಿಡರ್ ಎವೆರಿಒನ್ ಅಸ್ ಯುವರ್‌ಸೆಲ್ಫ್.
- ಈಗ ಮೋಸಕ್ಕಿಂತ ಪ್ರಾಮಾಣಿಕತೆಯೇ ಷಾಕ್ ತರಿಸುತ್ತದೆ.
- ನಿನ್ನ ಪ್ರಾರ್ಥನೆ ಯಾವುದು ಎಂದು ತಿಳಿಸು. ನಾನು ನಿನ್ನ ದೇವರು ಯಾವುದು ಮತ್ತು ನೀನು ಯಾರು ಎಂದು ಹೇಳುತ್ತೇನೆ.
- ಹಲಸಿನ ಹಣ್ಣನ್ನು ಜಾಕ್ ಆಫ್ ಆಲ್ ಫ್ರೂಟ್ಸ್ ಎಂದೂ ಕರೆಯುತ್ತಾರೆ.
- ಸುಳ್ಳು ಬಿಲ್ ನೀಡುವಾಗ ಒಂದಿಷ್ಟು ಎಚ್ಚರಿಕೆ ಇರಬೇಕು, ರೋಡ್ ರೋಲರ್ ಟೈರ್ ಪಂಕ್ಚರ್ ಆಗಿದೆ ಎಂದರೆ....?

# ಸಂಗೀತ ಕಛೇರಿ....

**- ಎಚ್. ಗೋಪಾಲಕೃಷ್ಣ**

**ಗೆ**ಳೆಯರ ಮೊಮ್ಮಗನ ಕಛೇರಿ–ಅದೂ ಸಂಗೀತ ಕಛೇರಿ ಇದೆ ಅಂತ ಗೆಳೆಯರು ಮೊನ್ನೆ ಸಿಕ್ಕಿದಾಗ ಹೇಳಿದ್ದರು. ಕಾರ್ಯಕ್ರಮ ಯಾವತ್ತು ಅನ್ನೋದು ಕೇಳಿದ್ದೆ, ಆದರೂ ತಲೆಯಲ್ಲಿ ಅದು ಉಳಿದಿರಲಿಲ್ಲ. ಸರಿ ಈ ಹಾಳು ಮರೆವು ನೋಡಿ ಬೇಡದೇ ಇರೋದನ್ನ ತಲೆ ತುಂಬಾ ಇಟ್ಟುಕೊಂಡುಬಿಡುತ್ತೆ ಮತ್ತು ಬೇಕಾಗಿರೋದನ್ನ ಯಾವತ್ತೂ ಅದರ ತಲೆಯಲ್ಲಿ ಇರಿಸಿಕೊಳ್ಳದೇ ಖಾಲಿ ಖಾಲಿ ಮಾಡಿಬಿಟ್ಟಿರುತ್ತೆ. ಗೆಳೆಯರಿಗೆ ಫೋನಾಯಿಸಿದೆ - ವಿವರ ತಿಳಿಯಲು. ಅದೇ ನಿಮ್ಮನೆ ಹತ್ರ ದೇವಸ್ಥಾನ ಇದೆಯಲ್ಲಾ ಅಲ್ಲೇ ಕಛೇರೀ ನಡೆಯೋದೂ, ನಾನು ಬರ್ತಾ ಇಲ್ಲ. ಆದರೆ ನೀವು ಹೋಗಿದ್ದು ಬನ್ನಿ ಅಂತ ವಿವರ ನೀಡಿದರು. ಚಿಕ್ಕ ಹುಡುಗ ಅದೂ ಗೊತ್ತಿರೋ ಮಗು ವೇದಿಕೆ ಮೇಲೆ ಕೂತು ಹಾಡು ಹೇಳುತ್ತೆ ಅಂದರೆ ಯಾರಿಗೆ ತಾನೇ ಖುಷಿಯಾಗೋಲ್ಲ ಅಲ್ಲವೇ?

ಕ್ಯಾಲೆಂಡರಿನಲ್ಲಿ ದಿನ ಗುರುತು ಹಾಕಿದೆ, ಇಂತಹ ದಿವಸ ಈ ಮಗು ನಮ್ಮ ಮನೆ ಹತ್ತಿರದ ದೇವಸ್ಥಾನದಲ್ಲಿ ಹಾಡು ಹೇಳುತ್ತೆ, ಅವತ್ತು ಏನೂ ಕಾರ್ಯಕ್ರಮ ಇಟ್ಕೋಬಾರ್ದು ಅಂತ ಮನೇಲಿ ಫರ್ಮಾನೂ ಹೊರಡಿಸಿದೆ. ಇದು ಪ್ರೊಲೋಗು

ಫರ್ಮಾನು ಹೊರಡಿಸಿ ಏನಾಗುತ್ತೆ ಅಂತ ನಿಮಗೆ ಅನುಭವ ಇದೆ ಅಂತ ಅಂದುಕೋತೀನಿ. ಫರ್ಮಾನು ಕೈಕೊಡುವ ಹಾಗೆ ವಿಧಿ ಆಟ ಹೂಡುತ್ತೆ ಮತ್ತು ಮತ್ಯಾವುದೋ ಕೆಲಸಗಳು ಅಮರಿಕೊಳ್ಳುತ್ತವೆ ಮತ್ತು ನೀವು ಏಕಾಂಗಿ ಆಗುತ್ತೀರಿ. ನನಗೂ ಹಾಗೇ ಆಗಿದ್ದು!

ಮನೇಗೆ ಅದ್ಯಾರೋ ನೆಂಟರು ಬರ್ತಿದ್ದಾರೆ, ನಾನು ಬರೋದಿಲ್ರೀ ಅಂತ ನನ್ನಾಕೆ ಬ್ಯಾಕ್ ಔಟ್ ಆದಳು. ಸರಿ, ನನಗೋ ಆ ದೇವಸ್ಥಾನ ಹೊಸಾದು ಅಂದರೆ ಹೊಸಾದು - ಅದರೊಳಗೆ ಒಂದೇ ಒಂದು ಸಲವೂ ನಾನು ತಮಾಷೆಗೂ ಒಳಗೆ ಹೋದವನೇ ಅಲ್ಲ. ಹೆಂಡತಿ ಇದ್ದಿದ್ದರೆ ಅವಳೇ ನನಗೆ ಗೈಡು. ಈಗ ಅವಳು ಮಿಸ್ಸು - ಅದರಿಂದ ಈಗ ನಾನೊಬ್ಬನೇ ಹೋಗುವ ಹಾಗಾಯಿತು. ಸರಿ ದೇವಸ್ಥಾನಗಳಿಗೆ ಅಂತಲೇ ಒಂದು ಡ್ರೆಸ್ ಕೋಡು ಇದೆ ನಿಮಗೆ ಗೊತ್ತಾ? ನನಗೆ ಇದು ತಿಳಿದಿದ್ದು – ನಾವು ಕಳೆದ ವರ್ಷ ಕೇರಳದ ಯಾವುದೋ ದೇವಸ್ಥಾನಕ್ಕೆ ಅಚಾನಕ್ಕಾಗಿ ಹೋಗಿದ್ದೆವು. ಬರ್ಮುಡಾ ಚಡ್ಡಿ ಧರಿಸಿ ಅಲ್ಲಿಗೆ ಹೋಗಿದ್ದೆ, ದಕ್ಷಿಣೆ ಹಾಕಿದ ನಂತರ ಪ್ರಸಾದ ನೀಡುವ ಮೊದಲು ಅಲ್ಲಿನ ಅರ್ಚಕರು ಬರ್ಮುಡಾಗೆ ಪ್ರವೇಶವಿಲ್ಲ ಅಂದಿದ್ದರು. ದಕ್ಷಿಣೆ ಹೋಗಿತ್ತು, ಪ್ರಸಾದವೂ ಸಿಕ್ಕಿರಲಿಲ್ಲ. ಇಲ್ಲೂ ಅದೇ ಸಿಸ್ಟಮ್ಮು ಇದೆಯಾ ಅಂತ ವಿಚಾರಿಸಿ ಇಲ್ಲಿನ ಪದ್ಧತಿ ತಿಳಿದೆ. ಪಂಚೆ, ಷರ್ಟು, ಪ್ಯಾಂಟು ಆಗಬಹುದು ಅಂತ ತಿಳೀತು. ದೇವಸ್ಥಾನಗಳಿಗೆ ಶೂ ಹಾಕಿ ಹೋದರೆ ಅದನ್ನು ಬಿಚ್ಚಿಡಬೇಕು, ಆಮೇಲೆ ಅದನ್ನ ಕಟ್ಟಿಕೋಬೇಕು, ಅಕಸ್ಮಾತ್ ಅದು ಕಳೆದರೆ ಹೊಟ್ಟೆ ಉರ್ಕೋಬೇಕು – ಅದು

ಯಾರಿಗೂ ಬೇಡದ ಶಿಕ್ಷೆ ಅಂತ ನನ್ನ ಅನುಭವ. ಅದರಿಂದ ಹಳೇ ಹವಾಯಿ ಚಪ್ಪಲಿ ತೆಗೆದಿರಿಸಿದೆ. ಸಂಗೀತ ಕಛೇರಿಗೆ ಶಲ್ಯ ಹೊದೀಬೇಕೋ ಬೇಡವೋ ಅಂತ ನನ್ನ ಹಳೇ ಗೆಳೆಯನ ಹತ್ತಿರ ತಿಳಕೊಂಡೆ. ಶಲ್ಯ ಇದ್ದರೆ ವಾಸಿ, ಎಲ್ಲರೂ ನಿನ್ನನ್ನ ಪಂಡಿತ ಅಂದ್ಕೋತಾರೆ ಅಂತ ಗೆಳೆಯ ಹಿಂಟು ಕೊಟ್ಟ. ಮಠಗಳಿಗೆ ಊಟಕ್ಕೆ ಹೋಗಬೇಕಾದ ಸಂದರ್ಭಗಳಲ್ಲಿ ಅಂತಲೇ ಮನೇಲಿ ಒಂದು ಶಲ್ಯ ಇರಿಸಿದೀನಿ! ಅದನ್ನ ತೆಗೆದು ಇಟ್ಟುಕೊಂಡೆ.

ಕಛೇರಿ ದಿವಸ ಪಂಚೆ, ಷರ್ಟು, ಶಲ್ಯ ಧರಿಸಿ ದೇವಸ್ಥಾನಕ್ಕೆ ಹೋದೆ. ಬಾಗಿಲಲ್ಲಿ ನಿಂತಿದ್ದವರು ಬನ್ನಿ ಬನ್ನಿ ಅಂತ ಆದರದಿಂದ ಕರೆದರು. ಒಳಗೆ ಹೋದೆ. ಎಡಭಾಗದಲ್ಲಿ ಒಂದು ಪುಟ್ಟ ಜಾಗದಲ್ಲಿ ಕೆಲವು ಕುರ್ಚಿ ಹಾಕಿದ್ದರು. ಮೂಲೆಯ ಕುರ್ಚಿಯಲ್ಲಿ ಒಬ್ಬ ಕೂತು ಆಕಳಿಸುತ್ತಿದ್ದ.

ಅಲ್ಲೇ ಇದ್ದವರೊಬ್ಬರನ್ನ ಕಛೇರಿ ಎಷ್ಟು ಹೊತ್ತಿಗೆ ಅಂತ ಕೇಳಿದೆ.

ಮಹಾಮಂಗಳಾರತಿ ಆದ ಕೂಡಲೇ.. ಅಂದರು.

ದೂರದಲ್ಲಿದ್ದ ಗರ್ಭಗುಡಿಯಿಂದ ಮಂಗಳಾರತಿ ಗಂಟೆ ಶಬ್ದ ಕೇಳಿಸಿತು.

ಎದುರುಗಡೆ ಮೈಕ್‌ನಲ್ಲಿ ಅದ್ಯಾರೋ ಪ್ರಸಾದ ತಗೊಳ್ಳಿ, ಪ್ರಸಾದ ತಗೊಳ್ಳಿ, ಪ್ರಸಾದ ತಗೊಳ್ಳಿ.. ಅಂತ ಕೂಗ್ತಾ ಇದ್ದರು.

ಅವರು ನನಗೇ ಹೇಳ್ತಿದಾರೆ ಅಂತ ಅನಿಸಬೇಕೇ..?

ಪ್ರಸಾದ ಕೊಡುವ ಸ್ಥಳಕ್ಕೆ ಹೋದೆ. ಕ್ಯೂ ಬಾಲ ಸೇರಿದೆ. ಪಲಾವ್ ಕೊಡ್ತಾ ಇದ್ದರು. ಸುಮಾರು ಹೊತ್ತು ಆದಮೇಲೆ ಪಲಾವ್ ಸಿಕ್ಕಿತು.

ದೂರದಲ್ಲಿ ನಿಂತು ಪಲಾವ್ ತಿಂದೆ. ದೇವಸ್ಥಾನದಲ್ಲಿ ಪಲಾವ್ ಪ್ರಸಾದ ಕೊಡಬಹುದಾ ಎನ್ನುವ ಜಿಜ್ಞಾಸೆ ಶುರುವಾಗಬೇಕೇ? ಯಾವ ದೇವರಿಗೆ ಪಲಾವ್ ಇಷ್ಟ ಎಂದು ಚಿಂತಿಸಿದೆ. ಯಾವ ದೇವರೂ ನೆನಪಿಗೆ ಬರಲಿಲ್ಲ.

ದೇವಸ್ಥಾನದಲ್ಲಿ ಬಿಸಿಬೇಳೆಬಾತ್ ಕೊಟ್ರೆ ಚನ್ನ.. ಅಂತ ಮನಸ್ಸು ಹೇಳಿಕೊಳ್ತು. ದೇವರೇ ನೀನು ಇರೋದೇ ನಿಜ ಆದರೆ ನನಗೆ ಬಿಸಿಬೇಳೆಬಾತ್ ಪ್ರಸಾದ ಕೊಡೋ ಹಾಗೆ ಮಾಡು.. ಅಂತ ಮನಸ್ಸಿನಲ್ಲೇ ಅಂದ್ಕೊಂಡೆ.

ದೇವರಿಗೆ ನನ್ನ ಮಾತು ಕೇಳಿಸಿತೇನೋ..

ಪ್ರಸಾದ ಬಂದಿದೆ ತಗೊಳ್ಳಿ, ಹೊಸಾ ಪ್ರಸಾದ ತಗೊಳ್ಳಿ, ಪ್ರಸಾದ ತಗೊಳ್ಳೀಂತ ಕೂಗಬೇಕೇ?

ಮತ್ತೆ ಕ್ಯೂ ಸೇರಿದೆ.

ಬಿಸಿಬೇಳೆಬಾತ್ ಪ್ರಸಾದ ಕೊಟ್ಟರು. ಅದನ್ನೂ ದೂರ ನಿಂತು ತಿಂದೆನಾ?

ಬಿಸಿಬೇಳೆಬಾತ್ ಪ್ರಸಾದದ ಜತೆಗೆ ಅದು ಯಾವಾಗಲೋ ರಾಗಿಗುಡ್ಡದಲ್ಲಿ ಪಾಯಸ ಕೊಟ್ಟಿದ್ದು ನೆನಪಿಗೆ ಬರಬೇಕೇ?

ದೇವರೇ ಪಾಯಸ ಕೊಡಿಸ್ತೀಯಾ ಅಂತ ಬಿಸಿಬೇಳೆಬಾತ್ ಮುಗಿಸುತ್ತಾ ಕೇಳಿಕೊಂಡೆ.

ದೇವರು ಅದೆಷ್ಟು ದಯಾಮಯ ಅಂತೀರೀ?

ದೊಡ್ಡ ಡಬರಿಯಲ್ಲಿ ಅದೇನೋ ಹೊತ್ತು ಕೆಲವರು ಪ್ರಸಾದ ಹಂಚುವ ಹಾಲಿನತ್ತ ಹೋಗುತ್ತಿರುವುದು ಕಾಣಿಸಬೇಕೇ? ಡಬರಿಯಿಂದ ಬೆಲ್ಲದ ಪಾಕದ ವಾಸನೆ ಘಂ ಅಂತ ಘಮಘಮಾಡಿಸಬೇಕೇ?

ಈ ಸಲ ಮೈಕಿನ ಅನೌನ್ಸ್‌ಮೆಂಟಿಗೆ ಕಾಯದೇ ಕೌಂಟರಿನ ಬಳಿ ಓಡಿದೆ. ದೊಡ್ಡ ಪ್ಲಾಸ್ಟಿಕ್ ಲೋಟದಲ್ಲಿ ಪಾಯಸ ಕೊಟ್ಟರು. ಕುಡಿದೆ.

ಸಾರ್, ಇನ್ನೊಂದು ಲೋಟ.. ಅಂತ ಕೇಳಿದರು. ತಲೆ ಆಡಿಸಿದೆ. ಕೊಟ್ಟರು, ಕುಡಿದೆ.

ನಮ್ಮ ದೇವಸ್ಥಾನದಲ್ಲಿ ಯಾವಾಗಲೂ ಪ್ರಸಾದ ಚಲೋ ಇಲ್ಲ ಅಂತ ಕೆಲವರ ವರಾತವಿರ್ತದ್ರೀ ಸರಾ. ಇವತ್ ನೀವು ಪ್ರಸಾದನ ಖುಷಿಯಿಂದ ತಿಂದ್ರಲ್ಲಾ ಅದನ್ನ ಆ ವರಾತ ಮಾಡೋರಿಗೆ ಹೇಳ್‌ತೀವ್ರೀ ಸರಾ.. ಅಂತ ಇನ್ನೊಂದು ಲೋಟ ಪಾಯಸ ಕೊಟ್ರು..

ಪ್ರಸಾದ ಮುಗಿದ್ ಹಂಗೆ ಮತ್ತೆ ಮತ್ತೆ ತರ್ತೀವ್ರೀ ಸರಾ.. ಆದರೂ ಕೆಲವರಿಗೆ ತಲೆ ಸಮ ಇಲ್ರೀ ದೂರು ಮಾಡ್ತಾರ್ರೀ.. ಅಂತ ಆತ ಹೇಳಿದ.

ನನ್ನ ಹಾಗೆ ಬರೋ ಜನರೇ ಇಷ್ಟು ಸಲ ಪ್ರಸಾದ ತಿಂದರೆ ಪಾಪ ದೇವಸ್ಥಾನ ನಡೆಸೋರ ಗತಿಯೇನು ಅವರು ಹೇಗೆ ಮ್ಯಾನೇಜು ಮಾಡ್ತಾರೆ, ಅಂತ ಚಿಂತಿಸುತ್ತಾ ಕಛೇರಿ ನಡೆಯೋ ಜಾಗಕ್ಕೆ ಬಂದೆ. ಈಗಲೂ ಅಲ್ಲಿ ಜನವೇಇಲ್ಲ!

ಕಛೇರಿ ಇನ್ನೇನು ಶುರುವಾಗುತ್ತೆ ಅಂತ ಅಲ್ಲೇ ಕುರ್ಚಿ ಮೇಲೆ ಕೂತೆ. ಹಾಗೇ ಕಣ್ಣು ಮುಚ್ಚಿದೆ.

ಸ್ವಲ್ಪ ಹೊತ್ತಿನಲ್ಲೇ ಯಾರೋ ಬಂದರು.

ಸಾರ್, ದೇವಸ್ಥಾನ ಬಾಗಿಲು ಹಾಕಬೇಕು ಏಳ್‌ತೀರಾ.. ಅಂದರು.

ಸಂಗೀತದ ಕಛೇರಿ ಇಲ್ವಾ ಇವತ್ತು? ಅಂತ ಕೇಳಿದೆ.

ಸಾರ್ ಈಗ ಬಂದ್ರಾ? ಇಷ್ಟು ಹೊತ್ತೂ ಆ ಮಗು ಎಷ್ಟು ಚೆನ್ನಾಗಿ ಹಾಡು ಹೇಳ್ತಲ್ಲಾ ಸಾರ್?.........ಅನ್ನಬೇಕೇ

ಮನೇಲಿ ಸಂಗೀತ ಹೇಗಿತ್ತು ಅಂತ ಕೇಳಿದರೆ ಏನು ಹೇಳಬೇಕು ಅಂತ ಪ್ಲಾನಿಸುತ್ತಾ ದೇವಸ್ಥಾನದ ಬಾಗಿಲು ದಾಟಿದೆ.

---

## ಪದಬಂಧದ ಉತ್ತರ

**ಎಡದಿಂದ ಬಲಕ್ಕೆ**

1. ಅರ್ಧಾಂಗಿ 2. ಮನೆತನ 5. ಆಲಾಜಾಲ 6. ವಟು 7. ಗಗನ 9. ನವೀನ 12. ಜಯ 13. ಮಡಿವಾಳ 15. ಸೆರೆಮನೆ 16. ಕರುಳು

**ಮೇಲಿಂದ ಕೆಳಕ್ಕೆ**

1. ಅತ್ತೆ 2. ಗಿಲೀಟು 3. ಮಲರೋಗ 4. ನಸುಕು 6. ವರ್ತಮಾನ 8. ನವೋದಯ 10. ನಡುಮನೆ 11. ಹಾವಸೆ 12 ಜಳಕ 14. ಅಳು

# ಮದುವೆಯೆಂಬ ಅಪಾಯದ ಅಂಚಿನಿಂದ

**- ಎಚ್.ಆರ್. ಹನುಮಂತ ರಾವ್**

**ಆ**ಗಸ್ಟ್ ಹದಿನೈದು. ಸ್ವಾತಂತ್ರ್ಯ ದಿನಾಚರಣಾ ದಿನ, ಬಾಲ್ಯ ಸ್ನೇಹಿತನೊಬ್ಬ ದೂರದ ಡೆಟ್ರಾಯಿಟ್ ನಗರದಿಂದ ಬಂದಿದ್ದು ಮತ್ತೆ ಮುಂಬೈ ಮೂಲಕ ಹಿಂತಿರುಗುವವನಿದ್ದ. ಅವನನ್ನ ಬೀಳ್ಕೊಡಲು ಬೆಳಿಗ್ಗೆಯೇ ವಿಮಾನ ನಿಲ್ದಾಣಕ್ಕೆ ಹೋಗಿ ಬಂದವನು ನಂತರ ನಾಟಕದ ರಿಹರ್ಸಲ್ಲಾಗ್ಗಿ ಕ್ಲಬ್ಬಿಗೆ ಹೋಗಿ ಮರಳಿದಾಗ ಸಂಜೆ ನಾಲ್ಕು ಗಂಟೆಯಾಗಿತ್ತು. ಜೀವು ಕೊಟ್ಟ ಕಾಫಿಯನ್ನು ಹೀರುತ್ತ ಆರಾಮ ಕುರ್ಚಿಯಲ್ಲಿ ಕೂಡುತ್ತಿದ್ದಂತೆ ಫೋನು ರಿಂಗಣಿಸಿತು. ರಿಸೀವರ್ ಎತ್ತುತ್ತಲೇ ಆ ಕಡೆಯಿಂದ ಎಂ.ಜಿ.ಎಮ್. ಸಿಂಹದ ಗರ್ಜನೆ ನೆನಪಿಸುವ, ಉಚ್ಚ ಕಂಠದ ಹೆಣ್ಣಿನ ಧ್ವನಿ ಹೊರಟಿತು.

''ಏನಪ್ಪ ಜೀವು, ಇನ್ನೂ ಬರಲಿಲ್ಲವೇ ರಾಜೀವ, ಅದೇನು ಸ್ನೇಹಿತರೋ ಏನೋ, ಎಲ್ಹೋದ್ರೆ ಅಲ್ಲೇ, ಬೆಳಿಗ್ಗೆ ಹೋದವ್ನು ಊಟದ್ವೇಳೆಗಾದ್ರೂ ಬರೋ ಜ್ಞಾನ ಬೇಡ್ವಾ? ಆರೋಗ್ಯ ಹೀಗೆ ಹಾಳ್ಮಾಡಕೋತಾ ಇದ್ರೆ ಹೇಗೆ?'' ಈ ಮಾತು ರೇಖಾ ಅತ್ತೇದೂ ಅನ್ನೋದ್ ಹೇಳ್ಬೇಕಾಗೇ ಇಲ್ಲ, ಅದೇ ಪೇಟೆಂಟ್ ಧ್ವನಿ. ಫೋನ್ಗೆ ಸ್ಪೀಕರ್ ಇಲ್ದೇನೆ ಪಕ್ಕದ್ಮನೇಗೂ ಕೇಳುತ್ತೆ. ಅರಣ್ಯ ಇಲಾಖೇಲಿ ಅವರಪ್ಪ ಅಧಿಕಾರಿಯಾಗಿದ್ದು, ಈಕೆ ಬೇಟೆ ನಾಯಿಗಳ ಜೊತೆಗೆ ಇದ್ದದ್ದೇ ಕಾರಣ ಈ ಬೀಸೋ ಮಾತ್ಗೆ ಅನ್ನುತ್ತೆ. ''ಅತ್ತೇ, ನಾನೆ ರಾಜೀವ, ಈಗ್ತಾನೆ ಬಂದೆ. ಏನ್ ಅಂತ ಅರ್ಜೆಂಟ್ ಸಮಾಚಾರ? ಉಂಡಾಡಿ ಶ್ರೀಕಂಠ, ಮುದ್ಮಗಳು ಚೈತ್ರ, ಎಬ್ಬಂಕಳಿಯ ಶಿವೂ ಎಲ್ಲ ಚೆನ್ನಾಗಿದಾರಾ, ಜಾನಕೀ ಮಾವಂಗೆ ಇನ್ಕಂಟ್ಯಾಕ್ಸು ಸಮಸ್ಯೆ ಮತ್ತೆ ಶುರುನಾ? ಅಥವಾ ವಾನರ ಪ್ರಸ್ತಾಶ್ರಮಕ್ಕೆ ರೆಡಿ ಆಗ್ತಿದಾರ?'' ''ಮಗ ಉಂಡಾಡಿ, ಅಳಿಯ ಎಬ್ಬಂಕ, ಅದೇನ್ ತಲೇನೋ ನಿಂದು, ಅದರಲ್ಲಿ ಸೆಗಣಿ ಯೋಚ್ನೆಗಳ್ನೆ ತುಂಬಿರ್ತಿ, ಅಳಿಯ ಶಿವೂ ನಿನ್ನಾಗೆ ಕ್ಲಬ್ಬು, ಅದೂ, ಇದೂ ಅಂತ ಸಮಯ ಹಾಳ್ಮಾಡಲ್ಲ, ಮೀನಿನ್ಮೇಲೆ ರಿಸರ್ಚ್ ಮಾಡಕ್ಕಂತ ಇದೀಗ, ಅವಂಗೆ ಅಮೆರಿಕಾದ ಸ್ಕಾಲರ್ಷಿಪ್ ಬಂದಿದೆ, ಅದೆಂತದೋ ಯಯಾತಿ ದ್ವೀಪಕ್ಕೆ ಕರ್ದಿದಾರೆ, ಅಲ್ದೆ ಮಾವನ್ನಾಯಾಕ್ತರ್ತಿ ನಿನ್ನಂತಾ ವಾನರಗಳ ಮಧ್ಯೆ ಸಾಧು ಪ್ರಾಣೀನಾ? ವಿಷಯಕ್ಬಾ, ಬೆಳಿಗ್ಗೇಯಿಂದಾ ಎಲ್ಲಿ ಅಲೀತಿದ್ದಿ?''

''ಯಯಾತಿ ಅಲ್ಲ, ಹಯಾತಿ ದ್ವೀಪ, ಯಾಕತ್ತೆ, ಈಗೀಗಿನ ಜನ ಸಂಸಾರದಲ್ಲಿ ಏಗೀ ಏಗೀ, ಸಂಸಾರ ಸುಖ ಏನಂತಿಳ್ದು, ಹೆಂಡ್ತಿ ಕಾಟ ಇನ್ನಾಕು ಅಂತ ಬುದ್ಧಿ ಜೀವಿಗಳಾಗ್ತಿದಾರೆ, ಮಾವ ಇಂಥ ಅತಿಮಾನುಷರ ಜೊತೆ ಸೇರ್ಕೊಂಡ್ರೆ ಅಷ್ಟೇಯ. ಹೆಗ್ಲಿಗೊಂದ್ ಜೋಳಿಗೆ, ಮೈಮೇಗೊಂದ ಜುಬ್ಬಾ, ಲೂಸ್ ಪೈಜಾಮ, ವೈಸ್ಕೋಟ್, ಮುಖದಲ್ಲಿ ಬಿಳಿ ಗಡ್ಡ ಬೆಳಸ್ಕಂಡ್, ಸ್ನಾನಾನೂ ಇಲ್ದೆ ಊರೂರ್ ಸುತ್ಕೊಂಡ್ ಇರ್ಬೋದು ಡಾರ್ಲಿಂಗ್ ಕಾಟ ಇಲ್ದೆ!'' ''ಸಾಕು, ತಲೆಹರಟೆ ಬೇಡಾ, ಸುಮ್ನೆ ಕೇಳು. ಒಂದ್ಕಡೆ ಬರಕೋ, ಪ್ರೊಫೆಸರ್ ರಾಮಸ್ವಾಮಿ, ಡೋರ್ನಂ ಎಂಟು, ಗಂಜಿ ವೀರಣ್ಣ ರಸ್ತೆ, ಹುರಿಯೋ ಪೇಟೆ. ನೀನಲ್ಲಿ ನಾಳೆ ಹನ್ನೊಂದ್ ಗಂಟೆಗೆ ಹೋಗಿ ಜೀವಣ್ಣಂಗೆ ನಾನ್ ಬಂದ್ ಕೊಟ್ಹೋದ ಎರಡು ಪುಸ್ತಕಗಳ್ನ ಪ್ರೊಫೆಸರ್ಗೆ ಕೊಟ್ಟು ಪರಿಚಯ ಮಾಡ್ಕೊ, ಅವ್ರ ಹತ್ರ ಗೌರವವಾಗಿ ನಡ್ಕೋ, ಅವ್ರೇನ್ ಕೊಟ್ರು ತಗೋ, ಗೊತ್ತಾಯ್ತ? ಇದು

ಬಹಳ ಮುಖ್ಯ, ನಿನ್ನಡ್ಡತನ ಪ್ರದರ್ಶಿಸಬೇಡ, ಏನು?'' ''ಅಲ್ಲ, ಅತ್ತೆ, ನಾನೇ ದಡ್ಡ ಅನ್ನಸ್ಕಂಡ್ರೆ ಇನ್ನು ಜಾನಕಿರಾಂ ಮಾವ ಯಾವ ಸ್ಟೇಟಸ್ನಲ್ಲಿದ್ದಾರ್ರೋ - ಮಂಕನೋ, ಮಡೆಯಾನೋ, ಶುಂಠಾನೋ! ಶಾಂತಂ ಪಾಪಂ, ಆಯ್ತು, ನಾನು ಏನು ಅನ್ನೋದ್ ಆ ಪ್ರೊಫೆಸರ್ಗೆ ಗೊತ್ತಾಗತ್ತೆ. ಇಷ್ಟೆಲ್ಲ ಏನಕ್ಕೆ ಪೀಠಿಕೆ?'' ಮಾತು ಮುಂದುವರಿಸುವ ಮುನ್ನವೇ ಆ ಕಡೆ ಫೋನ್ ಕಟ್ ಆಯ್ತು. ಈ ರೇಖಾ ಅತ್ತೆ, ಚಿಕ್ಕ ವಯಸ್ನಲ್ಲೇ ತಾಯಿ ಕಳ್ಕೊಂಡ ನನ್ನ ಅಕ್ಕ ವೈಶಾಲಿ ಮತ್ತು ನನ್ನ ಪ್ರೀತಿಯಿಂದ ಅವ್ರ ಮಕ್ಳ ಜೊತೆಗೇ ಸಾಕಿದವರು, ಏನಂದ್ರೂ ನಮಗೆ ಆಪ್ಯಾಯವೇ, ನಮಗೂ ಅಷ್ಟೇ ಸದರ, ಚಿಕ್ಮಗ್ಳೂರ್ನ ಎಸ್ಟೇಟ್ ಓನರ್ ಜಾನಕೀರಾಮಯ್ಯನ ಧರ್ಮಪತ್ನಿ. ನಂಗೆ ಒಂದ್ ರೀತೀಲಿ ಮಾವ ಆಗ್ಬೇಕು. ''ಜೀವು, ಆ ಪುಸ್ತಕಗಳ್ನ ನೀನೇ ಅವ್ರ್ಗೆ ತಲ್ಪಿಸಬಹುದಿತ್ತಲ್ಲ? ನಾನೇ ಹೋಗ್ಬೇಕಂದ್ರೆ, ಏನಾದ್ರೂ ಮಸಲತ್ ಇದೆಯಾ?''

''ಒಂದೆರಡು ವಾರಗಳ ಹಿಂದೆ ಇಲ್ಲಿಗೆ ನಿಮ್ ಶಿವೂ ಸಾರ್ ಬಂದಾಗ 'ಆ ಪ್ರೊಫೆಸರ ಮಗಳ್ಗೆ ವರ ನೋಡ್ತಿದಾರಂತೆ, ಇನ್ನೂ ಸರಿಯಾದವರು ಸಿಕ್ಕಿಲ್ಲ, ನಂ ರಾಜೀವನ್ಗೆ ಆ ಹುಡ್ಗೀನ ಯಾಕ್ನೋಡ್ಬಾರ್ದು?'' ಅಂತ ನಿಮ್ಮತ್ತೆಗೆ ನಿಂ ಫೋನಿಂದ್ಲೇ ಹೇಳ್ತಾ ಇದ್ದಿದ್ದು ನನ್ ಕಿವೀಲಿ ಬಿತ್ತು. 'ಆಮೇಲೆ ಇದೆ ನೋಡು ರಾಜೀವ್ನಗೆ ಬಿಸಿ ಬಿಸೀ ಕಜ್ಜಾಯ' ಅಂತ ನನ್ನೋಡಿ, ಮುಸು ಮುಸು ನಕ್ಕಿದ್ರು', ಎಂದು ಹೇಳಿ ಒಳಕ್ಕೆ ಹೋದ. ಆದ್ರೆ ಇಲ್ಲಿ ಇನ್ನೇನೋ ಕರಾಮತ್ ಇರ್ಬೋದು ಅನ್ನೋದ್ನಂಗೆ ಹೊಳೀಲೇ ಇಲ್ಲ.

ಮಾರನೆ ದಿವ್ಸ, ಆಕೆ ಹೇಳ್ದ ತರಾನೆ ಈ ಪ್ರೊಫೆಸರ್ನ್ನ ನೋಡ್ದೆ. ಅವ್ರ ಹೆಂಡ್ತಿನೇ ಒಳಗೆ ಕರೆದು ಕೂಡ್ಸಿ, ನಮ್ಮ ಅತ್ತೆ ಕ್ಷೇಮ ಸಮಾಚಾರ ವಿಚಾರ್ಸಿ, ಪ್ರೊಫೆಸರ್ಗೆ ನಾನ್ ಬಂದ ವಿಚಾರ ತಿಳಿಸಿದ ಮೇಲೆ ಪುಸ್ತಕಗಳ್ನ ಕೊಟ್ಟು ಆದಷ್ಟು ಬೇಗ ಹೊರಡುವವನಿದ್ದೆ. ನಂಗೆ ಕಾಲೇಜ್ ದಿನಗಳಿಂದ್ಲೂ ಈ ಪ್ರೊಫೆಸರಗಳು ಅಂದ್ರೆ ಅಷ್ಟಕಷ್ಟೆ. ನಂಗೆ ಗುರುಗಳಾಗಿದ್ದ ಹಲವರಿಗೆ ನನ್ನ ಜ್ಞಾನದ - 'ಅಜ್ಞಾನ' ಅಂದ್ರೆ ಹೆಚ್ಚು ಸಮಂಜಸವಾದೀತು - ಬಗ್ಗೆ ಸದಭಿಪ್ರಾಯವಿಲ್ಲದ್ದೂ, ಕಿಡಿಗೇಡಿಗಳ ಜೊತೆ ಇದ್ದು, ಕ್ರಿಕೆಟ್ ಟೂರ್ನ್ಮೆಂಟ್ ಕಾಲದಲ್ಲಿ ಕ್ಲಾಸ್ಗೆ ಚಕ್ಕರ್ ಹಾಕ್ತಾ ಇದ್ದದ್ದೂ, ಹಲವು ಸಲ ಪಾಠ ಮಾಡುವಾಗ ಪ್ರಶ್ನೆಗಳಿಂದ ಅವರನ್ನು ಪೇಚಿಗೆ ಸಿಕ್ಕಿಸುತ್ತಿದ್ದುದೂ ಕಾರಣವಾಗಿತ್ತು. ಇಂಥವರನ್ನ ಮಾವ ಮಾಡ್ಕೊಳ್ಳಕ್ಕೆ ನನಗೆ ಇಷ್ಟವಾಗುವದಿರಲಿ, ಅವರಿಗೂ ಅಳಿಯನ್ನ ಮಾಡ್ಕಳ್ಳಕ್ಕೆ ಸುತರಾಂ ಸರಿಹೊಂದಲ್ಲ ಅನ್ನೋದು ಗೊತ್ತು. ಆದ್ದರಿಂದ ನಾನು ನಿರಾಳವಾಗಿದ್ದೆ. ಅದೂ ಅಲ್ದೆ, ಮದುವೆ ಮಾಡ್ಕೊಳ್ಳೋ ಯೋಚನೇನೆ ಇರ್ಲಿಲ್ಲ, ಆ ಬಗ್ಗೆ ಅತ್ತೇನೂ ಮಾತಾಡಿರ್ಲಿಲ್ಲ. ಇದೆಲ್ಲ ಶಿವೂದೇ ಕಿತಾಪತಿ ಅಂತ ಗೊತ್ತಾದ್ಮೇಲೆ ಮೈಯಲ್ಲಾ ಹುಷಾರಾಗಿರ್ಬೇಕು ಅಂತ ನಿರ್ಧರಿಸಿದ್ದೆ. ಆದರೆ ಆತನೇ ಬಂದು ನನ್ನ ಇತಿಹಾಸ ಕೆಣಕಲು ಪ್ರಾರಂಭಿಸಿದರು. ''ನೀವು ಓದುವಾಗ, ಆ ಕಾಲೇಜಿನ ಲೈಬ್ರರಿಗೆ ಹೋಗುತ್ತಿದ್ದಿರಾ? ಉತ್ತಮವಾದ ಗ್ರಂಥಾಲಯವದು?''. ''ಇಲ್ಲ, ನನಗೆ ಬೇಕಾದುಸ್ತಕಗಳು ನನ್ನ ಬಳೀನೆ ಇವೆ, ಅಲ್ದೆ ಬೇರೆ ಪುಸ್ತಕಗಳನ್ನ ಓದೋಕ್ಕೆ ಟೈಮೇ ಇರ್ತಿರ್ಲಿಲ್ಲ, ಏನಿದ್ದರು ಕಾಮಿಕ್ಸು, ಅಂಥವು ಮಾತ್ರ.''

''ನೀವು ವಿರಾಮದ ವೇಳೆ ಹೇಗೆ ಕಾಲ ಕಳೆಯುತ್ತಿದ್ದಿರಿ? ನಿಮ್ಮ ಸ್ನೇಹಿತರ ಪೈಕಿ ಯಾರಾದ್ರೂ ಸ್ನಾತಕೋತ್ತರ ವಿದ್ಯಾಭ್ಯಾಸ ಮಾಡ್ತಿದಾರ?''

‘‘ವಿರಾಮವೇ ಇರ್ತಿರಲಿಲ್ಲ, ಸಂಜೆ ಮತ್ತೆ ಟ್ಯೂಷನ್, ಸ್ನಾತಕೋತ್ತರ ಅಂದ್ರೆ ಒಬ್ಬಿಬ್ರು ಇದ್ರೂ, ಅವರೆಲ್ಲಾ ಈಗ ಮದ್ವೆ ಮಾಡ್ಕೊಂಡು ನೆಮ್ಮದಿಯಾಗಿ ಎಲ್ಲೆಲ್ಲೋ ಇದಾರೆ, ಬಹುಷಃ ಮದುವೆ ಬಗ್ಗೆ ಸಂಶೋಧನೆ ಮಾಡ್ತಿರ್ಬೇಕು.’’ ಅಂದು ನನ್ನ ಜೋಕಿಗೆ ನಾನೇ ನಕ್ಕೆ. ಆತ ನಗಲಿಲ್ಲ.

‘‘ಮಿಲ್ಟನ್ ನಿಮಗಿಷ್ಟವಾಯ್ತಾ?’’ ಅವರು ವಿಷಯ ಬದಲಿಸಿದ್ದು ನಂಗ್ಸಂತೋಷವಾಯ್ತು. ಯಾವ್ದೋ ಪಾರ್ಟಿಗೆ ರೆಡಿ ಆಗ್ತಿರ್ಬೇಕು. ಆದ್ರೆ ಹಿಲ್ಟನ್ ಹೋಟೆಲ್, ಹಾಲಿಡೇ ಇನ್, ಲೀಲಾ ಪ್ಯಾಲೇಸ್, ಮೆರೆಡಿಯನ್, ವಿದ್ಯಾರ್ಥಿ ಭವನ ಅಂಥದ್ರ ಬಗ್ಗೆ ಕೇಳಿದ್ರೆ ನಾನು ಸಂಪೂರ್ಣ ವಿವರ ಕೊಡ್ತಿದ್ದೆ, ಈ ಮಿಲ್ಟನ್ ಬಗ್ಗೆ ಕೇಳಿದ್ದೇ ಇಲ್ಲ. ತಲೆಯಲ್ಲಾಡಿಸಿದೆ. ಅವರು ಮುಂದುವರೆಸಿದರು. ‘‘ಐ ಲೈಕ್ ಹಿಸ್ ಸ್ಟೈಲ್, ಅವನ ಕವಿತ್ವದಲ್ಲೊಂದು ಅಪೂರ್ವವಾದ ಕಲೆಯಿದೆ.’’ ತಬ್ಬಿಬ್ಬಾದೆ. ಇದೀಗ ನಾನು ಯಾಮಾರಿದ್ದು ನಿಜ. ಹೋಟೆಲ್ ಅಲ್ಲ. ಹಳೇ ಆಂಗ್ಲ ಕವಿ. ಆದ್ರೆ ನನ್ನ ಕಸಿವಿಸೀನ ತೋರ್ಸ್ಕೊಳ್ಳೋ ಮೂರ್ಖ ಅಲ್ಲ. ಯಾವ್ದೋ ಕಾಲ್ದಲ್ಲಿದ್ದು, ಇಷ್ಟೊತ್ತಿಗೆ ಸಕತ್ ಸ್ವರ್ಗದಲ್ಲಿರೋವ್ನ ಯಾಕೆ ಬೆಳಿಗ್ಗೇನೆ ಜ್ಞಾಪಿಸ್ಕೋಬೇಕೋ? ಅಷ್ಟಕ್ಕೂ ಈ ಗಣಿತ ಪ್ರೊಫೆಸರ್ ಬೈನಾಮಿಯಲ್ ಥೀರಂ ಇತ್ಯಾದಿ ಬಿಟ್ಟು ಬೈರನ್, ಶೆಲ್ಲಿ, ಬೇಂದ್ರೆ ಬಗ್ಗೆ ತಲೆ ಕೆಡಿಸಿಕೊಳ್ಳೋದೇಕೆ? ಇಂಥದಕ್ಕೆ ಜೀವ್ನೇ ಸರಿ.

‘‘ನಂಗೆ ಅವ್ನ ಕಾವ್ಯ ಅಷ್ಟೊಂದು ಹಿಡಿಸ್ಲಿಲ್ಲ, ಅದ್ನ ಪಾಠ ಮಾಡ್ದವ್ರಾ ಹಾಸ್ಗೆ ಹಿಡಿದು ಮಲಗಿದ್ರು ಪಾಪ, ಆಮೇಲೆ ಗೊತ್ತಾಯ್ತು, ಹೋಗ್ಬಿಟ್ರಂತೆ.’’ ಉಡಾಫೆ ಬಿಟ್ಟೆ.

‘‘ನಂ ಕನ್ನಡ ನವ್ಯ ಕವಿಗಳು ಅನ್ನಸ್ಕೊಂಡವ್ರ ಪೈಕಿ ಅಡಿಗರಷ್ಟು ಬೇರೆ ಯಾರೂ ನನಗೆ ಅಷ್ಟು ಇಷ್ಟವಾಗಲಿಲ್ಲ, ನಿಂ ಅಭಿಪ್ರಾಯ ಹೇಗೆ?’’ ಯಾವ್ದೇ ಕವಿಗಳ ಬಗ್ಗೆ ನನಗೆ ‘ಏಕಮೇವಾ ವ ದ್ವಿತೀಯಂ’ ಅನ್ನೋ ಹಾಗೆ ಒಂದೇ ಅಭಿಪ್ರಾಯ. ಬಹುಷಃ ಸರಸ್ವತಮ್ಮನ ಹತ್ತಿರ ಚಕ್ಕಂದ್ವಾಗಿ ಮಾತಾಡ್ತಾ ಏನೋ ತಪ್ಪು ಫಾರ್ಮುಲ ಉಪಯೋಗಿಸಿರ್ಬೇಕು. ಇಲ್ದಿದ್ರೆ ಈ ತರಹ ತೋಚಿದ್ದೆಲ್ಲಾ ಗೀಚಿ, ಪೇಪರ್ನ ವೇಸ್ಟ್ ಮಾಡೋದಲ್ದೆ ಓದೋ ಹುಡುಗ್ರು, ಹುಡುಗಿಯರ ನೆಮ್ಮದಿ ಹಾಳ್ಮಾಡೋವರ್ನ ಸೃಷ್ಟಿ ಮಾಡೋದಂದ್ರೆ ಏನು?

‘‘ನನಗೂ ಅಷ್ಟೆ ಅಡಿಗರು ಅಂದ್ರೆ ಬಹಳ ಸಿಂಪಲ್ ಆಗಿ ಸುತ್ತು, ಬಳಸು ಇಲ್ದೆ ಬರೀತಾರೆ’’ ಎಂದು ನೀರು ಕುಡಿದಂತೆ ಮಾತು ಉದುರಿಸಿದೆ. ಪಕ್ಕದಲ್ಲಿದ್ದ ಗಾಜಿನ ಲೋಟದಲ್ಲಿ ನೀರು ಕುಡ್ದು ಸುಧಾರಿಸ್ಕೊಂಡೆ ತಲೆ ಎತ್ತದೆ, ಬಂಡವಾಳ ಗೊತ್ತಾಗದೆ ಇರಲಿ ಅಂತ! ಅತ್ತೆ ಬೇರೆ ನಿನ್ ದಡ್ತನ ತೋರ್ಸಬೇಡ ಅಂತ ಹೇಳಿದ್ರಲ್ವ.

ಆತ ‘‘ನಾ ಯಾಕೆ ನಿಮ್ಮನ್ನ ಕೇಳ್ದೆ ಅಂದ್ರೆ, ನಿಮ್ಮ ಸ್ನೇಹಿತ ಶಿವಕುಮಾರ್ ಅವ್ರು ನಿಮಗೆ ಕನ್ನಡ, ಇಂಗ್ಲೀಷ್, ಸಂಸ್ಕೃತ ಕಾವ್ಯಗಳು ಅಂದ್ರೆ ಪಂಚಪ್ರಾಣ ಅಂತ ಹೇಳಿದ್ರು. ಐ ಟೂ ಲೈಕ್ ವೆರಿ.’’ ನನಗೆ ಅವ್ನು ಎದುರಿಗಿದ್ದಿದ್ರೆ ಹಲ್ಲು ಉದುರಿಸುವಷ್ಟು ಕೋಪ ಬಂದಿತ್ತು ಶಿವೂನ ಕಿತಾಪತಿಯಿಂದ. ಆದ್ರೆ ಈ ಗಣಿತ ಪ್ರೊಫೆಸರ್ಗೆ ಕವ್ನಗಳ್ಯಾಕಿದ್ದೀತು! ಕ್ರಿಕೆಟ್ನಲ್ಲಿ ಯಾಮಾರ್ಸಿ ಬಂಪರ್ ಅಥವಾ ‘ದೂಸ್ರಾ’ನೋ ಇಲ್ಲ, ಗೂಗ್ಲಿನೋ ತೂರ್ಸ್ಬಿಡ್ತಾರಲ್ಲ, ಹಾಗಾಗಿ ತಾನೆ, ‘ಸ್ಟಂಪ್ ಆದ್ರೂ ಸರಿ, ಕ್ಯಾಚ್ ಹಿಡ್ದರೂ ಸರಿ, ಪ್ರಾಣ ಉಳ್ದ್ರೆ ಸರಿ’ ಅಂತ ಮ್ಯಾಚ್ನಲ್ಲಿ ನಮ್ಮವರು ಸೋಲ್ತಿದ್ದಿದ್ದು ಒಂದ್ಕಾಲದಲ್ಲಿ? ಹಾಗೆ ಈ ಮನುಷ್ಯ ಒಂದಾದಮೇಲೆ ಒಂದು ಬೌನ್ಸರ್ ಶುರು

ಮಾಡಿದ್ರು. ನಿಜ ಹೇಳ್ಬೇಕಂದ್ರೆ ನನಗೂ, ಸರಸ್ವತೀನ್ನ ಕೂಡುಹಾಕೋ ಜಾಗಗಳಿಗೂ ದೂರಾನೇ. ಯಾವಾಗಲಾದ್ರೂ ಅಲ್ಹೋದ್ರೆ ಅಷ್ಟೆ ರಿಕ್ಸ್, ಟಿಂಟಿನ್, ಟಿಂಕಲ್ ಇತ್ಯಾದಿ ಕಾರ್ಟೂನ್ ಪತ್ರಿಕೆಗಳಷ್ಟೆ ನನ್ನ ಮಿತಿ. ವಿಧಿಯಿಲ್ಲ, ಪಠ್ಯಪುಸ್ತಕಗಳಾಗಿತ್ತಂತ ಹಲವು ಬರಹಗಾರರನ್ನು ಓದಿದ್ದೆ! ಹಣೆಬರಹ. ಅವರು ಮೀಸೆ ತುದಿಯಲ್ಲೇ ಸಣ್ಣಗೆ ನಕ್ಕರು. 'ಹೋಗ್ಲಿ ಬಿಡಿ, ನಿಮ್ಮ ಬಂಧುಗಳೊಬ್ಬರು – ಅವರ ಹೆಸರು ನಿಮ್ಮ ಅತ್ತೆ ಹೇಳಿದ್ದು ಮರೆತುಬಿಟ್ಟೆ – ಮನಃಶಾಸ್ತ್ರ ವೈದ್ಯರಂತೆ. ಆತ ನನ್ನ ಬಾಲ್ಯದ ಒಡನಾಟಿ, ಸ್ವಲ್ಪ ಜಿಗುಟಾದರೂ ಕರಾರುವಾಕ್ ಮನುಷ್ಯ. ಮಿಲಿಟರಿ ಸೇರಿದ ಮೇಲೆ ಮತ್ತೆ ಭೇಟಿಯಾಗಿಲ್ಲ. ಆತ ನಿಮಗೆ ಸಿಕ್ಕರೆ ಜ್ಞಾಪಿಸಿ'' ಎಂದರು. ನನಗೆ ಒಂದು ನಿಮಿಷ ತಲೆ ತಿರುಗಿದಂತಾಯ್ತು, ಕಾರಣ ಈ ಮನಃಶಾಸ್ತ್ರಿ ನಮ್ಮ ಜಾನಕಿರಾಮ್ ಅಣ್ಣಾನೇ. ಇವರ್ನ ನಾವೆಲ್ಲಾ ಕರೆಯೋದ್ 'ಹುಚ್ಮಾವ' ಅಂತಲೇ, ಇವರ ಬಗ್ಗೆ ಈ ವರದಿಗಳ ಓದುಗರಿಗೂ ಗೊತ್ತಿರಬಹುದು. ನಾನು ಅವರಿಂದ ಮೈಲಿ ದೂರ ಇರ್ತೀನಿ. ನಂಗೂ ಅವರ್ಗೂ ಅಷ್ಟಕಷ್ಟೆ. ಆ ವೇಳೆಗೆ ಇಪ್ಪತ್ತರ ಆಸುಪಾಸಿನ ಹೆಣ್ಣೊಬ್ಬಳು ತಟ್ಟೆಯಲ್ಲಿ ಕಾಫಿ, ಉಪ್ಪಿಟ್ಟನ್ನು ತಂದು ನಮ್ಮೆದುರು ಮೇಜಿನ ಮೇಲಿಟ್ಟಳು. ನೋಡಲು, ಆಕರ್ಷಕವಾಗಿ ಬೆಳ್ಳಗೇನೋ ಕಂಡಳು. ಆದರೆ ಈಕೆಯ ಭಾರ ಅಳಿಯಬೇಕಾದ್ರೆ ಹಿಂದಿನ ಕಾಲದ ಸೌದೆ ತೂಕ ಮಾಡೋ ತಕ್ಕಡಿನೇ ಬೇಕಾಗಬಹುದು! ಅದಕ್ಕೇ ಎಲೆಕ್ಟ್ರಾನಿಕ್ ಮಶೀನಗಳಲ್ಲೂ ಹೊಸದಾಗಿ ಬಂದಾಗ, ತೀರ ಹೆಚ್ಚಿನ ಭಾರದವ್ರು ಹಾಳ್ಮಾಡಿದರೆ ಹೇಗೋ ಅಂತಾ 'ಒನ್ ಅಟ್ ಎ ಟೈಮ್' ಅನ್ನೋ ಟಿಕೆಟ್ ಬರುತ್ತಿಂತ ಪಾಂಡು ಮಾವ ಹೇಳ್ತಿದ್ರು!

ಫಲಾಹಾರವಾದ ಮೇಲೆ ''ಈಕೆ ನನ್ಮಗಳು, ಒಂದೇ ಇಶ್ಯೂ ನಮಗೆ, ಮುದ್ದಿನಿಂದ ಸಾಕಿದ್ದೇವೆ ಹಾಗಾಗಿ. ಬಹಳ ಸ್ಮಾರ್ಟ್ ಅಂಡ್ ಸ್ಟ್ರೈಟ್ ಫಾರ್ವರ್ಡ್. 'ಮೀನಾ', ನೋಡು ಇವ್ರು ರಾಜೀವ್ ಅಂತ ನಮ್ಮ ಜಾನಕಿರಾಮ್ ಬಂಧುಗಳು, ನೀವುಗಳು ಆಚೆ ಲಾನ್ನಲ್ಲಿ ಕೂತು ಪರಸ್ಪರ ಮಾತು ವಿನಿಮಯ ಮಾಡ್ಕೋಬಹುದು. ನನಗೆ ತುರ್ತು ಕೆಲಸವಿದೆ.'' ಎಂದು ಪರಿಚಯಿಸಿ, ಉಪ್ಪರಿಗೆಯ ಮೆಟ್ಟಲು ಹತ್ತಿದರು.

ಆಕೆ ''ನಮ್ಮ ಡ್ಯಾಡಿ ಕಾವ್ಯಗಳ ಬಗ್ಗೆ ಹೇಳ್ತಿದ್ರಲ್ವ? ಅಡಿಗರು ಅಂದ್ರೆ ಬಹಳ ಇಷ್ಟ, ಆದ್ರೆ ನನಗೆ ಅನ್ಸತ್ತೆ. ಅವ್ರ ಬರಹಗಳಲ್ಲಿ ತುಂಬ ಡೈರೆಕ್ಟ್ ಆಗಿ ಬರೀತಾರೆ, ನವ್ಯ ಕಾವ್ಯಕ್ಕೆ ಅವರೂ ಕಾರಣರಾದ್ರೂ 'ಕವಿಹೃದಯ' ಅನ್ನೋದ್ ಇದೇ ಅಲ್ವ? ತುಂಬ ಹಾಗೆ ಮುಖಕ್ಕೆ ನೀವಾಳ್ಸೋ ತರಹ ಇದ್ರೆ ನಿಮ್ಗೇನನ್ಸತ್ತೆ?''

ಈ ತರಹದ ಪ್ರಶ್ನೆ ನಂ ಜೀವ್ಮಾನ್ದಲ್ಲೇ ಯಾರಿಂದ್ಲೂ ಕೇಳಿರ್ಲಿಲ್ಲ, ಕಕ್ಕಾಬಿಕ್ಕಿ ಆಗಿದ್ದು ನಿಜ, ಬೆವರಿದೆ, ಈ ಅಡಿಗರು ಏನೇನೋ ಬರೆದು, ತಂದೆ ಮಗಳ ಮಧ್ಯೆ ನನ್ನನ್ನು ಗೋಟಿಗೆ ಸಿಕ್ಕಿದ ಅಡಿಕೆಯಂತಾಗಿಸಿದ್ದರು. ತಡವರ್ಸಿಕೊಂಡು ಹೇಳ್ದೆ ''ಇರಬಹುದು. ಆದ್ರೆ ಒಂದು ತಿಳ್ಕೊಳ್ಳಿ, 'ಫ....ರ್‍ರಾಂಕ್ನೆಸ್ ಇಸ್ ಬೆಸ್ಟ್ ಎನಿ ಟೈಂ ಫಾರ್ ಎನಿ ಒನ್, ಈವನ್ ಫಾರ್ ಎ ನವ್ಯ ಕವಿ' ಎಂದು ಉದ್ದನೆಯ ಮಾತು ಸೇರಿಸಿದೆ ಅದು ಹೇಗೋ!

''ತುಂಬಾ ಚೆನ್ನಾಗಿ ಮಾತಾಡ್ತೀರ, ಸ್ಮಾರ್ಟ್‌ಗೈ, ಆದ್ರೆ ಅವ್ರು ಹಾಗೆ ಬರ್ದೇ ಇಲ್ಲ, ನನ್ನ ಗೆಳತಿ ಒಬ್ಬಳು ಹಾಗೆ ಮಾತಾಡಿದ್ರಲ್ಲಷ್ಟೆ!'' ಎನ್ನುತ್ತಾ ನಕ್ಕಳು. 'ಕಿಡಿಗೇಡಿ' ಅಂದ್ರೆ ಇಂತಹ ಹುಡುಗೀರೇ! ನಾನು ಮತ್ತಷ್ಟು ಬೆವರಿದೆ. ನಾನೊಂದು ಪಸಲ್ ಹೇಳ್ತೀನಿ, ವೆರಿ ಇಂಟರೆಸ್ಟಿಂಗ್, ಹೇಳಲಾ?''

‘‘ಐ ಟೂ ಲೈಕ್, ಆನ್ಸರ್ ಮಾತ್ರ ಕೇಳಬೇಡಿ, ಅಷ್ಟೇಯಾ’’

‘‘ಒಂದ್ನಣ್ಣ ಊರು, ಅಲ್ಲಿರೋದು ಎರಡೇ ಹಜಾಮತಿ ಅಂಗಡೀಗ್ಳು. ಒಂದರಲ್ಲಿ ಅಲ್ಲಿ ನಾಯಿಂದ – ಅವನ್ನ ‘ಎ’ ಅಂತ ಕರೀರಿ – ಶುದ್ಧ ಕೊಳಕ. ಅವ್ನ ತಲೇನ್ನೋಡಿದ್ರೆ ಎಷ್ಟೋ ವರ್ಷಗಳೇ ಆಗಿದೆ ಅನ್ಸತ್ತೆ ಹೇರ್ ಕಟ್ ಮಾಡಿ. ಇನ್ನೊಬ್ಬ ‘ಬಿ’. ಅವ್ನ ತಲೇ ಸ್ಮಾರ್ಟ್ ಆಗಿ ನೀಟಾಗಿ ಕ್ಷೌರ ಮಾಡ್ಕಂಡಿದಾನೆ. ನೀವು ಆ ಊರ್ನಲ್ಲಿ ಹೇರ್ಕಟ್‌ಗೆ ಹೋಗ್ಬೇಕಿದ್ರೆ ಯಾವ್ನ ಇಷ್ಟ ಪಡ್ತೀರಿ?’’ ನಾನು ಸುಸ್ತಾದೆ, ‘‘ನಾನು ಇಬ್ಬರ ಹತ್ತಿರಾನೂ ಹೋಗಲ್ಲ ವೆಂಕಟೇಶನಿಗೆ ಮುಡಿ ಕೊಡ್ಬೇಕಂತಿದ್ರೆ, ನೀವೇ ಹೇಳ್ಬಿಡಿ’’

‘‘ಸಿಂಪಲ್, ಅಲ್ಲಿರೋದೇ ಇಬ್ಬರು ಅಂದ್ಮೇಲೆ ‘ಬಿ’ ‘ಎ’ ಬಳೀಗೇ ಕಟಿಂಗಿಗೆ ಹೋಗಿರ್ತಾನೆ. ನೀವೂ ಅಷ್ಟೇ’’. ನಂಗೆ ತಲೆ ‘ಗಿರ್’ ಅಂತಾ ತಿರುಗಿದಂತಾಯ್ತು. ಈಕೆಗೆ ಯಾಕಿದ್ದೀತು ಗಂಡಸರ ಹೆಡ್ ಹಂಟಿಂಗ್ ಅಲ್ಲ ಹೇರ್‌ಕಟಿಂಗ್? ‘ಎ’ ಕೊಳಕ ಅಂದ್ಮೇಲೆ ಅವನ್ನ ಬಲವಂತವಾಗಿ ಕಿವಿ ಹಿಂಡಿ ‘ಬಿ’ ಏಕೆ ಕ್ಷೌರ ಮಾಡಕ್ಕೆ ಹೋಗ್ಬೇಕು? ಇದನ್ನ ಕೇಳಕ್ಕೆ ಹೋದ್ರೆ ಆಕೆ ಇವ್ನು ’ತಲೆ ಹರಟೆ’ ಅಂದರೆ? ರೇಖಾ ಅತ್ತೆ ಬೇರೆ ‘ನಿನ್ ದಡ್ತನ ತೋರಿಸಿಕೋಬೇಡ’ ಅಂತ ಎಚ್ಚರಿಸಿದ್ದಾರೆ. ಈಕೆ ಯಾತಕ್ಕೆ ತಲೇನ ಗೊಬ್ರದ್ಗುಂಡಿ ಮಾಡ್ಕೊಂಡಿದಾಳೆ?

‘‘ಓದೋದಲ್ದೆ ಬೇರೆ ಏನಾದ್ರೂ ಹವ್ಯಾಸ ಇದೆಯಾ?’’. ‘‘ನಂ ಕ್ಲಬ್ನ ವರ್ಷವಿಡೀ ಸಾಂಸ್ಕೃತಿಕ ಕಾರ್ಯಕ್ರಮಗಳು, ವಾರ್ಷಿಕ ಕ್ರೀಡಾ ಸ್ಪರ್ಧೆಗಳ ಮಧ್ಯೆ ಯಾವ ಹವ್ಯಾಸಗಳಿಗೂ ವೇಳೇನೆ ಇಲ್ಲ, ನಮ್ಮ ಚಿಟಿಕೆ ಸಂಘ ಇದಕ್ಕೋಸ್ಕರಾನೆ ಇದೆ.’’

‘‘ನಂಗಂತೂ, ಸಿನೆಮಾ, ಟೀವಿ ಅಷ್ಟಕ್ಕಷ್ಟೆ ನನಗಿರೋ ಹವ್ಯಾಸ ಅಂದ್ರೆ, ಓದೋದ್ರ ಜೊತ್ಗೆ ಎದುರ್ಗಿರೋವ್ರ ಮನಸ್ನಲ್ಲಿ ಏನ್ ಆಗ್ತಿದೆ ಅನ್ನೋದ್ನ ಸ್ಟಡೀ ಮಾಡೋದು, ನಿಮ್ ಹಾಬಿ ಏನು? ಬೇಕಾದ್ರೆ, ಈಗ ನಿಮ್ಮನ್ಸಲ್ಲಿ ಏನು ಯೋಚ್ನೆ ಇದೆ ಅಂತ ಹೇಳಬಲ್ಲೆ, ಹೇಳ್ಬಿಡ್ಲಾ?’’ ನಾನು ಹೌಹಾರಿದೆ, ಈಕೆಗೆ ಆ ವಿದ್ಯೆ ನಿಜವಾಗ್ಲೂ ಗೊತ್ತಿದ್ರೆ, ನಾನು ಇಲ್ಲಿಂದ ಆದಷ್ಟು ಬೇಗ ಜಾಗ ಖಾಲಿ ಮಾಡೋದೇ ವಾಸಿ. ಕೈಗಡಿಯಾರ ನೋಡಿದೆ, ‘‘ಎಕ್ಸ್‌ಕ್ಯೂಸ್ ಮಿ, ಮೀನಾ ಅವರೇ, ನಾ ಈಗಲೇ ಹೊರಡಬೇಕು, ಹೇಳೋದ್ ನಾ ಮರ್ತಿದ್ದೆ, ಮುಂದಿನ ವಾರ ನಮ್ಮ ಸಂಘದ ವಾರ್ಷಿಕೋತ್ಸವದ ಪ್ರಯುಕ್ತ ನಾಟಕದ ರಿಹರ್ಸಲ್ ಇದೆ, ಅಲ್ಲಿ ನಂದೂ ಒಂದು ರೋಲ್, ಪ್ಲೀಸ್ ಟೆಲ್ ಯುವರ್ ಪಾಪ್ ಅಂಡ್ ಮಂ’’ ಎಂದು ಹೇಳಿ ಹೊರಡಲನುವಾದೆ. ‘‘ಬೀಸೋ ದೊಣ್ಣೆ ತಪ್ಪಿಸ್ಕಂಡ್ರೆ ಸಾವ್ರ ವರ್ಷ ಆಯಸ್ಸಂತೆ’ ಹಾಗೆ. ಆದ್ರೆ ಆಕೆ ಕಾಡಿಸುವುದು ನಿಲ್ಲಲಿಲ್ಲ. ‘‘ನೋಡಿ, ನಿಮ್ಮನಸ್ನಲ್ಲಿ ಒಂದು ಸುಂದರವಾದ ಹುಡುಗಿ ಕಾಣ್ತಾ ಇದ್ರಿ, ಮತ್ತೆ ಅದು ಎಲ್ಲೋ ಜಾರಿ, ಇದ್ದಕ್ಕಿದ್ದ ಹಾಗೆ ಹುಲಿ, ಚಿರತೆ ಬಂದಂಗೆ ಆಗ್ತಾಯಿತ್ತಲ್ವ?’’ ‘ನೀವ್ಹೇಳಿದ ಎರಡನೆ ಭಾಗ ಸರಿಯಾಗಿದೆ, ಜೊತೆಗೆ ಆನೇನ ಸೇರ್ಸಿಕೊಂಡ್ರೆ’ ಎಂದೇನೂ ಹೇಳಲಿಲ್ಲ, ಕೇಳ್ಸದವನ ಹಾಗೆ ಗೇಟಿನ ಬಳಿ ಓಡಿದೆ, ‘ಬೈ’ ಹೇಳುತ್ತಾ.

ಕ್ಲಬ್ಬಿಗೆ ಹೋಗಿ ಮತ್ತೆ ಮನೆ ಸೇರಿದಾಗ ಈ ಟೀವಿನಲ್ಲಿ ‘ಸಿಲ್ಲೀ, ಲಲ್ಲೀ’ ಸೀರಿಯಲ್ ನಡೀತ್ತಿತ್ತು, ಜೀವಣ್ಣ ತುರ್ತಾಗಿ ತನ್ನ ಭಾವಮೈದ ಚಾಮುಂಡೇಶ್ವರಯ್ಯನ ನೋಡಬೇಕಾಗಿದ್ದು, ಫ್ಲಾಸ್ಕಿನಲ್ಲಿ ಕಾಫಿ, ರಾತ್ರಿಯ ಊಟ ಕ್ಯಾಸರೋಲ್ನಲ್ಲಿ ಇದೆಯೆಂದೂ ಬೆಳಿಗ್ಗೆ

ಎಂಟಕ್ಕೆಲ್ಲ ಮತ್ತೆ ಹಾಜರಿ ಎಂದೂ ಬರೆದಿಟ್ಟು ಹೋಗಿದ್ದ. ಸ್ವಾಮಿ ಭಕ್ತನೆಂದರೆ ಇವನ ಬಿಟ್ಟರೆ ಯಾರೂ ಇಲ್ಲ! ಕಾಫಿ ಹೀರುತ್ತಾ, ಆರಾಮ ಕುರ್ಚಿಯಲ್ಲಿ ಕೂತು ಟಿವಿಯಲ್ಲಿ ಚಾನೆಲ್ ಹುಡುಕುತ್ತಿದ್ದಂತೆ ಫೋನು ರಿಂಗಣಿಸಿತು. 'ಹಲೋ' ಎನ್ನುವುದಕ್ಕೆ ಮುಂಚೆಯೇ ಆ ಕಡೆಯಿಂದ ರೇಖಾ ಅತ್ತೆಯ ಪೇಟೆಂಟ್ ಧ್ವನಿ ತೇಲಿ ಬಂತು.

''ಜೀವಣ್ಣಾ, ನಮ್ಮವನು ಬಂದ್ನಾ, ಇಲ್ಲಾ ಕ್ಲಬ್ಬು ಅಂತಾ ಹೊರಟುಬಿಟ್ನೋ?''

''ಜೀವು ಊರಲ್ಲಿಲ್ಲ ಅತ್ತೆ, ನಾನೇ ರಾಜೀವ, ಏನ್ಹೇಳೀ?'', ''ಹೇಗಿದೆ ಹುಡ್ಗಿ? ನಂಗ್ತಿಳೀತು ನಿಂಗೆ ಅವರುಗಳು ಎಲ್ಲ ಹಿಡಿಸ್ತು ಅಂತ, ಎಷ್ಟೇ ಆಗ್ಲಿ ವಿದ್ಯಾವಂತರ ಕುಟುಂಬ, ಅವ್ರು ಒಪ್ಕೊಂಡಿದಾರೆ, ಹುಡಿಗೀನ ನೀನೂ ಮೆಚ್ಚಿಕೊಂಡೆ ಅಂತ್ಲೂ ಜೀವಣ್ಣನಿಂದ ತಿಳೀತು, ಜೀವಮಾನದಲ್ಲಿ ಇದೊಂದೇ ತೀರ್ಮಾನ ಸರಿಯಾಗಿ ನೀ ತೊಗೊಂಡಿರೋದ, ಅವ್ರಿಗೆ ಈಗ್ಲೇ ಫೋನ್ ಮಾಡಿ ತಿಳಿಸ್ತೀನಿ''. ನಂಗೆ ಈ ಮಾತುಗಳ ಕೇಳಿ ಹಲ್ಲು ಕಡಿಯುವಂತಾಯ್ತು. ''ಅತ್ತೇ, ಏನ್ ಮಾತಾಡ್ತಿದೀರಾ, ಅವ್ರ ಬಗ್ಗೆ ಉರಲ್ಲಿಲ್ಲದ ಜೀವು ನಿಮಗೆ ಹೇಳ್ಲಿಕ್ಕೆ ಸಾಧ್ಯವೇ ಇಲ್ಲ, ನಂಗೆ ಆ ಹುಡ್ಗಿ ಸುತರಾಂ ಇಷ್ಟವಾಗಲ್ಲ'' ಅಂತ ಕೂಗಬೇಕೆನ್ನುವ ಮುಂಚೆಯೇ ಆ ಕಡೆ ಫೋನ್ ಕಟ್ಟಾಗಿತ್ತು. ಮತ್ತೆ ಫೋನ್ಗೆ ಸಿಗಲಿಲ್ಲ, ರಾತ್ರಿ ಊಟ ಮಾಡಿ ಮಲಗಿದೆ. ಬೆಳಿಗ್ಗೆ ಎದ್ದಾಗ 'ವಡುಲ್' ಗೋಡೆ ಗಡಿಯಾರ ಒಂಭತ್ತು ಬಾರಿಸುತ್ತಿತ್ತು. ಜೀವು 'ಸಾರ್, ಕಾಫಿ' ಎನ್ನುತ್ತಾ ಗ್ಲಾಸು ಹಿಡಿದು ಬಂದ. ಕಣ್ಣು ಉಜ್ಜುತ್ತಲೇ ಕಾಫಿ ತೆಗೆದುಕೊಂಡೆ. ''ಜೀವು ಯಾವಾಗ ಬಂದೆ, ಹೇಗೆ ಒಳಕ್ಕ ಬಂದೆ?'' ''ಏನ್ಸಾರ್ ಹಾಗೆ ಕೇಳ್ತಾ ಇದೀರಾ?'' ಮತ್ತೆ ನೀನು ನಿನ್ ಭಾವ್ಮೈದ ಚಾಮುಂಡೇಶ್ವರಯ್ಯನ್ನ ತುರ್ತಾಗಿ ನೋಡ್ಬೇಕು, ಬೆಳಿಗ್ಗೆ ವಾಪಸ್ ಬರ್ತೀನಿ ಅಂತ ನಿನ್ನೆ ಸಂಜೆ ಬರೆದಿಟ್ಟಿದ್ದೆಯಲ್ಲ? ಅದಕ್ಕೆ ಕೇಳ್ತಿರೋದು.'' ನಾನು ಪ್ರೊಫೆಸರ್ಗೆ........ ಸರ್ಮನೇಗೆ ಹೋಗಿದ್ದು, ಅಲ್ಲಿ ಏನೇನ್ ಆಯ್ತು, ಆ ಪ್ರೋಫೆಸರ್ಗೆ ನಮ್ಮುಚ್ಚಾವ ಡಾ. ಕೇಶವರಾವ್ ಪರಿಚಯ ಇರೋದು ಎಲ್ಲಾ ವಿವರಿಸಿದೆ.

''ಸರ್, ನೀವು ಎಲ್ಲೋ ಕನಸಿನ ಮಂಪರಿನಲ್ಲಿ ಆಗಿರೋದ್ನ ಹೇಳ್ತಾ ಇರೋ ಹಾಗಿದೆ, ಯಾಕಂದ್ರೆ, ನೀವು ಅವರ್ನ ನೋಡಕ್ಕೆ ಹೋಗ್ಬೇಕಾಗಿರೋದು ಈ ದಿನ ಹನ್ನೊಂದ್ ಗಂಟೆಗಲ್ವ? ಅಷ್ಟಕ್ಕೂ ನಿನ್ನೆ ನೀವು ಬೆಳಿಗ್ಗೇನೆ ಸ್ನೇಹಿತನ್ನ ಬೀಳ್ಕೊಟ್ಟು, ಕ್ಲಬ್ಬಿನಲ್ಲಿ ನಾಟಕದ ರಿಹರ್ಸಲ್ಗೆ ಹೋಗಿದ್ದು ಮರೆತಿರಾ? ಅಲ್ಲೇ ಇದ್ದು ಸಂಜೆ ಮನೆಗೆ ಬಂದು ವಿಶ್ರಾಂತಿ ತೆಗೆದುಕೊಂಡ್ರಲ್ಲವ? ನಿಮಗೆ ನಿನ್ನೆ ರಾತ್ರಿ ಊಟದ ಜೊತೆ ಬಾಳೆಕಾಯಿ ಬಜ್ಜಿ, ರಸಗುಲ್ಲ, ಫ್ರೂಟ್ ಸಾಲಡ್‌ನ ಬಡಿಸಿದ್ದು ನಾನೇ, ಮರೆತಿರ?''

ಹಾಗಾದ್ರೆ, ಆ ಪ್ರೋಫೆಸರು–ಮಿಲ್ಟನ್–ಅಡಿಗರು–ಹುಡುಗಿ–ಡ್ರಮ್ಮು–ನಾಯಿಂದ–ಎಲ್ಲ ಬರೀ ಕನಸ? ಮತ್ತೆ ಮತ್ತೆ ಕಣ್ಣುಜ್ಜಿ ಸುತ್ತಲೂ ದೃಷ್ಟಿಸಿದೆ.

ಜೀವು ನನಗೆ ತಿಳಿಯದಂತೆ ಕಿರು ನಗು ನಗುತ್ತ ಮೆಲ್ಲಗೆ ಅಲ್ಲಿಂದ ಜಾರಿಕೊಂಡದನ್ನು ನಾ ಗಮನಿಸಿದ್ದ.

❋

# ಅಪರಂಜಿಗೆ ಹಾರ್ದಿಕ ಶುಭಾಷಯಗಳು

## ಡಾ. ಎಚ್.ಎಸ್. ಮುರಳಿ

ನೇತ್ರ ವೈದ್ಯರು

**ದಿ ಐ ಕ್ಲಿನಿಕ್**

ಅಣ್ಣಯ್ಯ ಕಾಂಪ್ಲೆಕ್ಸ್

ಹೊಸಳ್ಳಿ ರಸ್ತೆ, ಮಂಡ್ಯ

ಫೋನ್: 224834

ಸಮಯ: ಬೆಳಗ್ಗೆ 9 ರಿಂದ 1 ಗಂಟೆ

**ಮಾಲಸ ಐ ಕ್ಲಿನಿಕ್**

ಬಸ್ ಸ್ಟಾಂಡ್ ಸರ್ಕಲ್

ಚಾಮುಂಡೀಪುರಂ

ಮೈಸೂರು 570 004

ಫೋನ್: 2332225

ಸಮಯ: ಸಂಜೆ 5 ರಿಂದ 8 ಗಂಟೆ

ಮೊಬೈಲ್: 94487 40093




ಫೋಟೊ ಪ್ರಹಸನ

# ಕಣ್ಮರೆಯಾಗಲಿರುವ ಕನ್ನಡಕಗಳು...

**- ಪ್ರಶಾಂತ ಅಡೂರ**

ನನಗ ಚಸ್ಮಾ (ಕನ್ನಡಕ) ಬಂದ ಇಪ್ಪತ್ತ ವರ್ಷ ಆಗಲಿಕ್ಕೆ ಬಂತ. ನಾ ಕೆ.ಇ.ಸಿ ಸಂದರ್ಶನಕ್ಕೆ ಹೋದಾಗ ಡಾಕ್ಟರ ಚೆಕ್ ಮಾಡಿ ಹೇಳಿದ್ದರು 'ತಮ್ಮಾ, ನಿಂದ ದೂರದೃಷ್ಟಿಸರಿ ಇಲ್ಲಾ' ಅಂತ. ಹಂಗ ನಂಗ ಹತ್ತರದಿಂದ ಎಲ್ಲಾ ಕರೆಕ್ಟ ಕಂಡರೂ ದೂರಿಂದ ಕರೆಕ್ಟ ಕಾಣ್ತಿದ್ದಿಲ್ಲಾ. ಬಸ್ಸಿನ ಬೋರ್ಡ ಓದಲಿಕ್ಕೆ ತ್ರಾಸ ಆಗಿತ್ತ. ಬ್ರಾಡವೇ ಒಳಗ ಯಾವದರ ಹಳೇ ಕ್ಲಾಸಮೇಟ್ ಭೇಟ್ಟಿ ಆದರ ಆಕಿ ಹತ್ತರ ಬಂದ ಹಾಯೋತನಕ ಗೊತ್ತ ಆಗ್ತಿದ್ದಿಲ್ಲಾ, ಒಟ ಒಂದ ಮಾತಿನಾಗ ಹೇಳಬೇಕಂದರ ದೂರಿಂದ ಯಾ ಹುಡಿಗ್ಯಾರು ಛಂದ ಕಾಣ್ತಿದ್ದಿಲ್ಲಾ.

ಇದ ಹಿಂಗ ಆದರ ಬಗಿಹರಿಯಂಗಿಲ್ಲ ನಡಿ ಅಂತ ಒಂದ ದಿವಸ ತಲಿ ಕೆಟ್ಟ ಕಣ್ಣಿನ ಡಾಕ್ಟರ ಕಡೆ ತೋರಿಸಿದರ ನಂಗ –0.5 ನಂಬರ ಅದ ಅಂತ ಗೊತ್ತಾತು. ಮುಂದ ನಾ ಒಂದ ಸ್ಟೈಲ ಆಗಿ ಚಸ್ಮಾ ಮಾಡಿಸಿ ಹಾಕ್ಕೊಂಡ ಅಡ್ಡಾಡಲಿಕತ್ತೆ. ಹಂಗ ನಂಗ ಎಲ್ಲೆ ಚಸ್ಮಾ ಬಂದರ ಕನ್ಯಾ ಸಿಗೊಂಗಿಲ್ಲೊ ಅಂತ ಹೆದರಕಿ ಇತ್ತ ಆದರ ಚಸ್ಮಾ ಬಂದರ ಜನಾ ಶಾಣ್ಯಾ ಹುಡುಗ ಅಂತನೂ ಅಂತಾರ ಅಂತ ಚಸ್ಮಾ ಹಾಕ್ಕೊಂಡ ಅಡ್ಡಾಡಲಿಕತ್ತೆ.

ಮುಂದ ನಾ ಆ ಚಸ್ಮಾಕ್ಕ ಎಷ್ಟ ಅಡಿಕ್ಟ್ ಆದೇನಲಾ, ಕೆಲವೊಮ್ಮೆ ರಾತ್ರಿನು ಹಾಕ್ಕೊಂಡ ಮಲ್ಕೋತಿದ್ದೆ. ನಮ್ಮ ತಂಗಿ ಅದನ್ನ ನೋಡಿ 'ಏನ ಕನಸಿನಾಗ ಶ್ರೀದೇವಿ ಬರ್ತಾಳೇನ ಚಸ್ಮಾ ಹಾಕ್ಕೊಂಡ ಮಲ್ಕೋತಿಯಲಾ?' ಅಂತ ಚಾಷ್ಟಿ ಮಾಡತಿದ್ದಳು. ಇನ್ನ ಹಿಂಗ ಕಾಯಮ್ ಹಾಕೋಳದ ಖರೆ ಅಂದರ ಒಂದ ಸ್ಪೇರ್ ಇರಲಿ ಅಂತ ಮತ್ತೊಂದ ಚಸ್ಮಾ ಮಾಡಿಸಿದೆ, ಕಿಸ್ಗಾದ ಸ್ವಂತ ರೊಕ್ಕ ಆಡತಿತ್ತ ನಮ್ಮಪ್ಪಂದ ಏನ ಗಂಟ ಹೋಗೊದ ಅಂತ ಒಂದ ಆಕೇಸನಲ್ ಇನ್ನೊಂದ ರೆಗ್ಯುಲರ್ ಅಂತ ಎರೆಡೆರಡ ಇಟಗೊಂಡೆ. ಮುಂದ ಒಂದ ಎರಡ ವರ್ಷಕ್ಕ ಕನ್ಯಾ ಫಿಕ್ಸ್ ಆತ. ಹಂಗ ನಾ ಚಸ್ಮಾ ಇದ್ದದ್ದಕ್ಕ ಎಲ್ಲೆ ಕನ್ಯಾ ರಿಜೆಕ್ಟ್ ಮಾಡ್ತಾಳೊ ಅಂತ ಅನ್ಕೊಂಡಿದ್ದೆ ಆದರ ನಮ್ಮ ದೋಸ್ತರೇಲ್ಲಾ ನಿನ್ನ ಮಾರಿಗೆ ದೃಷ್ಟಿ ಬಟ್ಟ ಇದ್ದಂಗ ಅದ ತೊಗೊ ಚಸ್ಮಾ ಅಂತ ಸಮಾಧಾನ ಮಾಡಿ ಕನ್ಯಾದ ಮುಂದ ಕುಡಸಿದ್ದರು.

ಮುಂದ ಕನ್ಯಾಗ ನಾ ಪಾಸ ಆಗಿ ಮದುವಿ ಹತ್ತರ ಬಂದಂಗ ನಾ ಮತ್ತೊಂದ ಥ್ರೀ ಪೀಸ್ ಚಸ್ಮಾ ಮಾಡಿಸಿದೆ. ಅಲ್ಲಾ ಹಂಗ ನಾನ ತೆಳ್ಳಗ ಥ್ರೀ ಪೀಸ್ ಚಸ್ಮಾದ್ದ ಫ್ರೇಮ್ ಇದ್ದಂಗ ಇದ್ದೆ ಆ ಮಾತ ಬ್ಯಾರೆ ಆದರೂ ಒಂದನೇ ಮದುವಿ ಹುರುಪಿನಾಗ ಮತ್ತೊಂದ ಚಸ್ಮಾ ತೊಗೊಂಡೆ.

ಮುಂದ ಮದುವಿ ಆದಮ್ಯಾಲೆ ಒಂದ ಹೆಂಡತಿ ಮೂರ ಚಸ್ಮಾ ಜೊತಿ ಸಂಸಾರ ನಡಿತ. ಹಿಂಗ ಒಂದ್ಯಾರಡ ವರ್ಷ ಹೋಗೊದರಾಗ ಬರೇ ಸಂಸಾರ ಇಷ್ಟ ಬೆಳಿಲಿಲ್ಲಾ ಆದರ ಜೊತಿ ಚಸ್ಮಾ ನಂಬರ ಸಹಿತ ಬೆಳಿತ. ಹಿಂಗಾಗಿ ಇದ್ದ ಮೂರು ಚಸ್ಮಾ ಸ್ಕ್ರ್ಯಾಪ ಮಾಡಿ ಹೊಸ ಚಸ್ಮಾ ಮಾಡಿಸಿದೆ. ಈಗಾಗಲೇ ಮೂರ ಮೂರ ಚಸ್ಮಾದ್ದ ಚಟಾ ಹತ್ತಿ ಬಿಟ್ಟಿತ್ತ ಹಿಂಗಾಗಿ ಒಂದ್ಯಾರಡ ಎಕ್ಸ್ಟ್ರಾ ಸ್ಟೆಪಣಿ ಇರಲಿ ಅಂತ ಒಂದ ಫೈಬರದ್ದ ಇನ್ನೊಂದ ಥ್ರೀ ಪೀಸ್ ಆಕೇಜನಲ್ ಮಾಡಿಸಿದೆ. ಹಂಗ ಸಂಸಾರ

ಶುರು ಆದ ಮ್ಯಾಲೆ ನನ್ನ ಮತ್ತ ನನ್ನ ಹೆಂಡತಿ ನಡಕ ರಾತ್ರಿ ಮಲ್ಕೊಂಡಾಗ ಸಿಕ್ಕೊಂಡ ಒಂದ್ಯಾರಡ ಚಸ್ಮಾ ಅಕಾಲಿಕ ನಿಧನ ಹೊಂದಿದಾಗ ಒಂದಿಷ್ಟ ಹೊಸಾವು ಮಾಡಸಿದ್ದ ಬ್ಯಾರೆ ಮತ್ತ.

ನನ್ನ ಬುಡಕ ಚಸ್ಮಾ ಸಿಕ್ಕರ ಬರೇ ಗ್ಲಾಸ್ ಒಡಿತಿದ್ವು ಆದರ ನನ್ನ ಹೆಂಡತಿ ಬುಡಕ ಸಿಕ್ಕರ ಮೆಟಲ್ ಫ್ರೇಮ್ ಸಹಿತ ಬೆಂಡ್ ಆಗಿ ಚಸ್ಮಾ ಅನ್ನೋದ ಹೇರಪಿನ್ ಆಗ್ತಿರ್ತಿತ್ತ. ಹಂಗ ಆದೋಗೊಮ್ಮೆ ಅಕಿ 'ರ್ರಿ, ಮಲ್ಕೊಬೇಕಾರ ಕಳದ ಮಲ್ಕೋರಿ' ಅಂತ ಬೈಯೋಕಿ. ಅಲ್ಲಾ ತಪ್ಪ ನಂದ ಬಿಡ್ರಿ, ನಾ ರಾತ್ರಿನೂ ಹೆಂಡತಿ ಛಂದ ಕಾಣಲಿ ಅಂತ ಚಸ್ಮಾ ಹಾಕ್ಕೊಂಡ ಮಲ್ಕೋಳೊದ ನಂದ ತಪ್ಪ?

ಮೊನ್ನೆ ಮೂರು ವರ್ಷದ ಹಿಂದ ಯಾಕೊ ಕಣ್ಣ ಒಂಥರಾ ಆಗಲಿಕತ್ತು, ಹಂಗ ನಾ ಕಣ್ಣ ತೋರಸಲಾರದ ಎಂಟ ವರ್ಷ ಆಗಲಿಕ್ಕೆ ಬಂದಿತು ಹಿಂಗಾಗಿ ಒಮ್ಮೆ ಚೆಕ್ ಮಾಡಿಸಿದರ ನಂಬರ ಮತ್ತ ಜಾಸ್ತಿ ಆಗಿತ್ತ. ತೊಗೊ ಮತ್ತ ಮೂರು ಚಸ್ಮಾ ಬದಲಾಯಿಸಿದೆ. ಹಂಗ ಹೆಂಡ್ತಿ 'ನಿಮಗ ರೊಕ್ಕ ಜಾಸ್ತಿ ಆಗೇದ, ಮೂರ ಮೂರ ಯಾಕ ಮಾಡಸ್ತಿರಿ?' ಅಂದರು ನಾ ಏನ ಕೇಳಲಿಲ್ಲಾ. ಅದರಾಗ ಈ ಸರತೆ ಮೂರ ಅಡ್ನಾಡಿ ಆಗ್ತದ ಅಂತ ಒಂದ 'ನಂಬರಿನ ಗಾಗಲ್' ಬ್ಯಾರೆ ಮಾಡಸಿದೆ. ಒಟ್ಟ ನಾಲ್ಕ ಚಸ್ಮಾ ಇಟಗೊಂಡ ಸಂಸಾರ ನಡಸಿದ್ದೆ.

ಈಗ ಒಂದ ತಿಂಗಳದಿಂದ ಯಾಕೊ ಒಮ್ಮಿಂದೊಮ್ಮಿಲೆ ನಾ ಓದಬೇಕಾರ ಸರಿ ಕಾಣಲಾರದಂಗ ಆತ, ಹಂಗ ಚಸ್ಮಾ ತಗದರ ಕರೆಕ್ಟ ಕಾಣಲಿಕತ್ತ. ನಾ 'ಏ ನಲವತ್ತ ದಾಟಿದ ಮ್ಯಾಲೆ ಕಣ್ಣ ಚಿಗುರಿದ್ವು ಕಾಣ್ತದ' ಅಂತ ಖುಶ್ ಆಗಿದ್ದೆ ಆದರ ಬರಬರತ ತಲಿ ದಿಮ್ಮ್ ಅನ್ನಲಿಕತ್ತ. ಇದೇನೋ ಲಫಡಾ ಆಗೇದ ಅಂತ ಒಂದ ವಾರದ ಹಿಂದ ಮತ್ತ ಕಣ್ಣಿನ ಡಾಕ್ಟರ ಕಡೆ ಹೋದರ 'ನಿಮಗ ನಲವತ್ತ ದಾಟತ, ಈಗ ರೀಡಿಂಗ್ ಗ್ಲಾಸ್ ಬಂದದ... ಬಟ್ ಆಲರೆಡಿ ಲಾಂಗ್ ಡಿಸ್ಟನ್ಸ ವಿಜನ್ ಪ್ರಾಬ್ಲೆಮ್ ಬ್ಯಾರೆ ಅದ, ಹಿಂಗಾಗಿ ನೀವು ಈಗ ಪ್ರೊಗ್ರೆಸ್ಸಿವ್ ಗ್ಲಾಸ್ ತೊಗೊಬೇಕು' ಅಂತ ಹೊಸಾ ನಂಬರ ಬರದ ಕೊಟ್ಟರು. ಏನ್ಮಾಡ್ತೀರಿ ಕಿಮ್ಮತ್ತಿನ್ವು ಮನ್ಯಾಗ ನಾಲ್ಕ ಚಸ್ಮಾ ಅವ ಈಗ ಮತ್ತ ಹೊಸಾ ನಂಬರ.

ನನ್ನ ಹೆಂಡತಿಗೆ ಈ ಸುದ್ದಿ ಗೊತ್ತಾತ ನೋಡ್ರಿ ಅಕಿ ತಲಿಕೆಟ್ಟ 'ಈ ಸರತೆ ಏನರ ಮೂರ ನಾಲ್ಕ ಚಸ್ಮಾ ಮಾಡಿಸಿದರ ನೋಡ್ರಿ' ಅಂತ ಬೈದ ನಿನ್ನೆ ಒಂದ ಚಸ್ಮಾ ಮಾಡಿಸಿಗೊಂಡ ಬಂದ್ಲು. ಅದರಾಗ ನಾ ಪ್ರತಿ ಸರತೆ ಚಸ್ಮಾ ನಂಬರ ಚೇಂಜ್ ಆದಾಗೊಮ್ಮೆ ಹೊಸಾ ಫ್ರೇಮ ತೊಗೊಳೊಂವಾ, ಹಿಂಗಾಗಿ ಈಗ ಮತ್ತೊಂದ ಹೊಸಾ ಫ್ರೇಮ್ ಬಂತ.

ಈಗ ಮನಿ ಒಳಗ ಏನಿಲ್ಲಾ ಅಂದರು ಒಂದ 8-10 ಚಸ್ಮಾ ಅವ, ಅವೇಲ್ಲಾ ಇನ್ಮುಂದ ಕಣ್ಮರೆ ಆಗ್ತಾವ. ಏನ್ಮಾಡ್ತೀರಿ? ಹಳೆ ಚಸ್ಮಾ ಸೆಕೆಂಡ ಹ್ಯಾಂಡ ಯಾರರ ತೊಗೊತಾರ ಏನ ಕೇಳ್ರಿ ಅಂತ ನನ್ನ ಹೆಂಡತಿ ಹೇಳ್ಯಾಳ. ಯಾರಿಗರ ಬೇಕಾರ ಹೇಳ್ರಿ.. ಎಲ್ಲಾ ದೂರ ದೃಷ್ಟಿ ಇದ್ದದ್ವ ಮತ್ತ. ಹಂಗ ಗ್ಲಾಸ್ ನಂಬರ ಸೆಟ್ ಆಗಲಿಲ್ಲಾ ಅಂದರೂ ಫ್ರೇಮ್ ತೊಗೊರಿ.. ಅಲ್ಲಾ, ನೋಡಿ ಕೊಡ್ರಿ, ಅಕೇನ ಇಷ್ಟ ಕೊಡ ಅಂತ ಗಂಟ ಬಿಳೋಕಿ ಅಲ್ಲಾ.

ಅನ್ನಂಗ ಇನ್ನೊಂದ ಹೇಳೋದ ಮರತೆ ನಾ ಚಸ್ಮಾಕ್ಕ ಬಡದಷ್ಟ ರೊಕ್ಕಾ ಫ್ಯಾಮಿಲಿ ಪ್ಲ್ಯಾನಿಂಗ ಮಾಡಲಿಕ್ಕೂ ಬಡದಿಲ್ಲಾ, ಆದರೂ ಮಕ್ಕಳ ಮಾತ್ರ ಇವತ್ತಿಗೂ ಬರೇ ಎರಡ ಅವ. ಆದರ ಈ ಸುಡಗಾಡ ಚಸ್ಮಾ ಹನ್ನೆರಡ ಆದ್ವು.